ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾರತಕ್ಕೆ ಚಿನ್ನದ ಕಾಣಿಕೆ ಕೊಟ್ಟ ಪ್ರವೀಣ್

ಪ್ಯಾರಾಲಿಂಪಿಕ್ಸ್

ಪ್ಯಾರಿಸ್ (ಪಿಟಿಐ/ಎಎಫ್‌ಪಿ): ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಖಾತೆಗೆ ಮತ್ತೊಂದು ಚಿನ್ನದ ಪದಕ ಸೇರಿತು. ಶುಕ್ರವಾರ ಪುರುಷರ ಹೈಜಂಪ್‌ನಲ್ಲಿ ಪ್ರವೀಣ್ ಕುಮಾರ್ ಅವರು ಚಿನ್ನದ ಸಾಧನೆ ಮಾಡಿದರು. ಇದರೊಂದಿಗೆ ಭಾರತವು ಜಯಿಸಿದ ಪದಕಗಳ ಸಂಖ್ಯೆಯು ಒಟ್ಟು 26ಕ್ಕೇರಿತು. ಕಳೆದ ಸಲ ಟೋಕಿಯೊದಲ್ಲಿ ನಡೆದಿದ್ದ ಪ್ಯಾರಾಲಿಂಪಿಕ್ಸ್‌ನಲ್ಲಿ ಪ್ರವೀಣ್‌ಕುಮಾರ್, ಬೆಳ್ಳಿ ಜಯಿಸಿದ್ದರು.

ಚಿನ್ನ

ಪ್ರವೀಣ್‌ಕುಮಾರ್
ಪುರುಷರ ಹೈಜಂಪ್ (ಟಿ64) ಎತ್ತರ: **2.08** ಮೀ



– ಎಕ್ಸ್ ಚಿತ್ರ



PARIS 2024

ಹರ್ವಿಂದರ್, ಪ್ರೀತಿ ಧ್ವಜಧಾರಿಗಳು

ಆರ್ಚರಿಯಲ್ಲಿ ಚಿನ್ನದ ಪದಕ ಗಳಿಸಿರುವ ಹರ್ವಿಂದರ್ ಸಿಂಗ್ ಮತ್ತು ಅಥ್ಲೆಟಿಕ್ಸ್‌ನಲ್ಲಿ ಪದಕ ಸಾಧನೆ ಮಾಡಿರುವ ಪ್ರೀತಿ ಪಾಲ್ ಅವರು ಪ್ಯಾರಾಲಿಂಪಿಕ್ಸ್ ಮುಕ್ತಾಯ ಸಮಾರಂಭದಲ್ಲಿ ಭಾರತದ ಧ್ವಜಧಾರಿಗಳಾಗಲಿದ್ದಾರೆ.

ಭಾರತದ ಪದಕ ಸಾಧನೆ ಚಿನ್ನ: 6 ಬೆಳ್ಳಿ: 9 ಕಂಚು: 11 ಒಟ್ಟು: 26


ಇನ್ನಷ್ಟು ಸುದ್ದಿಗಳು 14


‘ಕುಸಿಯುತ್ತಿದೆ ಗಾಳಿಯ ಗುಣಮಟ್ಟ’

ವಿಶ್ವ ಆರೋಗ್ಯ ಸಂಸ್ಥೆ ನಿಗದಿಪಡಿಸಿದ ಸುರಕ್ಷಿತ ಗಾಳಿಯ ಗುಣಮಟ್ಟಕ್ಕಿಂತ ಬೆಂಗಳೂರು, ಮಂಗಳೂರು ಮತ್ತು ಮೈಸೂರಿನಲ್ಲಿ ಗಾಳಿಯು ಹಲವು ಪಟ್ಟು ಹೆಚ್ಚು ಕಲುಷಿತಗೊಂಡಿದೆ ಎಂದು ಗ್ರೀನ್‌ಪೀಸ್ ಹೇಳಿದೆ. ಗಾಳಿಯ ಗುಣಮಟ್ಟ ಸುಧಾರಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳದೇ ಇರುವುದರಿಂದ ಈ ನಗರಗಳಲ್ಲಿ ಸ್ಥಿತಿ ಬಿಗಡಾಯಿಸಿದೆ ಎಂದು ಗ್ರೀನ್‌ಪೀಸ್ ತನ್ನ ‘ಸ್ಪೇರ್ ದಿ ಏರ್–2’ ವರದಿಯಲ್ಲಿ ಕಳವಳ ವ್ಯಕ್ತಪಡಿಸಿದೆ

- ಈ ಮೂರೂ ನಗರಗಳಲ್ಲಿ ಪ್ರತಿ ಘನ ಮೀಟರ್ ಗಾಳಿಯಲ್ಲಿ 2.5 ಮೈಕ್ರಾನ್ ಗಾತ್ರದ ಮಾಲಿನ್ಯಕಾರಕ ಕಣಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ
- 10 ಮೈಕ್ರಾನ್ ಗಾತ್ರದ ಮಾಲಿನ್ಯಕಾರಕ ಕಣಗಳ ಸಂಖ್ಯೆಯೂ ವಿಪರೀತ ಎನಿಸುವಷ್ಟು ಏರಿಕೆಯಾಗಿದೆ

ಪ್ರತಿ ಘನ ಮೀಟರ್‌ನಲ್ಲಿ ಇರುವ ಮಾಲಿನ್ಯಕಾರಕ ಕಣಗಳು
(ಮೈಕ್ರೊಗ್ರಾಂಗಳಲ್ಲಿ)





ಬೆಂಗಳೂರಿಗೆ ನಿರ್ಮಾಣ ಚಟುವಟಿಕೆಯೇ ಕಂಟಕ

2007ರ ವೇಳೆಯಲ್ಲಿ ಬೆಂಗಳೂರಿನ ಗಾಳಿಯ ಗುಣಮಟ್ಟ ಹದಗೆಡಲು ಬಹುದೊಡ್ಡ ಕಾರಣವಾಗಿದ್ದದ್ದು ವಾಹನಗಳಿಂದ ಹೊರಬರುವ ಹೊಗೆ. ಆದರೆ 2020ರ ವೇಳೆಗೆ ಅಧ್ಯಯನ ನಡೆಸಿದಾಗ ನಿರ್ಮಾಣ ಚಟುವಟಿಕೆ ಮತ್ತು ರಸ್ತೆಯಲ್ಲಿನ ದೂಳಿನ ಕಣಗಳಿಂದಲೇ ಗಾಳಿ ಅತಿಹೆಚ್ಚು ಕಲುಷಿತವಾಗುತ್ತಿದೆ. ಈಚಿನ ವರ್ಷಗಳಲ್ಲಿ ತ್ಯಾಜ್ಯ ಸುಡುವುದು ಹೆಚ್ಚಾಗಿರುವುದರಿಂದಲೂ ಗಾಳಿಯ ಗುಣಮಟ್ಟ ಕುಸಿಯುತ್ತಿದೆ ಎಂದು ವರದಿ ಹೇಳಿದೆ


ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
ಗಣೇಶ ಚತುರ್ಥಿ ಸೇಲ್
UPTO 20% INSTANT CASH BACK
Take home your favourite LED TELEVISION, REFRIGERATOR, WASHING MACHINES & AIR CONDITIONER
UPTO 7,500/- CASH VOUCHER ON BAJAJ FINSERV PURCHASE
LOWEST DOWNPAYMENT
LOWEST EMI
LONG TENURE EMI
EMI CARD EASY FINANCE
AVAIL UPTO 36 MONTHS LONG TENURE EMI
SONY BRAVIA 7 XR MINI LED
75 XR70
EMI ₹7,500/-
GET INSTANT CASH BACK UPTO ₹12,500/- ON CC & DC
SAMSUNG UHD/4K
55 UHD/4K
EMI ₹2,999/-
GET INSTANT CASH BACK UPTO ₹6,000/- ON CC & DC
Haier OLED TV
FREE ROBO VACCUM CLEANER WORTH ₹19,990/-
65 OLED TV
SPECIAL PRICE ₹1,49,990/-
INSTANT CASH BACK ON CC & DC ₹20,000/-
HOT DEAL
EFFECTIVE PRICE ₹1,29,990/-
Haier | SAMSUNG SIDE BY SIDE REFRIGERATOR
INSTANT CASH BACK UPTO ₹10,000/- ON CC & DC
EMI ₹3,990/- ONWARDS
Haier Whirlpool SAMSUNG BIGGER CAPACITY FROST FREE REFRIGERATOR
INSTANT CASH BACK UPTO ₹5,000/- ON CC & DC
EMI ₹2,990/- ONWARDS
Haier FROST FREE REFRIGERATOR 235 Ltr.
INSTANT CASH BACK UPTO ₹1,500/- ON CC & DC
SPECIAL PRICE ₹23,490/-
Haier UHD/4K Google TV
HOT DEAL
55 UHD/4K
SPECIAL PRICE ₹41,990/-
GET INSTANT CASH BACK UPTO ₹3,000/- ON CC & DC
BPL QLED TV
HOT DEAL
HOME THEATRE TV BY ONKYO
SPECIAL PRICE
43 ₹33,490/-
32 ₹16,990/-
UHD/4K
HOT DEAL
SPECIAL PRICE
55 ₹39,990/-
50 ₹36,990/-
43 ₹27,990/-
SAMSUNG FROST FREE REFRIGERATOR 236 Ltr.
INSTANT CASH BACK UPTO ₹2,000/- ON CC & DC
EMI ₹1,999/-
Whirlpool FROST FREE REFRIGERATOR 235 Ltr.
INSTANT CASH BACK UPTO ₹1,500/- ON CC & DC
SPECIAL PRICE ₹23,490/-
Godrej FROST FREE REFRIGERATOR 233 Ltr.
INSTANT CASH BACK UPTO ₹2,000/- ON CC & DC
EMI ₹1,690/-
Haier FRONT LOAD WASHING MACHINE 10.5 KG
INSTANT CASH BACK UPTO ₹10,000/- ON CC & DC
EMI ₹1,994/- ONWARDS
IFB FRONT LOAD WASHING MACHINE 8 KG
INSTANT CASH BACK UPTO ₹5,000/- ON CC & DC
EMI ₹2,490/- ONWARDS
SAMSUNG FRONT LOAD WASHING MACHINE 9 KG
INSTANT CASH BACK UPTO ₹5,000/- ON CC & DC
EMI ₹2,990/- ONWARDS
FRONT LOAD WASHING MACHINE
HOT DEAL
7.0 KG ₹28,990/-
8.0 KG ₹32,990/-
9.0 KG ₹35,990/-
UPTO ₹6,000/- ADDITIONAL CASHBACK
BPL IN-BUILT HEATER TOP LOAD WASHING MACHINE 7.0 KG
FREE MIXER GRINDER
EMI ₹1,590/-
Haier Whirlpool Godrej BPL
SEMI-AUTOMATIC WASHING MACHINE 7.0 KG
SPECIAL PRICE ₹8,990/- ONWARDS
GANESHA FESTIVAL COMBO OFFERS
MIXER COMBO
COMBO PRICE ₹4,590/- OFFER PRICE ₹2,450/- Discount 47%
INDUCTION COMBO
COMBO PRICE ₹4,290/- OFFER PRICE ₹2,100/- Discount 51%
CHIMNEY COMBO
COMBO PRICE ₹22,088/- OFFER PRICE ₹9,900/- Discount 55%
HOTTEST DEAL
RO WATER PURIFIER
SPECIAL PRICE ₹13,490/-
HOTTEST DEAL
WET GRINDER
SPECIAL PRICE ₹3,690/-
HOTTEST DEAL
LPG GAS STOVES
2 BURNER ₹1,999/-
3 BURNER ₹3,599/-
4 BURNER ₹4,499/-
GANESHA FESTIVAL SMART PHONE OFFERS
Buy iPhone 15 Series
FREE STROLLEY WORTH ₹6,999/-
OR WIRELESS POWERBANK WORTH ₹2,999/-
OR FREE SMART WATCH WORTH ₹6,990/-
Buy SAMSUNG S24 ULTRA
Get WIRELESS POWERBANK WORTH ₹2,999/-
+ BRANDED SMART WATCH WORTH ₹6,999/-
@ ₹499/-* ONLY
Buy mi Redmi
Get FREE STEP OUT BAG WORTH ₹499/-
OR Get SMART WATCH WORTH ₹6,999/- @ ₹499/-*
Buy ONEPLUS
Get NECKBAND FREE
OR Get SMART WATCH WORTH ₹6,999/- @ ₹499/-*
SMART WATCH
Starts From ₹999/- ONWARDS
GANESHA festival Offer
SMART WATCH WORTH ₹6,999/-
+
TWS WORTH ₹2,999/-
@ ₹1,990/- ONLY
ಚನ್ನಪಟ್ಟಣ PH: 9036593446 / 9036593447
ಶಿರಸಿ PH: 9591997260, 9731306569
ಕೋಲಾರ 9731306635/9731306574 08152-467397
ಬೆಳಗಾವಿ 0831 4215241 / 42, 9731306717 / 9731306713
ಬಳ್ಳಾರಿ Ph: 08392-242330 / 337, 9731306742 / 9731331684
ಚಿತ್ರದುರ್ಗ 08194-224224, 9686446883
ದಾವಣಗೆರೆ 08192-233626/27, 9731306633 / 6712
ತಿಪಟೂರು Ph: 08134-250104/304, 9686680758 / 9731306552
ತುಮಕೂರು Ph: 0816-4021031, 9731306549 / 9591997270
ಕುಣಿಗಲ್ 08132-221901 / 221902 9731306663
ಯಾದಗಿರಿ Ph: 08173/251779/759 8861002260
ಮಂಡ್ಯ 08232406100/08232406200 9513599861 / 7349609274
ಗೋಣಿಕೊಪ್ಪ 7702770314/7702770353
ಕೊಪ್ಪಳ 08539 221931/32, 9731306645
ಬೀದರ್ 08482-226800/01, 9513499863
ಕಲಬುರ್ಗಿ Ph 08472-227556, 9108023816
ಕೆ.ಆರ್. ನಗರ 08223295855/66 9731306715
ಚನ್ನರಾಯಪಟ್ಟಣ 08176253312 / 295256, 9513499855
ವಿಜಯಪುರ 9353907691 / 9606865996
ಸಿಂಧನೂರ್ 08535-222254, 9731306673 / 9731306672
ಕುಶಾಲನಗರ 9591997262/9591997263
ಚಿಕ್ಕಮಗಳೂರು Ph: 08262-239944 / 45, 9963998358, 9963998365
ಶಹಾಪೂರ 9513499858 08479-240565,244565
ತೊಕ್ಕೊಟ್ಟು 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph: 0821-2343705/6, 9731306587
ಹಿನ್‌ಕಲ್ Ph. 0821-4852733 / 4851773, 8861007297
ಉದಯಗಿರಿ Ph: 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the finance companies • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

'ನಮ್ಮ ಬೆಂಗಳೂರು ಪ್ರಶಸ್ತಿ'ಗೆ ಆಯ್ಕೆ ಪ್ರಕ್ರಿಯೆ ಆರಂಭ

ಬೆಂಗಳೂರು: ನಮ್ಮ ಬೆಂಗಳೂರು ಪ್ರತಿಷ್ಠಾನ 14ನೇ ಆವೃತ್ತಿಯ 'ನಮ್ಮ ಬೆಂಗಳೂರು ಪ್ರಶಸ್ತಿ 2024'ಕ್ಕೆ ನಾಮ ನಿರ್ದೇಶನ ಪ್ರಕ್ರಿಯೆ ಪ್ರಾರಂಭಿಸಿದೆ.

ವರ್ಷದ ನಮ್ಮ ಬೆಂಗಳೂರು ನಾಗರಿಕ, ಉದಯೋನ್ಮುಖ ತಾರೆ, ಸಾಮಾಜಿಕ ಉದ್ಯಮಿ ಹಾಗೂ ಉತ್ತಮ ಸರ್ಕಾರಿ ಅಧಿಕಾರಿ ವಿಭಾಗದಲ್ಲಿ ತಲಾ ಒಬ್ಬರಿಗೆ ಪ್ರಶಸ್ತಿ ನೀಡಲಾಗುತ್ತದೆ. ಒಬ್ಬರಿಗೆ 'ಜೀವಮಾನ ಸಾಧನೆ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತದೆ. ನಾಮನಿರ್ದೇಶನಕ್ಕೆ ಅ. 31ರವರೆಗೆ ಅವಕಾಶವಿದೆ. www.nammabengaluru awards.org ಲಿಂಕ್ ಮೂಲಕ ನಾಮ ನಿರ್ದೇಶನ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಬಿಎಂಟಿಸಿ ಚಾಲಕರು ಮತ್ತು ನಿರ್ವಾಹಕರಿಗೆ ವಿಶೇಷ ತರಬೇತಿ

ಅಪಘಾತ ತಗ್ಗಿಸಲು ಪೊಲೀಸರಿಂದ ಪಾಠ

• ಕೆ.ಎಸ್.ಸುನಿಲ್



ಬಿಎಂಟಿಸಿ ಬಸ್ ಚಾಲಕರು, ನಿರ್ವಾಹಕರಿಗೆ ಸಂಚಾರ ವಿಭಾಗದ ಇನ್‌ಸ್ಪೆಕ್ಟರ್ ಅನಿಲ್ ಕುಮಾರ್ ಪಿ. ಗ್ರಾಮ ಪುರೋಹಿತ್ ತರಬೇತಿ ನೀಡಿದರು.

ಬೆಂಗಳೂರು: ಬಿಎಂಟಿಸಿ ಬಸ್‌ಗಳಿಂದ ಸಂಭವಿಸುವ ಅಪಘಾತಗಳನ್ನು ತಗ್ಗಿಸುವ ಉದ್ದೇಶದಿಂದ ನಗರ ಸಂಚಾರ ಪೊಲೀಸ್ ವಿಭಾಗದಿಂದ ಚಾಲಕರು ಹಾಗೂ ನಿರ್ವಾಹಕರಿಗೆ ವಿಶೇಷ ತರಬೇತಿ ನೀಡಲಾಗುತ್ತಿದೆ. 9 ತಿಂಗಳಿನಿಂದ ನೀಡುತ್ತಿರುವ ತರಬೇತಿ ಪರಿಣಾಮ ಅಪಘಾತಗಳ ಸಂಖ್ಯೆಯಲ್ಲಿ ಅಲ್ಪ ಪ್ರಮಾಣದ ಇಳಿಕೆಯಾಗಿದೆ.

ಸಂಚಾರ ಪೊಲೀಸ್ ವಿಭಾಗದ ಅಂಕಿ–ಅಂಶಗಳ ಪ್ರಕಾರ, ಮೂರು ವರ್ಷಕ್ಕೆ ಹೋಲಿಕೆ ಮಾಡಿದರೆ, ಪ್ರಸಕ್ತ ವರ್ಷ (ಆಗಸ್ಟ್‌ವರೆಗೆ) ಬಿಎಂಟಿಸಿ ಬಸ್‌ಗಳಿಂದ 19 ಅಪಘಾತಗಳು ಸಂಭವಿಸಿವೆ. ಇದು ಸಾರಿಗೆ ಇಲಾಖೆಗೆ ಸ್ವಲ್ಪ ಸಮಾಧಾನ ಉಂಟುಮಾಡಿದೆ. 12 ಸಾವಿರ ಸಿಬ್ಬಂದಿಗೆ ತರಬೇತಿ ನೀಡುವ ಗುರಿ ಹೊಂದಿದ್ದು, 8 ಸಾವಿರಕ್ಕೂ ಹೆಚ್ಚು ಮಂದಿ ತರಬೇತಿ ನೀಡಲಾಗಿದೆ.

ಬಿಎಂಟಿಸಿ ಬಸ್ ಚಾಲಕರು ಮತ್ತು ನಿರ್ವಾಹಕರು ನಿತ್ಯ 12 ತಾಸು ಕೆಲಸ ಮಾಡುತ್ತಾರೆ. ಕೆಲವರು ರಾಮನಗರ, ಮಂಡ್ಯ, ತುಮಕೂರು, ಮೈಸೂರಿನಿಂದಲೂ ಬಂದು ಕರ್ತವ್ಯಕ್ಕೆ ಹಾಜರಾಗುತ್ತಾರೆ.

ಸಂಚಾರ ದಟ್ಟಣೆ ಮಧ್ಯೆ ಕೆಲಸ ಮಾಡಿ ಚಾಲಕರು ದೈಹಿಕ ಮತ್ತು ಮಾನಸಿಕವಾಗಿ ದಣಿದಿರುತ್ತಾರೆ. ಜನದಟ್ಟಣೆ ಸ್ಥಳ ಹಾಗೂ ತಿರುವುಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿದ್ದ-ವು. ಇದನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸಂಚಾರ ಪೊಲೀಸರು ಒಂಬತ್ತು ತಿಂಗಳಿನಿಂದ ನಿತ್ಯ 50 ಮಂದಿಯಂತೆ ತರಬೇತಿ ನೀಡುತ್ತಿದ್ದು, ಸೇವ್ ಲೈಫ್ ಫೌಂಡೇಶನ್ ಸಂಸ್ಥೆ ಸಹ ಈ ಕಾರ್ಯಕ್ಕೆ ಕೈ ಜೋಡಿಸಿದೆ.

ಸುರಕ್ಷಿತ ಬಸ್ ಚಾಲನೆ ಕುರಿತು ಚಾಲಕ ಮತ್ತು ನಿರ್ವಾಹಕರಿಗೆ ಸಂಚಾರ ವಿಭಾಗದ ಡಿಸಿಪಿ, ಎಸಿಪಿ ಮತ್ತು ಇನ್‌ಸ್ಪೆಕ್ಟರ್‌ಗಳು ತರಬೇತಿ ನೀಡುತ್ತಿದ್ದಾರೆ. ಸಿ.ಸಿಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ಅಪಘಾತ ದೃಶ್ಯಾವಳಿಯನ್ನು ಪ್ರದರ್ಶಿಸಿ, ಅಪಾಯಕಾರಿ ಚಾಲನಾ ವಿಧಾನದ ಕುರಿತು ವಿವ-ರಿಸಲಾಗುತ್ತಿದೆ. ಅಪಘಾತದಿಂದಾಗಿ ಸಂತ್ರಸ್ತ ಕುಟುಂಬಗಳು ಯಾವ ರೀತಿ ಸಂಕಷ್ಟಕ್ಕೆ ಸಿಲುಕುತ್ತವೆ ಎಂಬುದನ್ನು ಉದಾಹರಣೆ ಸಹಿತ ಹೇಳಲಾಗುತ್ತದೆ.

'ಅಪಘಾತಕ್ಕೆ ಕಾರಣವೇನು? ಚಾಲಕನ ನಿರ್ಲಕ್ಷ್ಯವೇ? ಅವೈಜ್ಞಾನಿಕ ರಸ್ತೆ ಅಥವಾ ಗುಂಡಿ ಬಿದ್ದ ರಸ್ತೆ ಕಾರಣವೇ? ಅತಿಯಾದ ವೇಗವೇ? ಎಂಬುದರ ಬಗ್ಗೆ ತರಬೇತಿ ವೇಳೆ ವಿಶ್ಲೇಷಣೆ ಮಾಡಲಾಗುತ್ತದೆ. ಸುರಕ್ಷಿತವಾಗಿ ವಾಹನ ಚಾಲನೆ ಮಾಡುವುದು ಹೇಗೆ? ನಿದ್ದೆ ಮಂಪರಿನಲ್ಲಿ ಏನು ಮಾಡಬೇಕು? ಬಸ್ ನಿಲ್ದಾಣಗಳಲ್ಲಿ ಯಾವ ಸ್ಥಳದಲ್ಲಿ ಬಸ್‌ಗಳನ್ನು ನಿಲ್ಲಿಸಬೇಕು? ಪ್ರಯಾಣಿಕರ ಜತೆ ಹೇಗೆ ವರ್ತಿಸಬೇಕು? ಎಂಬುದರ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ' ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್ ವಿವರಿಸಿದರು.

'ಬಿಎಂಟಿಸಿ ಬಸ್ ಅಪಘಾತಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾದಚಾರಿಗಳು ಮೃತಪಟ್ಟಿದ್ದಾರೆ. ಕೆಲವೊಮ್ಮೆ ದ್ವಿಚಕ್ರ ವಾಹನಗಳು ಬಸ್‌ಗೆ ಡಿಕ್ಕಿ ಹೊಡೆದಿರುವ ಉದಾಹರಣೆಗಳೂ ಇವೆ. ಚಾಲಕರು ಎಚ್ಚರಿಕೆಯಿಂದ ವಾಹನ ಚಾಲನೆ ಮಾಡಿದರೆ ಅಪಘಾತಗಳನ್ನು ತಪ್ಪಿಸಬಹುದು' ಎಂದು ಹೇಳಿದರು.

'ಸಂಚಾರ ವಿಭಾಗದ ಪೊಲೀಸ್ ಸಿಬ್ಬಂದಿ ಸಹಕಾರದೊಂದಿಗೆ ಬಿಎಂಟಿಸಿ ಚಾಲಕರು, ನಿರ್ವಾಹಕರಿಗೆ ನೀಡುತ್ತಿರುವ ತರಬೇತಿ ಪ್ರಯೋಜನಕಾರಿಯಾಗಿದೆ. ಅಪಘಾತಗಳ ಸಂಖ್ಯೆ ಕಡಿಮೆ ಆಗುತ್ತಿರುವುದು ಸಮಾಧಾನಕರ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್ ತಿಳಿಸಿದರು.

ತಿಂಗಳು	ತರಬೇತಿ ಪಡೆದ ಸಿಬ್ಬಂದಿ
ಡಿಸೆಂಬರ್	1020
ಜನವರಿ	1129
ಫೆಬ್ರುವರಿ	1083
ಮಾರ್ಚ್	1086
ಏಪ್ರಿಲ್	814
ಮೇ	847
ಜೂನ್	890
ಜುಲೈ	1020
ಆಗಸ್ಟ್	980
ಒಟ್ಟು	8869

ವರ್ಷ	ಅಪಘಾತ ಸಂಖ್ಯೆ
2021	27
2022	37
2023	36
2024	(ಆಗಸ್ಟ್‌ವರೆಗೆ) 19



ಬಿಎಂಟಿಸಿ ಬಸ್ ಚಾಲಕರು, ನಿರ್ವಾಹಕರಿಗೆ ನೀಡುತ್ತಿರುವ ತರಬೇತಿ ಫಲ ನೀಡುತ್ತಿದೆ. ಅಪಘಾತಗಳು ಕೊಂಚ ಕಡಿಮೆ ಆಗಿವೆ

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಕಮಿಷನರ್ (ಸಂಚಾರ)

'ಅಪಘಾತ ತಪ್ಪಿಸಬಹುದು ಎಂದು ಅರಿವಾಗಿದೆ'

'ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿರುವ ಅಪಘಾತದ ದೃಶ್ಯಗಳನ್ನು ನೋಡಿದಾಗ, ಸ್ವಲ್ಪ ಎಚ್ಚರ ವಹಿಸಿದ್ದರೆ ಅಪಘಾತ ತಪ್ಪಿಸಬಹುದಿತ್ತು ಎನಿಸುತ್ತದೆ. ಅತಿ ವೇಗ ಮತ್ತು ಮೊಬೈಲ್‌ನಲ್ಲಿ ಮಾತನಾಡಿಕೊಂಡು ಚಾಲನೆ ಮಾಡುವುದರಿಂದಲೇ ಹೆಚ್ಚಿನ ಅಪಘಾತಗಳಾಗುತ್ತವೆ. ಕೆಲವೊಮ್ಮೆ ನಮ್ಮ ತಪ್ಪು ಇಲ್ಲದಿದ್ದರೂ ಬೇರೆ ವಾಹನಗಳು ವೇಗವಾಗಿ ಬಂದು ಡಿಕ್ಕಿ ಹೊಡೆದಿರುವ ಉದಾಹರಣೆ ಇದೆ. ನಗರದಲ್ಲಿ ಸಂಚಾರ ದಟ್ಟಣೆ ನಡುವೆ ಗುಂಡಿ ಬಿದ್ದ ರಸ್ತೆಯಲ್ಲಿ ವಾಹನ ಚಾಲನೆ ಮಾಡುವುದೇ ಸಾಹಸ' ಎಂದು ತರಬೇತಿ ಪಡೆದ ಚಾಲಕರೊಬ್ಬರು ಹೇಳಿದರು.

ಹಬ್ಬಕ್ಕೆ ಊರಿನತ್ತ ಜನ: ದಟ್ಟಣೆಯಲ್ಲಿ ಸಿಲುಕಿ ಹೈರಾಣ

ಬೆಂಗಳೂರು: ಗಣೇಶ ಹಬ್ಬಕ್ಕೆ ಜನರು ಊರಿಗೆ ಹೊರಟಿದ್ದರಿಂದ ನಗರದ ಪ್ರಮುಖ ಮಾರ್ಗಗಳಲ್ಲಿ ಶುಕ್ರವಾರ ಬೆಳಿಗ್ಗೆಯಿಂದಲೂ ವಾಹನ ದಟ್ಟಣೆ ತೀವ್ರವಾಗಿತ್ತು. ಇದರಿಂದ ವಾಹನ ಸವಾರರು ಹೈರಾಣಾದರು. ರಾತ್ರಿ ದಟ್ಟಣೆ ಕಂಡುಬಂತು. ತುಮಕೂರು ರಸ್ತೆ, ಮೈಸೂರು ರಸ್ತೆ, ಬಳ್ಳಾರಿ ರಸ್ತೆಯಲ್ಲಿ ವಿಪರೀತ ದಟ್ಟಣೆ ಕಂಡುಬಂತು. ನೆಲಮಂಗಲದ ಟೋಲ್ ಬಳಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಟೋಲ್ ದಾಟಲು ಸಾಕಷ್ಟು ಸಮಯ ಹಿಡಿಯಿತು ಎಂದು ಸವಾರರು ನೋವು ತೋಡಿಕೊಂಡರು.

'ಕಟ್ಟಡ ಕಾಮಗಾರಿ ಬಿಲ್ ಪಾವತಿಗೆ ಶೇ 5ರಷ್ಟು ಮೊತ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ನಿರ್ಮಾಣ ಕಾಮಗಾರಿಗಳ ಬಿಲ್ ಪಾವತಿಗೆ ಪ್ರತಿ ತಿಂಗಳು ಲಭ್ಯವಿರುವ ಅನುದಾನದಲ್ಲಿ ಶೇ 5ರಷ್ಟು ಮೊತ್ತ ಕಾಯ್ದಿರಿಸಲು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಸಮ್ಮತಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿಗಳ ಬಿಲ್‌ಗಳ ಪಾವತಿ ಸಹ ಸಾಮಾನ್ಯ ಬಿಲ್‌ಗಳ ಜ್ಯೇಷ್ಠತೆ ಅಡಿ 24 ತಿಂಗಳಷ್ಟು ವಿಳಂಬವಾಗುತ್ತಿದೆ. ಕಟ್ಟಡ ನಿರ್ಮಾಣ ಕಾಮಗಾರಿಗಳ ಬಿಲ್‌ಗಳನ್ನು 'ಅಗತ್ಯ' ಎಂದು ಪರಿಗಣಿಸಿ, ತ್ವರಿತವಾಗಿ ಪಾವತಿ ಮಾಡಬೇಕು ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಮೇ 7ರಂದು ಮನವಿ ಮಾಡಿತ್ತು.

ಇದನ್ನು ಪರಿಶೀಲಿಸಿದ ಮುಖ್ಯ ಆಯುಕ್ತರು, ಆಡಳಿತಾಧಿಕಾರಿಯವರ ಸಮ್ಮತಿ ಪಡೆಯಲು ಸೂಚಿಸಿದ್ದಾರೆ. ಅದರಂತೆ ಹಣಕಾಸು ವಿಭಾಗದ ವಿಶೇಷ ಆಯುಕ್ತರು, ಬಿಬಿಎಂಪಿ ಅನುದಾನದಲ್ಲಿ ಈ ಬಿಲ್ಲುಗಳನ್ನು ಜ್ಯೇಷ್ಠತಾ ಪಟ್ಟಿಯಲ್ಲಿ ಪಾವತಿಸಲು, ತಿಂಗಳಲ್ಲಿ ಶೇ 5ರಷ್ಟು ಮೊತ್ತ ಕಾಯ್ದಿರಿಸಲು ಆಡಳಿತಾಧಿಕಾರಿ-ಯವರ ಸಮ್ಮತಿ ಕೇಳಿದ್ದರು.

ಈ ಟಿಪ್ಪಣಿಗೆ, ಆಡಳಿತಾಧಿಕಾರಿ ಇದೀಗ ಸಮ್ಮತಿ ನೀಡಿದ್ದಾರೆ.

ಸುದ್ದಿ 2 ನಿಮಿಷ

ಮೀಸಲಾತಿ: ಬಿಹಾರ ಸರ್ಕಾರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ: ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಎಸ್‌ಸಿ, ಎಸ್‌ಟಿಗಳಿಗೆ ಇರುವ ಮೀಸಲಾತಿಯನ್ನು ಶೇ 50ರಿಂದ ಶೇ 65ಕ್ಕೆ ಹೆಚ್ಚಿಸಿದ್ದನ್ನು ರದ್ದು ಮಾಡಿ ಪಟ್ನಾ ಹೈಕೋರ್ಟ್ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಆರ್‌ಜೆಡಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಬಿಹಾರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.



ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗ-ಳಾದ ಜೆ.ಬಿ.ಪಾರ್ದಿವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ಮೀಸಲಾತಿ ಪ್ರಮಾಣ ಹೆಚ್ಚಿಸಿ ಬಿಹಾರ ಸರ್ಕಾರ ರೂಪಿಸಿರುವ ಕಾಯ್ದೆ ಸಂವಿಧಾನದ 14,15 ಮತ್ತು 16ನೇ ವಿಧಿಗಳಿಗೆ ವಿರುದ್ಧವಾಗಿದೆ' ಎಂದು ಪಟ್ನಾ ಹೈಕೋರ್ಟ್‌ನ ದ್ವಿಸದಸ್ಯ ಪೀಠ, ಮೀಸಲಾತಿ ಹೆಚ್ಚಳ ರದ್ದುಪಡಿಸಿ ಜೂನ್ 20ರಂದು ಆದೇಶಿಸಿತ್ತು.

ಪಟ್ನಾ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಜುಲೈ 29 ರಂದು ನಿರಾಕರಿಸಿತ್ತು.

ಈಗ, ಹೈಕೋರ್ಟ್ ಆದೇಶ ಪ್ರಶ್ನಿಸಿ ಆರ್‌ಜೆಡಿ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರ್ಧರಿಸಿದೆ.

ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ವಿವಿಧ ಸ್ಪರ್ಧೆ, 1700 ಮಂದಿ ಭಾಗಿ

ಬೆಂಗಳೂರು: ರಾಷ್ಟ್ರೀಯ ಬಾಹ್ಯಾಕಾಶ ದಿನದ ಪ್ರಯುಕ್ತ ಆನೇಕಲ್ ಪಟ್ಟಣದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ನಡೆದ ವಿವಿಧ ಸ್ಪರ್ಧೆಗಳಲ್ಲಿ 100ಕ್ಕೂ ಹೆಚ್ಚು ಶಾಲೆಗಳ 1,700 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್ ಛಬ್ಬಿ ಮಾತನಾಡಿ, 'ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ರಸಪ್ರಶ್ನೆ, ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆ, 3ಡಿ ಚಿತ್ರ ಸ್ಪರ್ಧೆ, ಬಾಹ್ಯಾಕಾಶ ಮಾದರಿ ಪ್ರದರ್ಶನ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಈ ಕಾರ್ಯಕ್ರಮ ಉಪಯುಕ್ತವಾಗಿದೆ. ಯುವ ಸಮುದಾಯ ವಿಜ್ಞಾನವನ್ನು ಚಟುವಟಿಕೆಗಳ ಮೂಲಕ ಕಲಿಯಬೇಕು. ಆಗ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಜ್ಞಾನ ಮತ್ತು ಅರ್ಥ ಮಾಡಿಕೊಳ್ಳುವ ಶಕ್ತಿ ಇನ್ನಷ್ಟು ಹೆಚ್ಚಾಗುತ್ತದೆ' ಎಂದು ತಿಳಿಸಿದರು.

ಭಾರತೀಯ ನೌಕಾದಳದ ಪೈಲೆಟ್ ಪಲ್ಲವಿ ಮಹೋಪಾತ್ರ ಮಾತನಾಡಿ, 'ವಿಜ್ಞಾನವನ್ನು ಪ್ರಾಯೋಗಿಕ ಜ್ಞಾನದೊಂದಿಗೆ ಕಲಿಯುವುದರಿಂದ ಜ್ಞಾನ ಹೆಚ್ಚಾಗುತ್ತದೆ' ಎಂದು ಹೇಳಿದರು.

ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಜನರಲ್ ಸುರೇಖಾ ಶೆಟ್ಟಿ ಮಾತನಾಡಿ, '8ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ನಡೆದ ಈ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದವರಿಗೆ ₹ 10 ಸಾವಿರ, ದ್ವಿತೀಯ ಸ್ಥಾನ ₹ 8 ಸಾವಿರ, ತೃತೀಯ ಸ್ಥಾನ ₹ 5 ಸಾವಿರ ನಗದು ಬಹುಮಾನ ನೀಡಲಾಗಿದೆ' ಎಂದು ಮಾಹಿತಿ ನೀಡಿದರು. ಇಸ್ರೊ ಮಿಷನ್ ವಿಜ್ಞಾನಿ ಮೂರ್ತಿ ರೆಮ್ಮಿಲಾ, ಕುಲಪತಿ ಪ್ರಿಸ್ಲಿ ಶಾನ್ ಭಾಗವಹಿಸಿದ್ದರು.

ಮೊಬೈಲ್ ಟ್ಯಾಂಕರ್ ವ್ಯವಸ್ಥೆ; ಪಿಒಪಿ ಮೂರ್ತಿಗಳ ವಿಸರ್ಜನೆಗೆ ಅವಕಾಶವಿಲ್ಲ

ಮೂರ್ತಿ ವಿಸರ್ಜನೆಗೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ವ್ಯಾಪ್ತಿಯಲ್ಲಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಲು ಕಲ್ಯಾಣಿಗಳನ್ನು ಬಿಬಿಎಂಪಿ ಸಜ್ಜುಗೊಳಿಸಿದ್ದು, ಮೊಬೈಲ್ ಟ್ಯಾಂಕರ್‌ಗಳೂ ವಾರ್ಡ್‌ಗಳಲ್ಲಿ ಸಂಚರಿಸಲಿವೆ.

ಮಹದೇಪುರ ವಲಯದಲ್ಲಿ 14 ಕಲ್ಯಾಣಿಗಳು, ಯಲಹಂಕದಲ್ಲಿ 10, ಆರ್‌.ಆರ್‌. ನಗರದಲ್ಲಿ ಏಳು, ಬೊಮ್ಮನಹಳ್ಳಿಯಲ್ಲಿ ಐದು, ದಕ್ಷಿಣದಲ್ಲಿ ಎರಡು, ಪೂರ್ವ, ಪಶ್ಚಿಮ ಹಾಗೂ ದಾಸರಹಳ್ಳಿ ವಲಯದಲ್ಲಿ ತಲಾ ಒಂದು ಕಲ್ಯಾಣಿಗಳನ್ನು ಮೂರ್ತಿ ವಿಸರ್ಜನೆಗೆ ಸಜ್ಜುಗೊಳಿಸಲಾಗಿದೆ.

ಎಂಟು ವಲಯಗಳಲ್ಲಿ 462 ಮೊಬೈಲ್ ಟ್ಯಾಂಕ್‌ಗಳನ್ನು ಸಿದ್ಧಮಾಡಲಾಗಿದ್ದು, ಪೂರ್ವದಲ್ಲಿ ಅತಿ ಹೆಚ್ಚು 138 ಮೊಬೈಲ್ ಟ್ಯಾಂಕರ್‌ಗಳು ಸಂಚರಿಸಲಿವೆ.

ದಕ್ಷಿಣ ವಲಯದ ಪದ್ಮನಾಭನಗರ ವ್ಯಾಪ್ತಿಯಲ್ಲಿರುವ ಯಡಿಯೂರು ಕೆರೆಯಲ್ಲಿರುವ ಕಲ್ಯಾಣಿಗೆ ಶುಕ್ರವಾರ ನೀರು ತುಂಬಿಸಲಾಯಿತು. ಶನಿವಾರದಿಂದ (ಸೆಪ್ಟೆಂಬರ್ 7) ಸೆ. 17ರವರೆಗೆ ಮೂರ್ತಿ ವಿಸರ್ಜಿಸಲು ಅವಕಾಶ ಕಲ್ಪಿಸಲಾಗಿದೆ.

ಮೊದಲ ಮೂರು ದಿನ ಹೆಚ್ಚು ಮೂರ್ತಿಗಳು ವಿಸರ್ಜನೆಯಾಗುವುದರಿಂದ, ಕಲ್ಯಾಣಿ ಬಹುತೇಕ ಭರ್ತಿಯಾಗಲಿದೆ. ಆದ್ದರಿಂದ ಸೆ.10ರಂದು ಶುಚಿಗೊಳಿಸುವ ಕೆಲಸ ಮಾಡಲಾಗುತ್ತದೆ. ಅಂದು ವಿಸರ್ಜನೆಗೆ ಅವಕಾಶ ಇರುವುದಿಲ್ಲ. ಸೆ.18ರಿಂದ ಯಡಿಯೂರು ಕೆರೆಯಲ್ಲಿ ವಿಸರ್ಜನೆಗೆ ಅವಕಾಶ ಇರುವುದಿಲ್ಲ. 2023ರಲ್ಲಿ 11 ದಿನಗಳಲ್ಲಿ 1.75 ಲಕ್ಷ ಮೂರ್ತಿಗಳನ್ನು ಈ ಕಲ್ಯಾಣಿಯಲ್ಲಿ ವಿಸರ್ಜನೆ ಮಾಡಲಾಗಿತ್ತು ಎಂದು ಪದ್ಮನಾಭನಗರ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ತಿಳಿಸಿದ್ದಾರೆ.

ಪಿಒಪಿ ಮೂರ್ತಿಗೆ ಅವಕಾಶವಿಲ್ಲ: ಯಡಿಯೂರು ಕೆರೆ, ಕಲ್ಯಾಣಿಯಲ್ಲಿ ಮಣ್ಣಿನ ಮೂರ್ತಿಗಳ ವಿಸರ್ಜನೆಗೆ ಮಾತ್ರ ಅವಕಾಶವಿದೆ. ಪಿಒಪಿ ಮೂರ್ತಿಗಳಿಗೆ ಅವಕಾಶ ನೀಡುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗಣೇಶ ಮೂರ್ತಿಗಳ ವಿಸರ್ಜನೆಗೆ ಪಾಲಿಕೆ ಸಿದ್ಧಗೊಳಿಸಿರುವ ಕಲ್ಯಾಣಿಗಳು ಹಾಗೂ ಮೊಬೈಲ್ ಟ್ಯಾಂಕರ್‌ಗಳ ಮಾಹಿತಿಯನ್ನು ವೆಬ್‌ಸೈಟ್ https://apps.bbmpgov.in/ganesh2024/ ನಲ್ಲಿ ಪಡೆದುಕೊಳ್ಳಬಹುದು.



ಯಡಿಯೂರು ಕೆರೆಯಲ್ಲಿರುವ ಕಲ್ಯಾಣಿಗೆ ಶುಕ್ರವಾರ ನೀರು ತುಂಬಿಸಲಾಯಿತು.

ಹಲಸೂರು ಕಲ್ಯಾಣಿ ಸುತ್ತ ಸಂಚಾರ ನಿಷೇಧ

9ರವರೆಗೆ 40 ಸಾವಿರಕ್ಕೂ ಅಧಿಕ ಗಣೇಶ ಮೂರ್ತಿ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣೇಶ ಹಬ್ಬದ ಪ್ರಯುಕ್ತ ಪುಲಕೇಶಿ ನಗರ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಹಲಸೂರು ಕೆರೆ ಕಲ್ಯಾಣಿಯಲ್ಲಿ ಶನಿವಾರದಿಂದ ಸೋಮವಾರದವರೆಗೆ ವಿವಿಧ ಪ್ರದೇಶಗಳ ಸುಮಾರು 40 ಸಾವಿರಕ್ಕೂ ಅಧಿಕ ಗಣೇಶ ಮೂರ್ತಿಗಳ ವಿಸರ್ಜನೆ ನಡೆಯಲಿದೆ. ಹಾಗಾಗಿ ವಾಹನಗಳ ಸುಗಮ ಸಂಚಾರದ ದೃಷ್ಟಿಯಿಂದ ಈ ಮೂರೂ ದಿನ ಸಂಜೆ 4ರಿಂದ ಮುಂಜಾನೆ 4ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಎಲ್ಲೆಲ್ಲಿ ಸಂಚಾರ ನಿಷಿದ್ಧ?: ಕೆನ್ಸಿಂಗ್‌ಟನ್-ಮರ್ಫಿ ರಸ್ತೆ ಜಂಕ್ಷನ್ ಕಡೆಯಿಂದ ಎಂ.ಇ.ಜಿ ಮೂಲಕ-ಹಲಸೂರು ಕೆರೆ ಕಡೆಗೆ ಕೆನ್ಸಿಂಗ್‌ಟನ್ ರಸ್ತೆಯಲ್ಲಿ ದ್ವಿಮುಖ ಸಂಚಾರ ತಾತ್ಕಾಲಿಕ ನಿರ್ಬಂಧ. ಎಂಇಜಿ ಕಡೆಯಿಂದ ಕೆನ್ಸಿಂಗ್‌ಟನ್-ಮರ್ಫಿ ರಸ್ತೆ ಜಂಕ್ಷನ್ ಕಡೆಗೆ ಏಕಮುಖ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ತಿರುವಳ್ಳವರ್ ಪ್ರತಿಮೆ ಜಂಕ್ಷನ್-ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ ಕಡೆಯಿಂದ ಆರ್‌.ಬಿ.ಐ ಜಂಕ್ಷನ್ ಮುಖಾಂತರ ಹಲಸೂರು ಕೆರೆ ಕಡೆಗೆ ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆಯಲ್ಲಿ ದ್ವಿಮುಖ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ಹಲಸೂರು ಕೆರೆ ಕಡೆಯಿಂದ ತಿರುವಳ್ಳವರ್ ಪ್ರತಿಮೆ ಜಂಕ್ಷನ್ ಕಡೆಗೆ ಏಕಮುಖ ಸಂಚಾರಕ್ಕೆ ಮಾತ್ರ ಅನುಮತಿ ನೀಡಲಾಗಿದೆ.

ಪರ್ಯಾಯ ಮಾರ್ಗ: ಕೆನ್ಸಿಂಗ್‌ಟನ್ ರಸ್ತೆ ಕಡೆಯಿಂದ ಎಂ.ಇ.ಜಿ ಮೂಲಕ-ಹಲಸೂರು ಕೆರೆ ಕಡೆಗೆ ಹೋಗುವ ವಾಹನಗಳು ಕೆನ್ಸಿಂಗ್‌ಟನ್‌ನಿಂದ ಗುರುದ್ವಾರ ಜಂಕ್ಷನ್ ಬಳಿ ಬಲ ತಿರುವು ಪಡೆದು, ಗಂಗಾಧರ ಚೆಟ್ಟಿ ರಸ್ತೆ- ಡಿಕನ್ಸನ್ ರಸ್ತೆಯಲ್ಲಿ ಬಲ ತಿರುವು ತೆಗೆದುಕೊಂಡು, ಸೇಂಟ್ ಜಾನ್ಸ್ ರಸ್ತೆ ಮೂಲಕ ಲಾವಣ್ಯ ಥಿಯೇಟರ್ ಜಂಕ್ಷನ್- ನಾಗಾ ಜಂಕ್ಷನ್ ಮುಖಾಂತರ ಪುಲಕೇಶಿನಗರ–ಪ್ರಾಮಿನೇಡ್ ರಸ್ತೆ-ವೀರ ರಸ್ತೆ ಅಥವಾ ಹಲಸೂರು ಕೆರೆ ಕಡೆಗೆ ಹೋಗಬಹುದು.

ತಿರುವಳ್ಳವರ್ ಪ್ರತಿಮೆ ಜಂಕ್ಷನ್-ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ ಕಡೆಯಿಂದ ಹಲಸೂರು ಕೆರೆ ಕಡೆಗೆ ಹೋಗುವ ವಾಹನಗಳು ಮಾರ್ಗ ಬದಲಾವಣೆ ಮಾಡಿ ಗಂಗಾಧರ್ ಚೆಟ್ಟಿ ರಸ್ತೆಯ ಮುಖಾಂತರ ಆರ್‌.ಬಿ.ಎನ್‌. ಎಂ.ಎಸ್ ಹತ್ತಿರ ಎಡ ತಿರುವು ಪಡೆದು, ಡಿಕನ್ಸನ್ ರಸ್ತೆಯ ಮುಖಾಂತರ ಸೇಂಟ್ ಜಾನ್ಸ್ ರಸ್ತೆ ತಲುಪಿ, ಸೇಂಟ್ ಜಾನ್ಸ್ ರಸ್ತೆ ಮೂಲಕ ಲಾವಣ್ಯ ಥಿಯೇಟರ್ ಜಂಕ್ಷನ್- ನಾಗಾ ಜಂಕ್ಷನ್ ಮುಖಾಂತರ ಪುಲಕೇಶಿನಗರ ಮಿಬ್ರಸ್ ರಸ್ತೆ ಕಡೆಗೆ ಅಥವಾ ಹಲಸೂರು ಕೆರೆ ಕಡೆಗೆ ಸಾಗಬಹುದು.

ವಾಹನ ನಿಲುಗಡೆ ನಿಷೇಧ: ಹಲಸೂರು ಕೆರೆಯ ಮುಖ್ಯದ್ವಾರ ಮತ್ತು ಸುತ್ತಲೂ ಇರುವ ಕೆನ್ಸಿಂಗ್ಟನ್ ರಸ್ತೆ-ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ-ಟ್ಯಾಂಕ್ ರಸ್ತೆಗಳಲ್ಲಿ ಮೂರೂ ದಿನಗಳು ಎಲ್ಲ ಮಾದರಿಯ ವಾಹನಗಳ ನಿಲುಗಡೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಸಾರ್ವಜನಿಕರು ತಾತ್ಕಾಲಿಕ ಸಂಚಾರ ಮಾರ್ಪಾಡುಗಳಿಗೆ ಸಹಕರಿಸಬೇಕು ಎಂದು ನಗರ ಪೂರ್ವ ಸಂಚಾರ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್‌.ಜೈನ್ ಮನವಿ ಮಾಡಿದ್ದಾರೆ.

ಬೆಸ್ಕಾಂ: ಭಾನುವಾರವೂ ತೆರದಿರಲಿದೆ ನಗದು ಪಾವತಿ ಕೇಂದ್ರ

ಬೆಂಗಳೂರು: ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರು, ವಿದ್ಯುತ್ ಸಂಪರ್ಕದ ಕಡಿತದಿಂದ ತೊಂದರೆ ಅನುಭವಿಸುವುದನ್ನು ತಪ್ಪಿಸುವುದಕ್ಕಾಗಿ ಸೆಪ್ಟೆಂಬರ್ 8 ಹಾಗೂ 15ರ ಭಾನುವಾರಗಳಂದು ಕೂಡ ಬೆಸ್ಕಾಂ ಉಪ ವಿಭಾಗಗಳ ನಗದು ಪಾವತಿ ಕೇಂದ್ರಗಳು ತೆರದಿರಲಿವೆ.

ವಿದ್ಯುತ್ ಬಿಲ್ ಬಂದ 30 ದಿನದೊಳಗೆ ವಿದ್ಯುತ್ ಶುಲ್ಕ ಪಾವತಿಸದಿದ್ದಲ್ಲಿ ಮತ್ತು ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ಪಾವತಿಸದಿದ್ದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಕೆಇಆರ್‌ಸಿ) ನಿಯಮಾವಳಿ ಅನ್ವಯ ಸೆ.1ರಿಂದ ಗ್ರಾಹಕರ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ.

ಈ ಕಾರಣದಿಂದ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ಉಪ ವಿಭಾಗಗಳ ನಗದು ಪಾವತಿ ಕೇಂದ್ರಗಳನ್ನು ಭಾನುವಾರವೂ ತೆರೆಯಲು ನಿರ್ಧರಿಸಿರುವುದಾಗಿ ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ಬಿಲ್ ಬಾಕಿ ಮೊತ್ತ ಮತ್ತು ಹೆಚ್ಚುವರಿ ಭದ್ರತಾ ಠೇವಣಿ ಮೊತ್ತ ₹100ಕ್ಕಿಂತ ಅಧಿಕವಾಗಿದ್ದಲ್ಲಿ, ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುತ್ತದೆ. 'ಗೃಹ ಜ್ಯೋತಿ' ಯೋಜನೆ ಅಡಿಯಲ್ಲಿ ಶೂನ್ಯ ಬಿಲ್ ಪಡೆಯುತ್ತಿರುವ ಗ್ರಾಹಕರು ಹಿಂಬಾಕಿ ಶೂನ್ಯವಿದ್ದಲ್ಲಿ ಈ ಬಗ್ಗೆ ಚಿಂತಿಸಬೇಕಿಲ್ಲ ಎಂದು ಪ್ರಕಟಣೆ ಸ್ಪಷ್ಟಪಡಿಸಿದೆ.

ಕುರ್ತಾಗಳಿಗೆ ಟ್ರೆಂಡಿ ಪ್ಯಾಂಟ್



ಪವಿತ್ರಾ ಭಟ್

ಫ್ಯಾಷನ್


ಚೂಡಿದಾರ್, ಕುರ್ತಾ- ಪ್ಯಾಂಟ್‌ಗಳು ಎಂದಿಗೂ ಮಾಸದ ಫ್ಯಾಷನ್. ದಿನನಿತ್ಯದ ಉಡುಗೆಯಿಂದ ಹಿಡಿದು, ವಿಶೇಷ ಸಂದರ್ಭಗಳಲ್ಲೂ ಸಾಂಪ್ರದಾಯಿಕ ಉಡುಗೆಯಾಗಿಯೇ ಕುರ್ತಾ- ಪ್ಯಾಂಟ್‌ಗಳು ಹಾಸುಹೊಕ್ಕಾಗಿವೆ. ಈಗಂತೂ ಕಾಂಟ್ರಾಸ್ಟ್ ಯುಗ. ಒಂದೇ ಕುರ್ತಾಗೆ ವಿವಿಧ ರೀತಿಯ ಪ್ಯಾಂಟ್ ಧರಿಸಬಹುದು. ಬಿಗಿ ಪ್ಯಾಂಟ್ ಇಷ್ಟ ಪಡದವರಿಗೆ ಸಡಿಲವಾದ ಪ್ಯಾಂಟ್‌ಗಳು ಪ್ರಿಯವಾಗುತ್ತವೆ.

ಶರಾರ ಪ್ಯಾಂಟ್

ಪೂರ್ತಿಯಾಗಿ ಪ್ಯಾಂಟ್ ಅಲ್ಲದ, ಇತ್ತ ಪೂರ್ತಿ ಲಂಗವೂ ಅಲ್ಲದ ಶರಾರಾ, ಕುರ್ತಾ- ದುಪ್ಪಟ್ಟಾ ಜತೆ ತೊಡಬಹುದು. ಮಂಡಿಯವರೆಗೆ ಪ್ಯಾಂಟನ್ನೇ ಹೋಲುವ ಈ ಶರಾರ ಮಂಡಿಯಿಂದ ಕೆಳಗೆ ಕೊಡೆಯ ಹಾಗೆ ತೆರೆದುಕೊಳ್ಳುತ್ತದೆ. ಎಲ್ಲಾ ಬಣ್ಣಗಳಲ್ಲಿ, ಡಿಸೈನ್‌ಗಳಿರುವ ಶರಾರ ಪ್ಯಾಂಟ್‌ಗಳು ಸಿಗುತ್ತವೆ. ನಿಮಗಿಷ್ಟವಾಗುವ, ಯಾವುದೇ ಕುರ್ತಾ ಧರಿಸಿ ಜೆತೆಗೆ ದುಪ್ಪಟ್ಟಾ ತೊಟ್ಟರೆ ಪರಿಪೂರ್ಣ ಲುಕ್ ನಿಮ್ಮದಾಗುತ್ತದೆ.

ಪಲಾಜೊ ಪ್ಯಾಂಟ್

ಪಲಾಜೊದಲ್ಲಿ ಹಲವು ವಿಧಗಳಿವೆ. ಧರಿಸಲು ಅರಾಮವಾಗುವ ಈ ಪ್ಯಾಂಟ್‌ಗಳು ಬಹುತೇಕ ಎಲ್ಲಾ ರೀತಿಯ ಕುರ್ತಾಗಳಿಗೆ ಸರಿಹೊಂದುತ್ತವೆ. ಬಿಗಿಯಾದ ಪ್ಯಾಂಟ್ ಧರಿಸದವರೊಗೆ ಪಲಾಜೊ ಪ್ಯಾಂಟ್‌ಗಳು ಉತ್ತಮ. ಸ್ಟ್ರೇಟ್ ಲೈನ್ ಕುರ್ತಾ, ಅನಾರ್ಕಲಿ ಕುರ್ತಾ, ಎ ಲೈನ್ ಕುರ್ತಾ ಹೀಗೆ ಎಲ್ಲ ಬಗೆಯ ಕುರ್ತಾಗಳಿಗೂ ಸುಲಭವಾಗಿ ಮ್ಯಾಚ್ ಆಗುತ್ತದೆ. ವಿವಿಧ ವಿನ್ಯಾಸದ, ವಿವಿಧ ಬಣ್ಣಗಳ ಪಲಾಜೊ ಪ್ಯಾಂಟ್‌ಗಳು ಉಡುಗೆಗೆ ವಿಭಿನ್ನ ಲುಕ್ ನೀಡಬಲ್ಲದು.



ಶರಾರ ಪ್ಯಾಂಟ್

ದೋತಿ ಪ್ಯಾಂಟ್

ಸಿಂಪಲ್ ಕುರ್ತಾಗಳಿಗೂ ರಿಚ್ ಲುಕ್ ನೀಡುವಲ್ಲಿ ದೋತಿ ಪ್ಯಾಂಟ್‌ಗಳು ನೆರವಾಗುತ್ತವೆ. ಉದ್ದನೆಯ ಟೀ ಶರ್ಟ್, ಶಾರ್ಟ್ ಕುರ್ತಾ, ಫ್ರಾಕ್ ಕುರ್ತಾಗಳಿಗೆ ದೋತಿ ಪ್ಯಾಂಟ್‌ಗಳು ಮ್ಯಾಚ್ ಆಗುತ್ತವೆ. ಕಿಟ್ಟಿ ಪಾರ್ಟಿಗಳಿಗೆ ದೋತಿ ಪ್ಯಾಂಟ್‌ನೊಂದಿಗೆ ಮಿಕ್ಸ್ ಮ್ಯಾಚ್ ಮಾಡಿ.



ಪಲಾಜೋ ಪ್ಯಾಂಟ್

ಸ್ಕರ್ಟ್

ಕುರ್ತಾಗಳೊಂದಿಗೆ ಸ್ಕರ್ಟ್ ಧರಿಸುವುದು ಸಾಂಪ್ರದಾಯಿಕ್ ಲುಕ್ ನೀಡುತ್ತದೆ. ಕಾಂಟ್ರಾಸ್ಟ್ ಕಲರ್‌ಗಳ ಸ್ಕರ್ಟ್‌ನೊಂದಿಗೆ ಲಾಂಗ್ ಕುರ್ತಾ ಡಿಫರೆಂಟ್ ಲುಕ್ ನೀಡುತ್ತದೆ. ಸಮಾರಂಭಗಳಿಗೆ ಈ ಉಡುಗೆ ಹೇಳಿ ಮಾಡಿಸಿದ್ದು. ಕಟ್ ಕುರ್ತಾ, ಅನಾರ್ಕಲಿ ಕುರ್ತಾಗಳಿಗೂ ಸ್ಕರ್ಟ್‌ಗಳು ಸೂಟ್ ಆಗುತ್ತವೆ.

ಪ್ಯಾರಲಲ್ ಪ್ಯಾಂಟ್

ಮೇಲಿಂದ ಕೆಳಗಿನವರೆಗೆ ಒಂದೇ ಅಳತೆಯಿರುವ ಈ ಪ್ಯಾರಲಲ್ ಪ್ಯಾಂಟ್‌ಗಳು ಶಾರ್ಟ್ ಕುರ್ತಾಗಳೊಂದಿಗೆ ಮ್ಯಾಚ್ ಆಗುತ್ತವೆ. ವಿವಿಧ ಬಣ್ಣ, ಡಿಸೈನ್‌ಗಳಲ್ಲಿ ದೊರೆಯವ ಪ್ಯಾಂಟ್ ಅನ್ನು ಸ್ಟ್ರೇಟ್ ಕುರ್ತಾಗಳೊಂದಿಗೆ ಧರಿಸಬಹುದು. ಜೀನ್ಸ್ ಬಟ್ಟೆಯಲ್ಲೂ ಈ ಪ್ಯಾಂಟ್ ಸಿಗುತ್ತದೆ. ಕ್ರಾಪ್‌ಟಾಪ್‌ಗಳೊಂದಿಗೂ ಧರಿಸಬಹುದು.

ಸಿಗರೇಟ್ ಕಟ್ ಪ್ಯಾಂಟ್

ನೇರ ವಿನ್ಯಾಸ, ಕಾಲಿಗೆ ಅಂಟಿಕೊಳ್ಳುವ ಹಾಗೂ ಪ್ಯಾಂಟ್‌ಗೆ ಜೇಬುಗಳಿರುವ ಈ ಸಿಗರೇಟ್ ಕಟ್ ಪ್ಯಾಂಟ್ ಈಗಿನ ಟ್ರೆಂಡ್ ಲಾಂಗ್ ಕುರ್ತಾ, ಸೈಡ್ ಕಟ್, ಲೇಯರ್ ಕುರ್ತಾಗಳಿಗೆ ಈ ಸಿಗರೇಟ್ ಕಟ್ ಪ್ಯಾಂಟ್ ಸ್ಟೈಲಿಷ್ ಆಗಿ ಕಾಣುವಂತೆ ಮಾಡುತ್ತದೆ.



ಗರ್ಭಾವಸ್ಥೆಯನ್ನು ಮೂರು ತ್ರೈಮಾಸಿಕಗಳಾಗಿ ವಿಂಗಡಿಸಲಾಗಿದೆ ಅಲ್ಲದೆ, ಪ್ರತಿ ಹಂತದಲ್ಲಿ ವಿಭಿನ್ನ ವಿಧದ ವ್ಯಾಯಾಮಗಳನ್ನು ಶಿಪಾರಸು ಮಾಡಲಾಗಿದೆ. ಶಿಶುವಿನ ಅಭಿವೃದ್ಧಿ ಜೊತೆಗೆ ತಾಯಿಗೂ ಕೂಡ ಈ ವ್ಯಾಯಾಮಗಳು ಲಾಭದಾಯಕವಾಗಿರುತ್ತವೆ.

ಗರ್ಭಿಣಿಯರ ವ್ಯಾಯಾಮಗಳು





ಡಾ.ರಶ್ಮಿ ನಾಯಕ್ ಎನ್

ಕಾಳಜಿ

ಮೊದಲ ತ್ರೈಮಾಸಿಕ (ಮೊದಲ 3 ತಿಂಗಳು)

ಗರ್ಭಾವಸ್ಥೆಯ ಪ್ರಥಮ ತ್ರೈಮಾಸಿಕದಲ್ಲಿ ದೈಹಿಕ ಚಟುವಟಿಕೆಗಳು ಹಗುರ, ಅನುಕೂಲಕರವಾಗಿರಬೇಕು.

- **ನಡಿಗೆ:** ಗರ್ಭಾವಸ್ಥೆಯ ಮೊದಲ ಮೂರು ತಿಂಗಳ ಅವಧಿಯಲ್ಲಿ ಕೆಲಕಾಲ ನಡೆಯುವುದು ರಕ್ತ ಪರಿಚಲನೆಯನ್ನು ಸುಧಾರಿಸಲು ಲಾಭದಾಯಕವಾಗಿರುತ್ತದೆ.
- **ಸೊಂಟ ಬಾಗಿಸುವುದು:** ಈ ವ್ಯಾಯಾಮದಿಂದ ಬೆನ್ನು ನೋವು ಕಡಿಮೆಯಾಗುವುದು. ಬೆನ್ನು ಮೂಳೆ, ಸ್ನಾಯುಗಳು ಸದೃಢಗೊಳ್ಳುತ್ತವೆ. ಗರ್ಭಾಶಯದ ಸ್ನಾಯುಗಳನ್ನೂ ಬಲಪಡಿಸುತ್ತದೆ.
- **ಸ್ನಾಯು ಹಿಗ್ಗಿಸುವುದು :** ಸ್ಟ್ರೆಚಿಂಗ್ ಅಂದರೆ ಸ್ನಾಯುಗಳನ್ನು ಹಿಗ್ಗಿಸುವ ವ್ಯಾಯಾಮದಿಂದ ನೋವು ಮತ್ತು ಒತ್ತಡ ಕಡಿಮೆಯಾಗುತ್ತದೆ ಅಲ್ಲದೆ, ದೇಹ ಸಡಿಲಗೊಳ್ಳಲು ಸಹಾಯವಾಗುತ್ತದೆ.

ಎರಡನೇ ತ್ರೈಮಾಸಿಕ (3–6 ತಿಂಗಳು)

ಗರ್ಭಾವಸ್ಥೆಯ ಎರಡನೇ ತ್ರೈಮಾಸಿಕ ಅವಧಿಯಲ್ಲಿ ಮಹಿಳೆಯ ದೇಹದಲ್ಲಿನ ಶಕ್ತಿಯ ಮಟ್ಟ ಹೆಚ್ಚುತ್ತದೆ. ಸ್ವಲ್ಪ ಹೆಚ್ಚಿಗೆ ಚಟುವಟಿಕೆ ಕೈಗೊಳ್ಳಲು ಇದು ಸೂಕ್ತ ಸಮಯವಾಗಿರುತ್ತದೆ.

- **ಈಜುವುದು :** ದೇಹಕ್ಕೆ ಅತ್ಯಂತ ಉಪಯೋಗಿ ಚಟುವಟಿಕೆ ಎಂದರೆ ಅದು ಈಜುವುದಾಗಿದೆ. ದೇಹದ ಪ್ರತಿ ಭಾಗಕ್ಕೆ ಅದು ವ್ಯಾಯಾಮ ನೀಡುವುದಲ್ಲದೆ, ತೂಕ ಕಡಿಮೆಯಾಗಲು ಮತ್ತು ಒತ್ತಡ ನಿವಾರಿಸುವಲ್ಲಿ ಅದು ಸಹಾಯಕವಾಗಿದೆ.
- **ಯೋಗ:** ಮಹಿಳೆಯರು ಗರ್ಭಾವಸ್ಥೆಯ ಸಮಯದಲ್ಲಿ ಅತ್ಯಂತ ಹೆಚ್ಚಿನ ಮಾನಸಿಕ ಒತ್ತಡದಲ್ಲಿರುತ್ತಾರೆ. ಅವರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತಮವಾಗಿರಿಸಿಕೊಳ್ಳಲು ಯೋಗ ಸಹಾಯಕವಾಗಿದೆ. ದೇಹದ ಸಮತೋಲನವನ್ನು ಉಳಿಸಿಕೊಳ್ಳಲು ಇದು ನೆರವಾಗುತ್ತದೆ.
- **ತೂಕ ಎತ್ತುವ ವ್ಯಾಯಾಮ:** ಹಗುರವಾದ ತೂಕಗಳನ್ನು ಎತ್ತುವ ವ್ಯಾಯಾಮವು ದೇಹದ ಸ್ನಾಯುಗಳನ್ನು ಬಲಪಡಿಸಲು ಮುಖ್ಯವಾಗಿರುತ್ತದೆ. ತೂಕ ಅತಿಯಾಗಿರಬಾರದು ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗಿರುತ್ತದೆ.


ಮೂರನೇ ತ್ರೈಮಾಸಿಕ (6–9 ತಿಂಗಳು)


ಗರ್ಭಾವಸ್ಥೆಯ ಮೂರನೇ ತ್ರೈಮಾಸಿಕದಲ್ಲಿ ದೇಹದ ತೂಕ ಹೆಚ್ಚುತ್ತದೆ. ಆದ್ದರಿಂದ ಈ ಸಮಯದಲ್ಲಿ ಹಗುರವಾದ ಮತ್ತು ಸುರಕ್ಷಿತ ವ್ಯಾಯಾಮಗಳ ಕಡೆಗೆ ಗಮನ ನೀಡಬೇಕು.

- **ಕೆಗಲ್ ವ್ಯಾಯಾಮ :** ಈ ವ್ಯಾಯಾಮವನ್ನು ದಿನಾಲೂ ಮಾಡುವ್ವದರಿಂದ ಸೊಂಟದ ತಳಭಾಗದ ಸ್ನಾಯು ಬಲಗೊಳ್ಳುತ್ತವೆ. ಇದು ಹೆರಿಗೆಯ ಸಮಯದಲ್ಲಿ ಸಹಾಯಕವಾಗುತ್ತದೆ.
- **ದೀರ್ಘ ಉಸಿರಾಟ :** ಆಳವಾಗಿ ಉಸಿರಾಡುವುದು ಅಥವ ಸುದೀರ್ಘ ಉಸಿರಾಟದಿಂದ ಒತ್ತಡ ಕಡಿಮೆಯಾಗಲು ಹಾಗೂ ಮಾನಸಿಕ ಸಮತೋಲನವನ್ನು ಉಳಿಸಿಕೊಳ್ಳಲು ಸಹಾಯ ಲಭಿಸುತ್ತದೆ. ಹೆರಿಗೆಯ ಸಮಯದಲ್ಲೂ ಇದು ಲಾಭದಾಯಕವಾಗಿರುತ್ತದೆ.
- **ಒಂದು ಪಕ್ಕಕ್ಕೆ ಮಲಗಿ ಕಾಲು ಎತ್ತುವುದು:** ಈ ವ್ಯಾಯಾಮ ಮುಖ್ಯವಾಗಿ ಸ್ನಾಯುಗಳನ್ನು ಗುರಿಯಾಗಿಟ್ಟುಕೊಂಡಿರುತ್ತದೆ. ಜೊತೆಗೆ ದೇಹದ ಸ್ನಾಯು ಬಲಗೊಳಿಸುವುದಲ್ಲದೆ, ಕಾಲುಗಳಿಗೆ ರಕ್ತದ ಪರಿಚಲನೆ ಉತ್ತಮವಾಗುವಂತೆ ಮಾಡುತ್ತದೆ.

ತ್ರೈಮಾಸಿಕಗಳ ಉದ್ದಕ್ಕೂ ಸೂಕ್ತ ವ್ಯಾಯಾಮದ ದಿನಚರಿಯನ್ನು ಅನುಸರಿಸುವುದು, ಗರ್ಭಾವಸ್ಥೆಯ ಜೊತೆಗೆ ಹೆರಿಗೆಯ ಸಂದರ್ಭದಲ್ಲೂ ಬಹಳ ಸಹಾಯಕವಾಗಿರುತ್ತದೆ. ಸುರಕ್ಷತೆ ಮತ್ತು ಪರಿಣಾಮಕಾರಿತನದ ಖಾತ್ರಿ ಮಾಡಿಕೊಳ್ಳಲು ಯಾವುದೇ ನೂತನ ವ್ಯಾಯಾಮದ ದಿನಚರಿಯನ್ನು ಆರಂಭಿಸುವ ಮುನ್ನ ಪರಿಣತರೊಂದಿಗೆ ಸಮಾಲೋಚನೆ ಕೈಗೊಳ್ಳುವುದು ಮುಖ್ಯವಾಗಿರುತ್ತದೆ. ❖











ಉತ್ತರವಿದೆಯೇ?

ಲತಾ ಮಲ್ಲಿಕಾರ್ಜುನ್



ಒಂದಿನ ನನ್ನ ಮಗಳು ನನ್ನನ್ನೊಮ್ಮೆ ಕೇಳಿದಳು.. ಅಮ್ಮಾ.... ಬಸ್ಸಲ್ಲಿ ಹೋಗುವುದು ಸೇಫಾಗಿದೆಯೇ? ಅದೆಲ್ಲಿಂದಲೂ ನುಸುಳುವ ಕಾಣದ ಕೈಗಳು ನೆನಪಾದವು. ಉತ್ತರಿಸುವ ಮೊದಲೇ ಮಗಳ ಇನ್ನೊಂದು ಪ್ರಶ್ನೆ.

ಟ್ಯಾಕ್ಸಿಗೆ ಬರಲಾ.. ಟ್ಯಾಕ್ಸಿ ಸುರಕ್ಷಿತವೇ?.. ಅದೇ ಆ ಕನ್ನಡಿಯಲ್ಲಿ ಕಂಗಳಲ್ಲೇ ನುಂಗುವಂತೆ ನೋಡ್ತಾನಲ್ಲ.. ಆ ಚಾಲಕನ ಜೊತೆಗೆ ನಾನು ಸುರಕ್ಷಿತವೇ? ಹೋಗಲಿಬಿಡು ಅಮ್ಮಾ.. ನಾನು ಶಾಲೆಯಲ್ಲಿ ಸುರಕ್ಷಿಳೇ? ಎಳೆಕೂಸಿಗೆ ಕಿರುಕುಳ ನೀಡಿದ ಕಾರ್ಮಿಕ ನೆನಪಾದ.

ಕಾಲೇಜಿಗೆ ಹೋದರೆ ಇದೆಲ್ಲ ರಗಳೆ ಇರಲ್ಲ ಅಲ್ವಾ.. ಕಂಗಳಲ್ಲಿಯೇ ನುಂಗುವ, ಆಚೆ ಹೋಗಲು ಪುಸಲಾಯಿಸುವ, ಎಲ್ಲದಕ್ಕೂ ಒಪ್ಪಿಸುವ ಛಾತಿ ಇರುವ ಯುವಕರು ನೆನಪಾದರು. ಇದನ್ನೂ ದಾಟಿ ಕಚೇರಿಗೆ ಹೋದರೆ.. ಕಚೇರಿ ಸುರಕ್ಷಿತವೇ? ಇಲ್ಲಿಯೂ ಜನರಿದ್ದಾರೆ, ನೀ ಉಟ್ಟಿದ್ದೇನು, ತೊಟ್ಟಿದ್ದೇನು, ನಿನ್ನ ಒಲವೇನು, ನಿಲುವೇನು? ಅಂದಿದ್ದೇನು, ಅನ್ನದೇ ಇರುವುದೇನು ಎಂದೆಲ್ಲ ತೀರ್ಪು ನೀಡುವವರು.. ಅಮ್ಮಾ.. ಹೇಳಮ್ಮ.. ಹೊರಗೆ ಹೋಗಿಯೂ ಸುರಕ್ಷಿತವಾಗಿರುವುದು ಹೇಗೆ?

ಹಕ್ಕಿಯಂತೆ ಗೂಡಿನಿಂದಾಚೆ ಜಿಗಿದು, ಬಾನಾಡಿಯಾಗಿ, ನನ್ನ ಗುರಿಯ ಆಕಾಶದಲ್ಲಿ ಸ್ವಚ್ಛಂದ ವಿಹರಿಸಿ, ವಿರಮಿಸಲು ಮನೆಗೆ ಸುರಕ್ಷಿತವಾಗಿ ಬರಲು ಸಾಧ್ಯವೇ ಅಮ್ಮಾ.. ಯಾರೂ ಮುಟ್ಟದಂತೆ ಮನೆಗೆ ಬರುವುದು ಸಾಧ್ಯವೇ ಅಮ್ಮಾ?

ನಮ್ಮ ಹೆಣ್ಣುಮಕ್ಕಳು ಎಲ್ಲಿ ಸುರಕ್ಷಿತ? ಗರ್ಭದಲ್ಲಿಯೂ ಕಂಟಕಗಳಿರುವಾಗ... ಉತ್ತರಕ್ಕಾಗಿ ತಡಕಾಡಬೇಕಿದೆ!! ❖

ಮೋದಕಪ್ರಿಯನಿಗಾಗಿ...

ಕೆ.ವಿ.ರಾಜಲಕ್ಷ್ಮಿ

ರಸಾಸ್ವಾದ

ಕರ್ಜಿಕಾಯಿ



ಬೇಕಾಗುವ ಸಾಮಗ್ರಿಗಳು: ಚಿರೋಟಿ ರವೆ 2 ಕಪ್, ಮೈದಾ 1 ಕಪ್, ಹುರಿಗಡಲೆ, ಶೇಂಗಾ, ಒಣಕೊಬ್ಬರಿ ತುರಿ ತಲಾ 1/4 ಕಪ್. ಗಸಗಸೆ ಎರಡು ಚಮಚ, ಪುಡಿಬೆಲ್ಲ 1 ಕಪ್, ಚಿಟಕಿ ಉಪ್ಪು.

ಮಾಡುವ ವಿಧಾನ: ಕಣಕಕ್ಕೆ, ಮೊದಲಿಗೆ ಅಗಲ ಪಾತ್ರೆಯಲ್ಲಿ ರವೆ, ಮೈದಾ ಚಿಟುಕಿ ಉಪ್ಪು ಸೇರಿಸಿ ಸ್ವಲ್ಪ ಸ್ವಲ್ಪವೇ ನೀರು ಹಾಕಿಕೊಂಡು ಚಪಾತಿ ಹಿಟ್ಟಿನ ಹದಕ್ಕೆ ಮೃದುವಾಗಿ ಕಲೆಸಿ, ಮೇಲೆ ಅಡುಗೆ ಎಣ್ಣೆ ಸವರಿ. ಮುಚ್ಚಳ ಮುಚ್ಚಿ ಅರ್ಧ ಗಂಟೆ ಬದಿಗಿಡಿ. ಹೂರಣಕ್ಕೆ, ಜಿಡ್ಡು ಹಾಕದೆ ಶೇಂಗಾ, ಗಸಗಸೆ ಹುರಿದಿಟ್ಟುಕೊಂಡು ತಣಿಸಿ. ಹುರಿಗಡಲೆ ಒಣಕೊಬ್ಬರಿ ಬೆಲ್ಲದೊಂದಿಗೆ ತರಿತರಿಯಾಗಿ ಅರೆದುಕೊಳ್ಳಿ. ಕಲೆಸಿದ ಹಿಟ್ಟನ್ನು ಪುರಿಯಾಕಾರಕ್ಕೆ ಲಟ್ಟಿಸಿ ಮಧ್ಯೆ ಅರೆದ ಸಿಹಿ ಮಿಶ್ರಣವನ್ನು ತುಂಬಿ ಮುಚ್ಚಿ ಕರ್ಜಿಕಾಯಿ ಆಕಾರದಲ್ಲಿ ಪ್ರೆಸ್ ಮಾಡಿ, ಎಣ್ಣೆಯಲ್ಲಿ ಕರಿಯಿರಿ.



ಮೋದಕ

ಬೇಕಾಗುವ ಸಾಮಗ್ರಿ: ಅಕ್ಕಿಹಿಟ್ಟು 1 ಕಪ್, 1 ಚಮಚ ಮೈದಾ, ತೆಂಗಿನ ತುರಿ ಅರ್ಧ ಕಪ್, ಬೆಲ್ಲದ ಪುಡಿ 1/2 ಕಪ್, ಚಿಟುಕಿ ಉಪ್ಪು.

ಮಾಡುವ ವಿಧಾನ: ಹೂರಣಕ್ಕೆ, ಬೆಲ್ಲ ಕರಗಿಸಿ ತೆಂಗಿನತುರಿ ಸೇರಿಸಿ ಸಣ್ಣ ಉರಿಯಲ್ಲಿ ನಾಲ್ಕೈದು ನಿಮಿಷ ಗೊಟಾಯಿಸಿ, ತಣಿದ ನಂತರ ಸಣ್ಣ ಸಣ್ಣ ಉಂಡೆಗಳನ್ನಾಗಿ ಅಣಿಮಾಡಿಕೊಳ್ಳಿ. ಕಣಕಕ್ಕೆ, 1 ಕಪ್ ನೀರಿಗೆ ಎಣ್ಣೆ, ಮೈದಾ ಉಪ್ಪು ಸೇರಿಸಿ ಚೆನ್ನಾಗಿ ಕುದಿಸಿ. ಅದಕ್ಕೆ ಅಕ್ಕಿಹಿಟ್ಟು ಸೇರಿಸಿ, ಉರಿಯಾರಿಸಿ ಗಂಟಿಲ್ಲದಂತೆ ಚೆನ್ನಾಗಿ ಮಿಶ್ರಣ ಮಾಡಿಟ್ಟುಕೊಳ್ಳಿ ಮುಚ್ಚಳ ಮುಚ್ಚಿ, ಐದು ನಿಮಿಷ ಬದಿಗಿಡಿ. ನಂತರ ಸ್ವಲ್ಪ ಅಕ್ಕಿಹಿಟ್ಟನ್ನು ಅಂಗೈಯಗಲಕ್ಕೆ ತಟ್ಟಿ ಮಧ್ಯೆ ಬೆಲ್ಲದ ಹೂರಣವಿಟ್ಟು ಮುಚ್ಚಿ ಮೋದಕಗಳನ್ನು ತಯಾರಿಸಿಕೊಂಡು ಇಡ್ಲಿ ಪಾತ್ರೆಯಲ್ಲಿ ಆವಿಯಲ್ಲಿ ಬೇಯಿಸಿ.



ರವೆ ತಂಬಿಟ್ಟು

ಬೇಕಾಗುವ ಸಾಮಗ್ರಿ: ಸಣ್ಣ ರವೆ 1 ಕಪ್, ಅಕ್ಕಿಹಿಟ್ಟು 1/4 ಕಪ್, ಬೆಲ್ಲದ ಪುಡಿ 1 1/2 ಕಪ್, ಏಲಕ್ಕಿ ಪುಡಿ 1 ಚಮಚ, ತುಪ್ಪ 2 ಚಮಚ.

ಮಾಡುವ ವಿಧಾನ: ಮೊದಲಿಗೆ ತುಪ್ಪದಲ್ಲಿ ರವೆ ಮತ್ತು ಅಕ್ಕಿ ಹಿಟ್ಟನ್ನು ಒಳ್ಳೆಯ ಪರಿಮಳ ಬರುವವರೆಗೆ ಹುರಿದುಕೊಳ್ಳಿ. ನಂತರ ಬಾಣಲಿಯಲ್ಲಿ ಬೆಲ್ಲದ ಪುಡಿಗೆ ಸ್ವಲ್ಪ ನೀರುಸೇರಿಸಿ, ಬೆಲ್ಲ ಕರಗಿ ನೊರೆಬರುವಾಗ ಹುರಿದ ಮಿಶ್ರಣವನ್ನು ಸೇರಿಸಿ ಕೈಯಾಡುತ್ತಿರಿ. ಮಿಶ್ರಣ ಬೆಂದು ಹದವಾದಾಗ ಏಲಕ್ಕಿ ಪುಡಿ, ಸ್ವಲ್ಪ ತುಪ್ಪ ಸೇರಿಸಿ ಮಗುಚಿ, ತಟ್ಟೆಗೆ ವರ್ಗಾಯಿಸಿ. ಬಿಸಿಯಿರುವಾಗಲೇ ಸಣ್ಣ ಉಂಡೆ ಕಟ್ಟಿ.

ಸಕ್ಕರೆ ನೀತಿಯೂ ಅಂತಿಮ ಹಂತಕ್ಕೆ: ಸಚಿವ ಶಿವಾನಂದ ಪಾಟೀಲ ಹೇಳಿಕೆ


ಡಿಸೆಂಬರ್‌ಗೆ ಹೊಸ ಜವಳಿ ನೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡಿಸೆಂಬರ್‌ನಿಂದ ಹೊಸ ಜವಳಿ ನೀತಿ ಜಾರಿಯಾಗಲಿದೆ ಎಂದು ಜವಳಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಐದು ವರ್ಷಗಳಿಗೆ ಒಮ್ಮೆ ಜವಳಿ ನೀತಿ ರೂಪಿಸಲಾಗುತ್ತದೆ. ಈಗಿರುವ ನೀತಿಯು ನ. 24 ಕ್ಕೆ ಕೊನೆಯಾಗಲಿದೆ. ಅದಕ್ಕಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ಅಕ್ಟೋಬರ್ ಒಳಗೆ ಹೊಸ ನೀತಿ ಸಿದ್ಧಪಡಿಸಲಿದೆ. ನಂತರ ನೀತಿಯ ವಿವರಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸಕ್ಕರೆ ನೀತಿ ರೂಪಿಸಲು ಹಿಂದಿನ ಪ್ರಧಾನ ಕಾರ್ಯದರ್ಶಿ ವಿನ್ಸೆಂಟ್ ಡಿಸೋಜ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿತ್ತು. ಮಹಾರಾಷ್ಟ್ರ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ನೀತಿಗಳನ್ನು ಪರಿಶೀಲಿಸಿ, ರಾಜ್ಯಕ್ಕೆ ಅಗತ್ಯವಾದ ನೀತಿ ರೂಪಿಸುತ್ತಿದೆ.



ಶಿವಾನಂದ ಪಾಟೀಲ

ಸಕ್ಕರೆ ಕಾರ್ಖಾನೆಗಳ ಆರಂಭಕ್ಕೆ ಅಗತ್ಯವಾದ ನಿಯಮಗಳು, ಕಬ್ಬು ಬಳಕೆ, ದರ ನಿಗದಿ ಮತ್ತಿತರ ವಿವರಗಳನ್ನು ನೀತಿ ಒಳಗೊಂಡಿರುತ್ತದೆ ಎಂದರು.

ಸಬ್ಸಿಡಿ ಮಿತಿ ರದ್ದು: ರಾಜ್ಯ ಸರ್ಕಾರ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳ ವಿದ್ಯುತ್ ಸಬ್ಸಿಡಿಗೆ ಇದ್ದ ಮಿತಿಯನ್ನು ರದ್ದುಪಡಿಸಿದೆ. ಇದರಿಂದ ಪ್ರತಿ ನೇಕಾರರಿಗೆ ವಾರ್ಷಿಕ ಕನಿಷ್ಠ ₹40 ಸಾವಿರ ಉಳಿತಾಯವಾಗಲಿದೆ. ಮೊದಲು ಒಂದರಿಂದ 10 ಎಚ್‌.ಪಿವರೆಗೆ ಉಚಿತ ವಿದ್ಯುತ್ ನೀಡಲಾಗುತ್ತಿತ್ತು. 10 ಎಚ್‌.ಪಿ ನಂತರ ತಿಂಗಳಿಗೆ ಎಷ್ಟೇ ವಿದ್ಯುತ್ ಬಳಕೆ ಮಾಡಿದರೂ ಪ್ರತಿ ಯೂನಿಟ್‌ಗೆ ₹1.25 ಮಾತ್ರ ಪಾವತಿಸಬೇಕು. ಸರ್ಕಾರದ ಈ ನಿರ್ಧಾರದಿಂದ ನಾಲ್ಕು ಸಾವಿರ ಘಟಕಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಎಪಿಎಂಸಿ: ₹400 ಕೋಟಿ ಆದಾಯ ನಿರೀಕ್ಷೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾಯ್ದೆಗೆ ಹಿಂದಿನ ಸರ್ಕಾರ ತಂದಿದ್ದ ತಿದ್ದುಪಡಿ ರದ್ದು ಮಾಡಿದ ನಂತರ ರಾಜ್ಯದ ಎಲ್ಲ ಎಪಿಎಂಸಿಗಳೂ ಲಾಭದತ್ತ ಸಾಗಿವೆ. ಪ್ರಸಕ್ತ ವರ್ಷ ₹400 ಕೋಟಿ ಆದಾಯ ನಿರೀಕ್ಷಿಸಲಾಗಿದೆ ಎಂದು ಸಚಿವ ಶಿವಾನಂದ ಪಾಟೀಲ ಹೇಳಿದರು.

ಎಪಿಎಂಸಿ ಕಾಯ್ದೆ ಮರುಸ್ಥಾಪನೆ ನಂತರ ರೈತರಿಗೆ ಹೆಚ್ಚು ಅನುಕೂಲವಾಗಿದೆ. ಕಳೆದ ವರ್ಷ ₹77.42 ಕೋಟಿ ಆದಾಯ ಸಂಗ್ರಹವಾಗಿತ್ತು. ಮಾರುಕಟ್ಟೆಗಳು ಮತ್ತೆ ಬಲವರ್ಧನೆಯಾಗುತ್ತಿದ್ದು, ಆದಾಯದಲ್ಲೂ ಗಣನೀಯ ಏರಿಕೆಯಾಗುತ್ತಿದೆ ಎಂದರು.

ದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಕಕಾಲಕ್ಕೆ ಬೆಂಬಲ ಬೆಲೆ ಯೋಜನೆ ಅಡಿ ನಾಲ್ಕು ಬೆಳೆಗಳನ್ನು ಖರೀದಿ ಮಾಡಲಾಗುತ್ತಿದೆ. ಹೆಸರುಕಾಳು, ಸೂರ್ಯಕಾಂತಿ, ಸೋಯಾಬಿನ್ ಮತ್ತು ಉದ್ದಿನಕಾಳನ್ನು ಬೆಂಬಲ ಬೆಲೆ ಯೋಜನೆ ಅಡಿ ಸೆ.5 ರಿಂದಲೇ ಖರೀದಿಸಲು ಆದೇಶ ಹೊರಡಿಸಲಾಗಿದೆ ಎಂದರು.

ಈಗಾಗಲೇ ಹೆಸರುಕಾಳು, ಸೂರ್ಯಕಾಂತಿ ಖರೀದಿಗೆ ಏಜನ್ಸಿ ನೇಮಕ ಮಾಡಿದೆ. ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಲ್ ಸೂರ್ಯಕಾಂತಿ ಮತ್ತು 10 ಕ್ವಿಂಟಲ್ ಹೆಸರುಕಾಳು ಖರೀದಿ ಮಾಡಲಿದೆ. ಹೆಸರುಕಾಳು ಖರೀದಿಗೆ 172 ಖರೀದಿ ಕೇಂದ್ರ ಗುರುತಿಸಲಾಗಿದೆ. 1,982 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಸೂರ್ಯಕಾಂತಿ ಖರೀದಿಗೆ 19 ಖರೀದಿ ಕೇಂದ್ರ ಗುರುತಿಸಲಾಗಿದೆ. 461 ರೈತರು ನೋಂದಣಿ ಮಾಡಿಕೊಂಡಿದ್ದಾರೆ. ಸುಮಾರು 10 ಲಕ್ಷ ಕ್ವಿಂಟಲ್ ಸೋಯಾಬಿನ್ ಮತ್ತು ಎರಡು ಲಕ್ಷ ಕ್ವಿಂಟಲ್ ಉದ್ದಿನಕಾಳು ಖರೀದಿ ಮಾಡಲಾಗುವುದು ಎಂದು ಹೇಳಿದರು.

ಶಿಕ್ಷಕ ಪ್ರಶಸ್ತಿ ತಡೆಹಿಡಿದಿದ್ದಕ್ಕೆ ಶಾಸಕ ಕಿಡಿ

ಉಡುಪಿ: 'ಕುಂದಾಪುರ ಸರ್ಕಾರಿ ಪಿಯು ಕಾಲೇಜಿನ ಪ್ರಾಂಶುಪಾಲ ಬಿ.ಜಿ. ರಾಮಕೃಷ್ಣ ಅವರಿಗೆ ಘೋಷಿಸಿದ್ದ ರಾಜ್ಯ ಮಟ್ಟದ 'ಉತ್ತಮ ಶಿಕ್ಷಕ' ಪ್ರಶಸ್ತಿಯನ್ನು ತಡೆ ಹಿಡಿಯುವ ಮೂಲಕ ಕಾಂಗ್ರೆಸ್ ಸರ್ಕಾರ ಅನ್ಯಾಯ ಮಾಡಿದೆ. ಗಣೇಶ ಮೂರ್ತಿ ವಿಸರ್ಜನೆ ಮಾಡಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೂ ಅದೇ ಸಮುದ್ರಕ್ಕೆ ವಿಸರ್ಜಿಸಲಾಗುವುದು' ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರು.

ಪ್ರಶಸ್ತಿಯನ್ನು ಸರ್ಕಾರ ತಡೆ ಹಿಡಿದಿರುವುದನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ಹಾಗೂ ಮಹಿಳಾ ಮೋರ್ಚಾ ಮಣಿಪಾಲದಲ್ಲಿ ಶುಕ್ರವಾರ ನಡೆಸಿದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಎಸ್‌ಡಿಪಿಐನವರ ಮಾತು ಕೇಳಿ ಸರ್ಕಾರ ಪ್ರಶಸ್ತಿ ತಡೆಹಿಡಿದಿದೆ. ದೇಶ ವಿರೋಧಿ ಚಟುವಟಿಕೆ ನಡೆಸುತ್ತಿರುವ ಎಸ್‌ಡಿಪಿಐಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ ಎಂದು ದೂರಿದರು.

ಕಿತ್ತೂರಿನ 200ನೇ ವಿಜಯೋತ್ಸವಕ್ಕೆ ₹5 ಕೋಟಿ ನೆರವು: ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಕ್ಟೋಬರ್ 23 ರಿಂದ 25ರವರೆಗೆ ಆಚರಣೆ
- ರಾಜ್ಯ ಸರ್ಕಾರದಿಂದ ₹5 ಕೋಟಿ ನೆರವು
- ಮೈಸೂರು ದಸರಾ ಮಾದರಿಯಲ್ಲಿ ಕಿತ್ತೂರಿನಲ್ಲೂ 'ಏರ್ ಶೋ' ಆಯೋಜನೆ

ಬೆಳಗಾವಿ: 'ಚನ್ನಮ್ಮನ ಕಿತ್ತೂರು ಉತ್ಸವದ 200ನೇ ವರ್ಷಾಚರಣೆ ಅಕ್ಟೋಬರ್ 23 ರಿಂದ 25ರವರೆಗೆ ವೈಭವದಿಂದ ನಡೆಯಲಿದ್ದು, ರಾಜ್ಯ ಸರ್ಕಾರ ₹5 ಕೋಟಿ ನೀಡಲಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ನಗರದಲ್ಲಿ ಶುಕ್ರವಾರ ನಡೆದ ಉತ್ಸವದ ಪೂರ್ವಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, 'ಪ್ರತಿ ವರ್ಷ ₹3 ಕೋಟಿ ನೀಡಲಾಗುತಿತ್ತು. ಈ ಸಲ ದ್ವಿಶತಮಾನೋತ್ಸವ ವಿಶಿಷ್ಟವಾಗಿ ಆಚರಿಸಲು ₹2 ಕೋಟಿ ಹೆಚ್ಚು ನೀಡಲಾಗುವುದು. ರಾಷ್ಟ್ರಮಟ್ಟದ ಕ್ರೀಡಾ ಹಾಗೂ ಸಂಸ್ಕೃತಿಕ ಸ್ಪರ್ಧೆ, ಗ್ರಾಮೀಣ ಆಟ ನಡೆಯಲಿವೆ. 20 ಸಮಿತಿಗಳನ್ನು ರಚಿಸಲಾಗುವುದು' ಎಂದರು.

'ಕಿತ್ತೂರು ವಿಜಯೋತ್ಸವಕ್ಕೆ ಕಾರಣರಾದವರು, ಚನ್ನಮ್ಮನ ಸಹವರ್ತಿಗಳು, ರಾಯಣ್ಣನ ಜತೆಗೆ ಗಲ್ಲಿಗೇರಿದ ಇತರ 11 ವೀರರ ಬಗ್ಗೆಯೂ ಬೆಳಕು ಚೆಲ್ಲಬೇಕಿದೆ. ವೀರರ ವಂಶಸ್ಥರನ್ನು ಗುರುತಿಸಿ ಆಯಾ ಪ್ರಾಧಿಕಾರಗಳಲ್ಲಿ ಕಾಯಂ ಸದಸ್ಯರಾಗಿ ನೇಮಿಸಿಕೊಳ್ಳಬೇಕಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕೆಲಸ ಮಾಡಬೇಕು' ಎಂದರು.

'ಜಾನಪದ ವಿಶ್ವವಿದ್ಯಾಲಯದಿಂದ ಒಂದು ವಿಶಿಷ್ಟ ರಥ ಸಿದ್ಧಪಡಿಸಲಾಗುವುದು.



ಸತೀಶ ಜಾರಕಿಹೊಳಿ

ವಿಜಯಜ್ಯೋತಿ ಹೊತ್ತ ರಥವು ಅಕ್ಟೋಬರ್ 2ರಿಂದ ಬೆಂಗಳೂರಿನಿಂದ ಹೊರಟು ರಾಜ್ಯದ ಎಲ್ಲ ಜಿಲ್ಲೆಗೆ ತೆರಳಲಿದೆ' ಎಂದರು.

'ಮೈಸೂರು ದಸರಾ ಮಾದರಿಯಲ್ಲಿ ಕಿತ್ತೂರಿನಲ್ಲೂ 'ಏರ್ ಶೋ' ಏರ್ಪಡಿಸಲಾಗುವುದು. ಧ್ವನಿ ಮತ್ತು ಬೆಳಕಿನ ವ್ಯವಸ್ಥೆ, ಅಂಚೆಚೀಟಿ, ಲಕೋಟೆ ಸಿದ್ಧಪಡಿಸುವುದು, ದೇಶದ ಬೇರೆಬೇರೆ ಭಾಗಗಳಿಂದ ಕುಸ್ತಿ ಪಟುಗಳು, ಕಬಡ್ಡಿ ಆಟಗಾರರು, ಒಲಿಂಪಿಕ್ ಪದಕ ವಿಜೇತರನ್ನು ಆಹ್ವಾನಿಸುವುದು ಸೇರಿ ವಿವಿಧ ಆಕರ್ಷಣೆಗಳಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ತಿಳಿಸಿದರು.

ರಾಜೇಂದ್ರ ಚೆನ್ನಿ ಕೃತಿಗೆ ಗಿರಡ್ಡಿ ವಿಮರ್ಶಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಪ್ರೊ.ರಾಜೇಂದ್ರ ಚೆನ್ನಿ

ಧಾರವಾಡ: ಗಿರಡ್ಡಿ ಗೋವಿಂದ ರಾಜ ಪ್ರತಿಷ್ಠಾನ ನೀಡುವ ಡಾ.ಗಿರಡ್ಡಿ ಗೋವಿಂದ ರಾಜ ವಿಮರ್ಶಾ ಪ್ರಶಸ್ತಿಗೆ ಪ್ರೊ.ರಾಜೇಂದ್ರ ಚೆನ್ನಿ ಅವರ 'ಸಾಂಸ್ಕೃತಿಕ ರಾಜಕೀಯ' ಕೃತಿ ಆಯ್ಕೆಯಾಗಿದೆ.

ಪ್ರಶಸ್ತಿಯು ₹ 25 ಸಾವಿರ ನಗದು ಬಹುಮಾನ, ಸ್ಮರಣಿಕೆ ಒಳಗೊಂಡಿದೆ. ಇದೇ 22ರಂದು ರಂಗಾಯಣದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಮಲ್ಲಿಕಾರ್ಜುನ ಹಿರೇಮಠ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭ್ರೂಣಹತ್ಯೆ ಶಂಕೆ ಹೆರಿಗೆ ಕೊಠಡಿಗೆ ಬೀಗ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಮಹಾಲಿಂಗಪುರದಲ್ಲಿ ಭ್ರೂಣಹತ್ಯೆ ನಡೆದಿದೆ ಎಂಬ ಶಂಕೆ ಮೇಲೆ ಗುರುವಾರ ರಾತ್ರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುವರ್ಣ ಕುಲಕರ್ಣಿ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ, ಪಾಟೀಲ ಆಸ್ಪತ್ರೆಯ ಹೆರಿಗೆ ಕೊಠಡಿ, ಸ್ಕ್ಯಾನಿಂಗ್ ಕೇಂದ್ರವನ್ನು ವಶಕ್ಕೆ ಪಡೆದು ಬಂದ್ ಮಾಡಿದ್ದಾರೆ.

ಗರ್ಭಪಾತಕ್ಕೆ ಒಳಗಾದ ಮಹಿಳೆಯ ಮನೆಗೆ ಭೇಟಿ ನೀಡಿ ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದರು. ಬೇರೆ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಪರೀಕ್ಷೆ ಮಾಡಿಸಿಕೊಂಡಿದ್ದನ್ನು ಮಹಿಳೆ ತಿಳಿಸಿದ್ದು, ಅಲ್ಲಿಯೂ ಕಾರ್ಯಾಚರಣೆ ನಡೆಯಲಿದೆ.

'ಮೂವರು ಪುತ್ರಿಯರನ್ನು ಹೆತ್ತಿರುವ ಮಹಿಳೆಯೊಬ್ಬರು ಗಂಡು ಮಗುವಿಗಾಗಿ ಗರ್ಭಿಣಿಯಾಗಿದ್ದರು. ಮಹಾಲಿಂಗಪುರದ ಸ್ಕ್ಯಾನಿಂಗ್ ಕೇಂದ್ರದಲ್ಲಿ ಸ್ಕ್ಯಾನ್ ಮಾಡಿಸಿದಾಗ ಹೆಣ್ಣು ಮಗುವಿದೆ ಎಂದು ಗೊತ್ತಾಯಿತು. ಪಾಟೀಲ ಆಸ್ಪತ್ರೆಗೆ ಬಂದು ಗರ್ಭಪಾತ ಮಾಡಿಸಿಕೊಂಡಿದ್ದಾರೆ. ಆದರೆ, ಆ ಭ್ರೂಣ ಗಂಡು ಮಗುವಾಗಿತ್ತು' ಎಂದು ತಿಳಿದು ಬಂದಿದೆ.



ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿನ ಪಾಟೀಲ ಆಸ್ಪತ್ರೆಯ ಹೆರಿಗೆ ಕೊಠಡಿಗೆ ಬೀಗ ಮುದ್ರೆ ಹಾಕಲಾಗಿದೆ

'ಡಾ. ಸುವರ್ಣ ಕುಲಕರ್ಣಿ ಅವರೊಂದಿಗೆ ಮಾತನಾಡಿದ್ದೇನೆ. ಭ್ರೂಣಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ತ್ವರಿತವಾಗಿ ಪಿಸಿಪಿಎನ್‌ಡಿ ಕಾಯ್ದೆ ಪ್ರಕಾರ ನ್ಯಾಯಾಲಯದಲ್ಲಿ ಖಾಸಗಿ ದೂರು ಮತ್ತು ಎಂಟಿಪಿ ಕಾಯ್ದೆ ಅನ್ವಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲು ಸೂಚಿಸಿದ್ದೇನೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶಶಿಧರ ಕೋಸಂಬೆ ತಿಳಿಸಿದ್ದಾರೆ.

ಡೆಂಗಿಜ್ವರ ಬಾಲಕಿ ಸಾವು

ಕಾರಟಗಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಸಿದ್ದಾಪುರ ಗ್ರಾಮದಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿದ್ದ ಬಾಲಕಿಯು ಚಿಕಿತ್ಸೆಗೆ ಸ್ಪಂದಿಸದೆ ಗುರುವಾರ ಮೃತಪಟ್ಟಿದ್ದಾಳೆ.



ಸುಫಿಯಾ ಸಿದ್ದಾಪುರ

ಸಿದ್ದಾಪುರದ ಶರಣಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆಯ 6ನೇ ತರಗತಿಯ ಸುಫಿಯಾ ಎಂ.ಡಿ. ಗುಲಾಂ (12) ಮೃತ ಬಾಲಕಿ.

'ಬಾಲಕಿಗೆ ನಮ್ಮಲ್ಲಿ ಚಿಕಿತ್ಸೆ ನೀಡಿಲ್ಲ. ಸಿಂಧನೂರಿನಲ್ಲಿ ಪರೀಕ್ಷಿಸಿದಾಗ ಡೆಂಗಿ ದೃಢಪಟ್ಟಿದೆ ಎಂದು ಹೇಳಲಾಗುತ್ತಿದೆ. ವೈದ್ಯರ ಸಲಹೆಯಂತೆ ಬಳ್ಳಾರಿಯ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಿಳಿರಕ್ತ ಕಣಗಳು ತೀರಾ ಕಡಿಮೆಯಾಗಿದ್ದವು. ಬಾಲಕಿ ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದಾಳೆ' ಎಂದು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಶರಣಪ್ಪ ಚಕೋತಿ ಪ್ರತಿಕ್ರಿಯಿಸಿದ್ದಾರೆ.

'ಸುಫಿಯಾ ಶನಿವಾರ ಶಾಲೆಗೆ ಬಂದಿದ್ದಳು. ಜ್ವರದಿಂದ ಬಳಲುತ್ತಿದ್ದ ಸುಫಿಯಾಗೆ ಸಿಂಧನೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು' ಎಂದು ಶಾಲಾ ಆಡಳಿತ ಮಂಡಳಿ ಅಧ್ಯಕ್ಷ ಬಸವರಾಜ್ ನೀರಗಂಟಿ ತಿಳಿಸಿದರು.

ಗಣಪತಿ: ಸಾಮರಸ್ಯದ ದೇವರು

• ಎಸ್. ಸೂರ್ಯಪ್ರಕಾಶ ಪಂಡಿತ್



ಜಗತ್ತಿನ ಇಂದಿನ ಹಲವು ಸಮಸ್ಯೆಗಳಿಗೆ ಮೂಲವೇ 'ಧರ್ಮ' ಎಂದಾಗಿಬಿಟ್ಟಿದೆ; ಎಂದರೆ ಧರ್ಮವನ್ನು ತಪ್ಪಾಗಿ ತಿಳಿದುಕೊಳ್ಳುತ್ತಿರುವುದೇ ನಮ್ಮ ಎಲ್ಲ ಸಮಸ್ಯೆಗಳಿಗೂ ಮೂಲ. ಧರ್ಮವನ್ನು ಮತವನ್ನಾಗಿ ಅರ್ಥ ಮಾಡಿಕೊಳ್ಳುತ್ತಿದ್ದೇವೆ; ಮತವನ್ನು ಧರ್ಮವನ್ನಾಗಿಸಲು ಹವಣಿಸುತ್ತಿದ್ದೇವೆ. ನಮ್ಮ ಬುದ್ಧಿಗೆ ಒದಗಿರುವ ಇಂಥ ವೈಕಲ್ಯವೇ ಜಗತ್ತಿನಲ್ಲಿ ಅಶಾಂತಿಯನ್ನು ಸೃಷ್ಟಿಸುತ್ತಿದೆ. 'ನನ್ನ ದೇವರೇ ಶ್ರೇಷ್ಠ, ನಿನ್ನ ದೇವರು ನೀಚ' ಎಂಬ ವಿಕೃತ ಮನೋಧರ್ಮವೇ ಈ ಸಮಸ್ಯೆಯ ಕೇಂದ್ರಬಿಂದು. ಯಾವುದೋ ಒಂದು ಸಮುದಾಯವನ್ನಷ್ಟೆ ಉದ್ಧಾರಮಾಡುವವನೂ, ಉಳಿದವರನ್ನು ದಂಡಿಸುವವನೂ 'ದೇವರು' ಹೇಗಾದಾನು? ಎಲ್ಲರನ್ನೂ ಸಲಹುವವನೂ, ಎಲ್ಲರಲ್ಲೂ ಇರುವವನೂ, ಎಲ್ಲೆಲ್ಲಿಯೂ ಇರುವವನೂ, ಎಲ್ಲ ಕಾಲದಲ್ಲೂ ಇರುವವನೂ, ಎಲ್ಲ ತತ್ತ್ವಗಳನ್ನೂ ಎತ್ತಿಹಿಡಿಯುವವನೂ ಯಾರೋ ಅವನಷ್ಟೆ 'ದೇವರು' ಎನಿಸಿಕೊಂಡಾನು, ಅಲ್ಲವೆ? ಗಣಪತಿಯ ಕಲ್ಪನೆಯಲ್ಲಿ ಇಂಥದೊಂದು ಸಮಗ್ರತೆಯನ್ನು ಕಾಣಬಹುದೆನ್ನಿ.

ಗಣಪತಿಯ ತತ್ತ್ವವನ್ನು ನಾವು ವೇದದಲ್ಲಿ ಕಾಣುತ್ತೇವೆ. 'ವೇದ' ಎಂದರೆ ಅರಿವು, ಅನಾದಿ, ಅನಂತ – ಎಂದೇ ಅರ್ಥ; ಈ ಸಂಗತಿಗಳೇ ನಮ್ಮ ಆನಂದಕ್ಕೂ ಆಲೋಚನೆಗೂ ಮೂಲಕಾರಣ. ಗಣಪತಿಯ ಕಲ್ಪನೆಯಲ್ಲಿ ಈ ಎಲ್ಲ ವಿವರಗಳೂ ವಿಗ್ರಹರೂಪವನ್ನು ತಾಳಿವೆ. ಕಾಲದಿಂದ ಕಾಲಕ್ಕೆ ಗಣಪತಿಯ ತತ್ತ್ವವನ್ನು ನಮ್ಮ ಸಂಸ್ಕೃತಿ ಹಲವು ಆಯಾಮಗಳಲ್ಲಿ ಹಿಗ್ಗಿಸಿರುವುದು ದಿಟ. ಗಣಪತಿಯ ಆಕಾರವನ್ನು ಒಮ್ಮೆ ಗಮನಿಸಿದರೂ ತಿಳಿಯುತ್ತದೆ, ಅವನ ವೈಶ್ವಿಕ ಸ್ವರೂಪ. ಸೃಷ್ಟಿಯಲ್ಲಿ ಕಾಣುವ ಯಾವ ಆಕಾರವನ್ನು ನೋಡಿದರೂ ಅದು ಗಣಪತಿಯ ಆಕಾರದಂತೆಯೇ ಕಂಡರೆ, ಈ 'ದರ್ಶನ'ವೇನೂ ಅಚ್ಚರಿಯ ವಿದ್ಯಮಾನ ಎನಿಸದು. 'ಗಣಪತಿ' ಎಂದರೆ ಅದು ವಿಷ್ಣುತತ್ತ್ವವೂ ಹೌದು ತಾನೆ? ಎಂದರೆ ಎಲ್ಲೆಲ್ಲೂ ಇರುವಂಥದ್ದು. ಎಲ್ಲೆಲ್ಲೂ ಇದ್ದರಷ್ಟೆ ಅದನ್ನು ಪರಮಾತ್ಮವಸ್ತು ಎನ್ನಲಾದೀತು. ಅತ್ಯಂತ ಸೂಕ್ಷ್ಮವಾಗಿರುವ 'ಪರಮಾತ್ಮ'ವನ್ನು ನಮಗೆ ಸ್ಥೂಲವಾಗಿ ಕಾಣಿಸಿಕೊಡುತ್ತಿದ್ದಾನೆ, ಗಣಪತಿ. ಹೀಗಾಗಿಯೇ ನಾವು ಸುತ್ತಲೂ ಎಲ್ಲಿ ನೋಡಿದರೂ ಗಣಪತಿಯ ಆಕಾರವೊಂದು ರೂಪುಗೊಂಡಂತೆ ಭಾಸವಾಗುತ್ತದೆ; ಕಾಣುವ ಸಹೃದಯತೆಯೂ ಬೇಕೆನ್ನಿ!

ಗಣಪತಿಯು ಪ್ರತಿನಿಧಿಸುವ ತತ್ತ್ವಗಳು ಕೂಡ ಅವನ ಈ ವಿಶ್ವಾತ್ಮಗುಣಕ್ಕೆ ಸಂಕೇತಗಳಾಗಿವೆ. ಅವನನ್ನು ಕಂಡರೆ ಮಕ್ಕಳಿಗೂ ಆನಂದ, ಹಿರಿಯರಿಗೆ ಗೌರವ; ಹೆಣ್ಣುಮಕ್ಕಳಿಗೆ ಪ್ರೀತಿ. ಅವನು ಸ್ನೇಹಿತನಾಗಿ ನಮ್ಮನ್ನು ನಗಿಸಬಲ್ಲ, ಹಿರಿಯನಾಗಿ ಬೆಳಕನ್ನು ಕಾಣಿಸಬಲ್ಲ, ಪ್ರೀತಿಪಾತ್ರನಾಗಿ ನಮ್ಮನ್ನು ಕಾಪಾಡಬಲ್ಲ. ಅವನು ವಿಘ್ನಕಾರಕನೂ ಹೌದು, ವಿಘ್ನನಾಶಕನೂ ಹೌದು. ಅವನನ್ನು ಬ್ರಹ್ಮಚಾರಿಯಾಗಿಯೂ ಆರಾಧಿಸಬಹುದು; ಸಿದ್ಧಿ–ಬುದ್ಧಿಗಳ ಒಡೆಯನಂತೆಯೂ ಪೂಜಿಸಬಹುದು. ಅವನು ಗೃಹಸ್ಥರಿಗೂ ಒಲಿಯುತ್ತಾನೆ, ಯೋಗಿಗಳ ಧ್ಯಾನಕ್ಕೂ ಒದಗುತ್ತಾನೆ, ತಾಂತ್ರಿಕರ ಸಾಧನೆಗೂ ದಾರಿ ತೋರುತ್ತಾನೆ; ಮೋಕ್ಷಮಾರ್ಗದಲ್ಲಿರುವವರಿಗೆ ತಾನೇ ಓಂಕಾರರೂಪದಲ್ಲಿ ಎದುರುಗೊಳ್ಳುತ್ತಾನೆ. ಗಣಪತಿಯನ್ನು ಒಲಿಸಿಕೊಳ್ಳುವುದೂ ಸುಲಭ; ಹೂವು ಇದ್ದರೆ, ಅಷ್ಟೇ ಸಾಕು; ಬೇಡ, ಹುಲ್ಲು ಇದ್ದರೆ? ಅದೇ ಸಾಕು! ಕಾಯೊಂದನ್ನು ಅರ್ಪಿಸಿದರೂ ಸಾಕು, ಅವನು ನಮ್ಮನ್ನು ಕಾಯುತ್ತಾನೆ. ಅವನು ನಮಗೆ ಒಲಿಯಬೇಕಾದರೆ ನಾವು ನಮ್ಮ ಕಾಯವನ್ನು ಬಗ್ಗಿಸಬೇಕು, ಮನವನ್ನು ಹಿಗ್ಗಿಸಬೇಕು, ಅಷ್ಟೆ!

ಗಣಪತಿಗೆ ಜಾತಿ–ಮತ–ಪ್ರಾಂತ–ಲಿಂಗ–ಭಾಷೆಗಳ ಗೊಡವೆ ಇಲ್ಲ; ಅವನ ಕಲ್ಪನೆಯ ಸೊಗಸು ಇಡಿಯ ಜಗತ್ತನ್ನು ಹರಡಿಕೊಂಡಿದೆ. ಹೀಗೆ ಎಲ್ಲರನ್ನೂ ಬೆಸೆಯಬಲ್ಲ ಸಾಮರ್ಥ್ಯ ಇರುವ ದೈವ ಎಂದರೆ ಅದು ಗಣಪತಿಯೇ ಹೌದು. ಪರತತ್ತ್ವ, ಎಂದರೆ 'ದೈವ' ಎಂಬುದು ಇರುವುದು ಒಂದೇ; ಅದು ಬೇರೆ ಬೇರೆ ಕೋನಗಳಲ್ಲಿ ಬೇರೆ ಬೇರೆ ರೂಪಗಳಲ್ಲಿ ಕಾಣಿಸುತ್ತದೆಯಷ್ಟೆ. ನಾವು ಧ್ಯಾನಸ್ಥರಾಗಿ ನೋಡಿದಾಗ ಈ ಏಕತತ್ತ್ವದ ದರ್ಶನವಾಗುತ್ತದೆ. ಇರುವುದು ಒಂದೇ ತತ್ತ್ವ; ಅದು ಸೃಷ್ಟಿಯ ಅನಿವಾರ್ಯಗಳಿಗೆ ತಕ್ಕಂತೆ ಬೇರೆ ಬೇರೆ ಗುಣಗಳಲ್ಲಿ ಪ್ರಕಟವಾಗುತ್ತಿರುತ್ತದೆಯಷ್ಟೆ. ನಮ್ಮ ಉದ್ದೇಶದಲ್ಲಿ ತಿಳಿತನ ಇದ್ದಾಗ ಈ ಗುಣಗಳು ನಮಗೆ ಬೇಕಾದ ರೂಪದಲ್ಲಿ ಕಾಣಿಸಿಕೊಳ್ಳುತ್ತದೆಯಷ್ಟೆ. ಇಂಥದೊಂದು ಮಹಾನಂದದ ಮಹಾದರ್ಶನಕ್ಕೆ ಕಾರಣವಾಗಬಲ್ಲ ಸಾಮರಸ್ಯದ ದೈವವೇ ಗಣಪತಿ. ❖



ತಾಲೀಮು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಗಜಪಡೆಯ ತಾಲೀಮು ಮೈಸೂರಿನ ಕೆ.ಆರ್. ವೃತ್ತದಲ್ಲಿ ಶುಕ್ರವಾರ ಬೆಳಿಗ್ಗೆ ಕಂಡುಬಂದಿದ್ದು ಹೀಗೆ...
–ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಭಯ ದೂರ ಮಾಡಲು ಶಿಕ್ಷಣ ಇಲಾಖೆಯಿಂದ ಕ್ರಮ

ಘಟಕ ಪರೀಕ್ಷೆ: 'ವೆಬ್‌ಕಾಸ್ಟಿಂಗ್' ಕಣ್ಗಾವಲು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಆಯಾ ಶಾಲೆಗಳು ನಡೆಸುವ ಘಟಕ ಪರೀಕ್ಷೆಗಳಿಗೂ ಇನ್ನು ಮುಂದೆ 'ವೆಬ್‌ಕಾಸ್ಟಿಂಗ್' ಕಣ್ಗಾವಲು ಇರಲಿದೆ.

ಸಾಮೂಹಿಕ ನಕಲು ತಡೆಯಲು 2023–24ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಮೊದಲ ಬಾರಿ ಪರಿಚಯಿಸಿದ ವೆಬ್‌ಕಾಸ್ಟಿಂಗ್ ವ್ಯವಸ್ಥೆಯಿಂದಾಗಿ ಫಲಿತಾಂಶ ಕುಸಿದಿತ್ತು.

ಫಲಿತಾಂಶದಲ್ಲಿನ ಭಾರಿ ಕುಸಿತ ಚರ್ಚೆಗೆ ಗ್ರಾಸವಾದರೂ, ಹೆಚ್ಚು ಫಲಿತಾಂಶ ಪಡೆಯಲು ಇದುವರೆಗೆ ಅನುಸರಿಸುತ್ತಿದ್ದ ವಾಮಮಾರ್ಗಗಳನ್ನು ಅನಾವರಣಗೊಳಿಸಿತ್ತು. ಕಳೆದೆರಡು ದಶಕಗಳಿಂದ 'ಹೆಚ್ಚಿನ ಫಲಿತಾಂಶ' ಎಂಬ ಪ್ರತಿಷ್ಠೆಯ ಬೆನ್ನು ಹತ್ತಿದ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಅಂಕಗಳ ಭ್ರಮಾ ಲೋಕದಲ್ಲಿ ತೇಲಿಸಿದ್ದರು ಎಂಬ ಸತ್ಯವನ್ನು ಬಯಲು ಮಾಡಿತ್ತು.

ಅಕ್ರಮಗಳನ್ನು ತಡೆಯಲು ತೆಗೆದುಕೊಂಡ ಕ್ರಮಗಳಿಂದಾಗಿ ಫಲಿತಾಂಶ 2022–23ನೇ ಸಾಲಿಗಿಂತ ಶೇಕಡ 30ರಷ್ಟು ಕುಸಿತವಾಗಿತ್ತು. ಪರೀಕ್ಷೆ ಬರೆದಿದ್ದ 8.59 ಲಕ್ಷ ವಿದ್ಯಾರ್ಥಿಗಳಲ್ಲಿ 3.97 ಲಕ್ಷ ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು. ಇದರಿಂದ ವಿದ್ಯಾರ್ಥಿಗಳ ಮನೋಬಲ ಕುಗ್ಗುವ ಸಾಧ್ಯತೆ ಇದೆ ಎಂದು ಮನಗಂಡ ಶಿಕ್ಷಣ ಇಲಾಖೆ ಕೃಪಾಂಕ ನಿಯಮಗಳನ್ನು ಬದಲಾಯಿಸಿ, 1.69 ಲಕ್ಷ ವಿದ್ಯಾರ್ಥಿಗಳನ್ನು ತೇರ್ಗಡೆ ಮಾಡಿತ್ತು.

ಫಲಿತಾಂಶ ಕುಸಿತಕ್ಕೆ ಪೂರ್ವ ಸಿದ್ಧತೆ ಮಾಡಿಕೊಳ್ಳದೇ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಪರಿಚಯಿಸಿದ್ದೇ ಕಾರಣ ಎಂದು ವ್ಯಾಪಕ ಟೀಕೆಗಳು ವ್ಯಕ್ತವಾಗಿದ್ದವು. ಕೃಪಾಂಕ ನೀಡಿದ್ದನ್ನೂ ಹಲವರು ಖಂಡಿಸಿದ್ದರು. ಹಾಗಾಗಿ, ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನಡೆಸುವ ಘಟಕ ಪರೀಕ್ಷೆಗಳನ್ನೂ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮೂಲಕವೇ ನಡೆಸುವಂತೆ ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

'ಎಲ್ಲ ಶಾಲೆಗಳು ಕಡ್ಡಾಯವಾಗಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿಕೊಳ್ಳಬೇಕು. ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಕುಳಿತು ಅಧಿಕಾರಿಗಳು ವೆಬ್‌ಕಾಸ್ಟಿಂಗ್ ಮೂಲಕ ಪರೀಕ್ಷಾ ಪ್ರಕ್ರಿಯೆ ವೀಕ್ಷಿಸಬೇಕು. ಸಿ.ಸಿ. ಟಿ.ವಿ. ಕ್ಯಾಮೆರಾ ಸೌಲಭ್ಯ ಇಲ್ಲದ ಶಾಲೆಗಳು ಲಭ್ಯವಿರುವ ಸಮೀಪದ ಶಾಲೆಗಳಿಗೆ ತೆರಳಿ ಪರೀಕ್ಷೆ ಬರೆಸಬೇಕು. ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿದ ನಂತರ ಕಡಿಮೆ ಫಲಿತಾಂಶ ಪಡೆದ ವಿದ್ಯಾರ್ಥಿಗಳ ಜೊತೆ ಚರ್ಚಿಸಿ, ಫಲಿತಾಂಶ ವೃದ್ಧಿಗೆ ಅಗತ್ಯ ಕ್ರಮ ವಹಿಸಬೇಕು' ಎಂದು ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್ ಅವರು ಸೂಚಿಸಿದ್ದಾರೆ.

ಮುಖ್ಯಾಂಶಗಳು

- 2023–24ನೇ ಸಾಲಿನಲ್ಲಿ ಕುಸಿದಿದ್ದ ಫಲಿತಾಂಶ
- ಪ್ರತಿ ತಿಂಗಳ ಘಟಕ ಪರೀಕ್ಷೆಗೂ ವೆಬ್‌ಕಾಸ್ಟಿಂಗ್
- ಸೌಲಭ್ಯ ಇಲ್ಲದಿದ್ದರೆ ಸಮೀಪದ ಶಾಲೆಗಳಲ್ಲಿ ಪರೀಕ್ಷೆ

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವೆಬ್‌ಕಾಸ್ಟಿಂಗ್ ಭಯ ಹೋಗಲಾಡಿಸಲು ಘಟಕ ಪರೀಕ್ಷೆಗಳ ಹಂತದಿಂದಲೇ ಕ್ರಮ ಕೈಗೊಳ್ಳಲಾಗುತ್ತಿದೆ.
ರಿತೇಶ್‌ಕುಮಾರ್ ಸಿಂಗ್, ಪ್ರಧಾನ ಕಾರ್ಯದರ್ಶಿ, ಶಾಲಾ ಶಿಕ್ಷಣ ಇಲಾಖೆ

ಸಿ.ಸಿ.ಟಿ.ವಿ. ಕ್ಯಾಮೆರಾ ಕಡ್ಡಾಯ



ಎಲ್ಲ ಶಾಲೆಗಳಲ್ಲೂ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ. ಅಳವಡಿಸಿದ ಕ್ಯಾಮೆರಾಗಳ ಐಪಿ ಸಂಖ್ಯೆಗಳನ್ನು (ಇಂಟರ್‌ನೆಟ್ ಪ್ರೋಟೋಕಾಲ್ ನಂಬರ್) ಆಯಾ ಶಾಲೆಗಳ ಮುಖ್ಯ ಶಿಕ್ಷಕರು ಮೇಲಧಿಕಾರಿಗಳ ಜೊತೆ ಹಂಚಿಕೊಳ್ಳಬೇಕು. ಐಪಿ ಸಂಖ್ಯೆ ಬಳಸಿಕೊಂಡ ಅಧಿಕಾರಿಗಳು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ತಮ್ಮ ಕಚೇರಿಯಲ್ಲೇ ಕುಳಿತು ಪರೀಕ್ಷಾ ಚಟುವಟಿಕೆ ವೀಕ್ಷಿಸುತ್ತಾರೆ.

ಡಿಸೆಂಬರ್‌ಗೆ ಪಠ್ಯ ಬೋಧನೆ ಪೂರ್ಣ

ಎಸ್‌ಎಸ್‌ಎಲ್‌ಸಿಯ ಎಲ್ಲ ವಿಷಯಗಳ ಪಠ್ಯ ಬೋಧನೆಯನ್ನು ಈ ವರ್ಷ ಡಿಸೆಂಬರ್ ಒಳಗೆ ಪೂರ್ಣಗೊಳಿಸಲಾಗುತ್ತದೆ. ಘಟಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿ ವೀಕ್ಷಿಸಿ, ಕಡಿಮೆ ಫಲಿತಾಂಶ ಪಡೆದ ಮಕ್ಕಳಿಗೆ ವಿಶೇಷ ತರಗತಿ ನಡೆಸಬೇಕು. ಅಂತಹ ಮಕ್ಕಳನ್ನು ಇತರೆ ಮಕ್ಕಳ ಹಂತಕ್ಕೆ ತರಲು ಎಲ್ಲ ಶಿಕ್ಷಕರೂ ಸಮಾನವಾಗಿ ಜವಾಬ್ದಾರಿ ಹಂಚಿಕೊಳ್ಳಬೇಕು. ಬರವಣಿಗೆಯ ಗುಣಮಟ್ಟ ಹೆಚ್ಚಿಸಲು ಪ್ರತಿ ದಿನ ಎರಡು ಪುಟಗಳನ್ನು ಬರೆಸಬೇಕು. ಗಟ್ಟಿಯಾಗಿ ಓದಿಸುವ ಹವ್ಯಾಸ ರೂಢಿಸಬೇಕು. ಪ್ರತಿ 15 ದಿನಗಳಿಗೆ ಒಮ್ಮೆ ಪೋಷಕರ ಸಭೆ ನಡೆಸಿ, ಮಾಹಿತಿ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಸೂಚಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಕೆ.ಪಿ. ಕೃಷ್ಣನ್ ನೇತೃತ್ವ

ಆಸ್ತಿ ನಗದೀಕರಣ ಅವಕಾಶ ಪರಿಶೀಲನೆಗೆ ಐವರ ಸಮಿತಿ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: ರಾಜ್ಯದಲ್ಲಿ ತೆರಿಗೆಯೇತರ ವರಮಾನ ಸಂಗ್ರಹ ಹೆಚ್ಚಳದ ಅವಕಾಶಗಳನ್ನು ಪರಿಶೀಲಿಸಲು ಹಾಗೂ ಪ್ರಮುಖ ಅಭಿವೃದ್ಧಿ ಕಾರ್ಯಗಳನ್ನು ಗುರುತಿಸಲು ನಿವೃತ್ತ ಐಎಎಸ್ ಅಧಿಕಾರಿ ಕೆ.ಪಿ. ಕೃಷ್ಣನ್ ನೇತೃತ್ವದಲ್ಲಿ ಐವರು ಸದಸ್ಯರ ಸಮಿತಿಯನ್ನು ರಾಜ್ಯ ಸರ್ಕಾರ ರಚಿಸಿದೆ.

ಕೇಂದ್ರೀಯ ಪರೋಕ್ಷ ತೆರಿಗೆಗಳು ಮತ್ತು ಸುಂಕ ಮಂಡಳಿಯ (ಸಿಬಿಐಸಿ) ಮಾಜಿ ಅಧ್ಯಕ್ಷ ನಜೀಬ್ ಶಾ, ನಿವೃತ್ತ ಐಎಎಸ್ ಅಧಿಕಾರಿ ಎಚ್. ಶಶಿಧರ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸಂಸ್ಥೆಯ ಪ್ರಾಧ್ಯಾಪಕ ಕೃಷ್ಣರಾಜ್ ಮತ್ತು ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇತರ ಸದಸ್ಯರಾಗಿದ್ದಾರೆ.

ಈ ಕುರಿತು ಆಗಸ್ಟ್ 25ರಂದು ಆದೇಶ ಹೊರಡಿಸಿರುವ ಸರ್ಕಾರ, ವಿವಿಧ ವಲಯಗಳಲ್ಲಿ ಆಸ್ತಿ ನಗದೀಕರಣದ ಅವಕಾಶಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಪಾರದರ್ಶಕವಾಗಿ ಹಾಗೂ ನ್ಯಾಯಯುತವಾಗಿ ಜಾರಿಗೊಳಿಸಲು ಸೂಕ್ತ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ಅಗತ್ಯವಾದ ಶಿಫಾರಸು ಒಳಗೊಂಡ ಸಮಗ್ರ ವರದಿ ನೀಡಲು ಸಮಿತಿಗೆ ಸೂಚಿಸಿದೆ.

ವರದಿ ಸಲ್ಲಿಸಲು ಒಂದು ವರ್ಷ ಅವಧಿ ನಿಗದಿಪಡಿಸಲಾಗಿದೆ. ಎಲ್ಲಾ ಸರ್ಕಾರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ನಿಗಮ–ಮಂಡಳಿಗಳು ಸಮಿತಿಗೆ ಅಗತ್ಯವಾದ ಮಾಹಿತಿ ನೀಡಬೇಕು ಎಂದು ಸೂಚಿಸಲಾಗಿದೆ.

ಐದು 'ಗ್ಯಾರಂಟಿ' ಯೋಜನೆಗಳ ಅನುಷ್ಠಾನದಿಂದ ಎದುರಾಗಿರುವ ಆರ್ಥಿಕ ಹೊರೆಯನ್ನು ಸರಿದೂಗಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಚಿಂತನೆ ನಡೆಸಿತ್ತು. ರಾಜ್ಯದಲ್ಲಿ ವರಮಾನ ಸಂಗ್ರಹ ಹೆಚ್ಚಳಕ್ಕೆ ಇರುವ ಅವಕಾಶಗಳ ಕುರಿತು ಹಣಕಾಸು ಇಲಾಖೆಗೆ ಸಲಹೆ ನೀಡಲು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಕಂಪನಿಯನ್ನು ನೇಮಿಸಿಕೊಳ್ಳಲಾಗಿತ್ತು. ಈ ಕಂಪನಿ ಇತ್ತೀಚೆಗೆ ಪ್ರಾಥಮಿಕ ವರದಿ ಸಲ್ಲಿಸಿದ್ದು, ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ 25,000 ಎಕರೆ ಜಮೀನುಗಳ ನಗದೀಕರಣ ಅಥವಾ ರಾಜ್ಯ ನಿರ್ದೇಶಿತ ನಗರೀಕರಣ ಮಾದರಿಗಳ ಮೂಲಕ ವರಮಾನ ಸಂಗ್ರಹ ಹೆಚ್ಚಿಸಿಕೊಳ್ಳಬಹುದು ಎಂದು ಸಲಹೆ ನೀಡಿತ್ತು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕಳೆದ ಆರ್ಥಿಕ ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ₹36,000 ಕೋಟಿ ವೆಚ್ಚ ಮಾಡಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ಗ್ಯಾರಂಟಿ ಯೋಜನೆಗಳಿಗಾಗಿ ₹52,009 ಕೋಟಿ ನಿಗದಿ ಮಾಡಿದೆ.

'ಗ್ಯಾರಂಟಿ'ಗಳ ಹೊರೆಯು ರಾಜ್ಯ ಸರ್ಕಾರವನ್ನು ರಾಜಸ್ವ ಕೊರತೆಯತ್ತ ತಳ್ಳುತ್ತಿದೆ. ಇದರಿಂದಾಗಿ ಹೆಚ್ಚುವರಿ ಸಂಪನ್ಮೂಲಗಳ ಸಂಗ್ರಹ ಮಾಡಲೇಬೇಕಾದ ಅನಿವಾರ್ಯ ಸ್ಥಿತಿ ಎದುರಾಗಿದೆ. ಇಂತಹ ಸಮಯದಲ್ಲಿ ಖಾಸಗಿ ಪಾಲುದಾರಿಕೆಯೊಂದಿಗೆ ಆಸ್ತಿ ನಗದೀಕರಣಕ್ಕೆ ಮುಂದಾಗಿದ್ದ ಸರ್ಕಾರದ ನಡೆಯನ್ನು ವಿರೋಧ ಪಕ್ಷಗಳು ಟೀಕಿಸಿದ್ದವು.

ಸಮಿತಿ ರಚಿಸಿದಾಕ್ಷಣ ಎಲ್ಲ ಆಸ್ತಿಗಳನ್ನು ನಗದೀಕರಣ ಮಾಡುತ್ತೇವೆ ಎಂದರ್ಥವಲ್ಲ. ಅಂತಹ ಉದ್ದೇಶವೂ ಸರ್ಕಾರಕ್ಕಿಲ್ಲ. ಸಮಿತಿ ಸಾಧ್ಯತೆಗಳನ್ನು ಪರಿಶೀಲಿಸಲಿದೆ ಅಷ್ಟೆ
ಎಲ್.ಕೆ.ಅತೀಕ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ

'ಯೋಜನೆ ಬಿಜೆಪಿಯದ್ದು, ಪ್ರಚಾರ ಕಾಂಗ್ರೆಸ್‌ಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ರೂಪಿಸಿದ ಎತ್ತಿನಹೊಳೆ ಯೋಜನೆಯನ್ನು ತನ್ನದು ಎಂಬ ರೀತಿಯಲ್ಲಿ ಪ್ರಚಾರ ಪಡೆಯುತ್ತಿರುವುದು ರಾಜ್ಯದ ಕಾಂಗ್ರೆಸ್ ಸರ್ಕಾರದ ನೈತಿಕ ದಿವಾಳಿತನವನ್ನು ಸೂಚಿಸುತ್ತದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಲೇವಡಿ ಮಾಡಿದ್ದಾರೆ.

'ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ ಎತ್ತಿನಹೊಳೆ ನೀರು ತಲುಪುತ್ತದೆಯೋ ಇಲ್ಲವೋ ಎಂಬ ಅನುಮಾನ ಜನರಲ್ಲಿದೆ. ಈ ಯೋಜನೆ ರೂಪಿಸಿದ್ದೇ ಶಾಶ್ವತ ಕುಡಿಯುವ ನೀರು ಒದಗಿಸಲು. ಈ ಉದ್ದೇಶವೇ ಈಡೇರದಿದ್ದರೆ, ಇಡೀ ಯೋಜನೆ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ' ಎಂದು ಅವರು ಹೇಳಿದ್ದಾರೆ.

ಉಕ್ಕಿದ ನೀರು: ಉಕ್ಕೇರಿದ ಹರ್ಷ

ಒಂದನೇ ಪುಟದಿಂದ...

2012ರಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡ ಅವರು ₹8,000 ಕೋಟಿ ಮೊತ್ತದ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದರು. 2014ರಲ್ಲಿ ಸಿದ್ದರಾಮಯ್ಯ ಅವರು ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಈ ಯೋಜನೆಗೆ ಭೂಮಿಪೂಜೆ ನೆರವೇರಿಸಿದ್ದರು. ಈಗ ಅವರೇ ಯೋಜನೆಯಡಿ ಮೊದಲ ಹಂತದಲ್ಲಿ ನೀರು ಹರಿಸುವ ಕಾರ್ಯಕ್ಕೂ ಚಾಲನೆ ನೀಡಿದರು.

ಈ ಯೋಜನೆಯಿಂದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಿಗೆ ನೀರು ಹರಿಯಲಿದೆ.

ಮೊದಲ ಹಂತದಲ್ಲಿ ಗುರುತ್ವ ಕಾಲುವೆಯಿಂದ 32.5 ಕಿ.ಮೀ. ನಾಲಾ ಎಸ್ಕೇಪ್ ಮೂಲಕ ವೇದ ವ್ಯಾಲಿಯನ್ನು ನೀರು ಪ್ರವೇಶಿಸಲಿದೆ. ಹಳೇಬೀಡು ಕೆರೆ, ಬೆಳವಾಡಿ ಕೆರೆ ಪ್ರವೇಶಿಸಿ, ಚಿತ್ರದುರ್ಗದ ವಾಣಿ ವಿಲಾಸ ಸಾಗರಕ್ಕೆ ಹರಿಯಲಿದೆ.

ಆರು ಪಂಪ್‌ಗಳು ನಿರಂತರವಾಗಿ ನೀರೆತ್ತಲಿದ್ದು, ಒಂದು ಪಂಪ್ ಹೆಚ್ಚುವರಿಯಾಗಿ ಇರಲಿದೆ. ಯಾವುದಾದರೂ ಒಂದು ಪಂಪ್ ಕೈಕೊಟ್ಟರೆ ಈ ಹೆಚ್ಚುವರಿ ಪಂಪ್ ಬಳಕೆಯಾಗಲಿದೆ. ಎಲ್ಲ ಲಿಫ್ಟ್‌ಗಳ (ಏತ) ಮೂಲಕ ದಿನಕ್ಕೆ 85 ಕ್ಯುಮೆಕ್ಸ್ ನೀರು ಹರಿಯಲಿದೆ.

ಕುಸಿದ ವೇದಿಕೆ

ಹೆಬ್ಬನಹಳ್ಳಿಯಲ್ಲಿ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಹಂತ- 1ರಲ್ಲಿ ವಿತರಣಾ ತೊಟ್ಟಿಗಳ ಬಳಿ ಮುಖ್ಯಮಂತ್ರಿಯವರು ಬಾಗಿನ ಅರ್ಪಿಸಲು ಇಲ್ಲಿ ನಿರ್ಮಿಸಲಾಗಿದ್ದ ವೇದಿಕೆ ಶುಕ್ರವಾರ ಕಾರ್ಯಕ್ರಮ ಆರಂಭವಾಗುವುದಕ್ಕಿಂತ ಮೊದಲು ಕುಸಿದು ಬಿತ್ತು.

ಸಕಲೇಶಪುರ ತಾಲ್ಲೂಕಿನ ಬೈಕೆರೆ ದೊಡ್ಡನಗರದ ಪಂಪ್ ಹೌಸ್‌ನಲ್ಲಿ ನೀರು ಹರಿಸುವುದಕ್ಕೆ ಮಧ್ಯಾಹ್ನ 12ಕ್ಕೆ ಚಾಲನೆ ನೀಡಿದ ಬಳಿಕ ಹೆಬ್ಬನಹಳ್ಳಿಯಲ್ಲಿ ಬಾಗಿನ ಅರ್ಪಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಅದಕ್ಕಾಗಿ ಹೂವು, ತೋರಣಗಳಿಂದ ಅಲಂಕೃತವಾದ ವೇದಿಕೆ ನಿರ್ಮಿಸಲಾಗಿತ್ತು. ಶುಕ್ರವಾರ 11.15ರ ಹೊತ್ತಿಗೆ ವೇದಿಕೆ ಕುಸಿದು ಬಿತ್ತು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ ಬರಪೀಡಿತ 29 ತಾಲ್ಲೂಕುಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಯ ಉದ್ಘಾಟನೆ ಮುನ್ನ ಈ ರೀತಿ ಆಗಿದ್ದು ಅಧಿಕಾರಿಗಳಿಗೆ, ಜನಪ್ರತಿನಿಧಿಗಳಿಗೆ ಬೇಸರ ಉಂಟು ಮಾಡಿತು.

'ಇನ್ನೂ ಐದು ಟಿಎಂಸಿ ಅಡಿ ನೀರು ಪೂರೈಕೆ'

ಒಂದನೇ ಪುಟದಿಂದ...

ಹತ್ತು ವರ್ಷಗಳ ತಾಂತ್ರಿಕ ವರದಿ ಪ್ರಕಾರ 19 ಟಿಎಂಸಿ ಅಡಿ ನೀರು ಸಿಗುತ್ತಿದೆ. ಏಳು ಜಿಲ್ಲೆಗಳಿಗೆ ಕುಡಿಯಲು ಬೇಕಿರುವುದು 14 ಟಿಎಂಸಿ ಅಡಿ ನೀರು. ಹಾಗಾಗಿ ಕುಡಿಯುವ ನೀರಿಗೆ ಯಾವುದೇ ಕೊರತೆಯಾಗುವುದಿಲ್ಲ. ಅದರ ಜೊತೆಗೆ ಕೆರೆಗಳಿಗೆ ತುಂಬಿಸಲು ನೀರು ಅಗತ್ಯವಿದೆ. ಒಟ್ಟು 24 ಟಿಎಂಸಿ ಅಡಿ ನೀರು ಬೇಕಾಗುತ್ತದೆ. ಅಂದರೆ 5 ಟಿಎಂಸಿ ಅಡಿ ನೀರು ಕಡಿಮೆ ಇದೆ. ಅದನ್ನು ಭರ್ತಿ ಮಾಡಲು ಹಳ್ಳಗಳ ಸಮೀಕ್ಷೆ ಆರಂಭಿಸಲಾಗಿದೆ ಎಂದು ಹೇಳಿದರು.

'ಎರಡು ಹಂತದ ಯೋಜನೆ ಇದಾಗಿದ್ದು, ಎರಡನೇ ಹಂತವೂ ನಮ್ಮ ಸರ್ಕಾರದ ಅವಧಿಯಲ್ಲಿಯೇ ಪೂರ್ಣಗೊಳ್ಳಲಿದೆ. ಇದರಲ್ಲಿ ಯಾವುದೇ ಅನುಮಾನ ಬೇಡ ಈ ಯೋಜನೆ ಸಾಕಾರಗೊಳ್ಳುವುದಿಲ್ಲ ಎಂದು ಕೆಲವರು ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಅವರ ಮಾತಿನಲ್ಲಿ ಯಾವುದೇ ಸತ್ಯ ಇಲ್ಲ. ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಈ ಯೋಜನೆಗೆ ಹಣ ನೀಡಲಿಲ್ಲ. ಅವರು ಅನುದಾನ ಒದಗಿಸಿದ್ದರೆ ಇಷ್ಟು ಹೊತ್ತಿಗೆ ಎರಡೂ ಹಂತಗಳು ಪೂರ್ಣಗೊಳ್ಳುತ್ತಿದ್ದವು' ಎಂದು ಟೀಕಿಸಿದರು.

ನೀರು ತುಂಬಿಸುವ ಯೋಜನೆಗೆ ಅರಣ್ಯ ಇಲಾಖೆಯಿಂದ ಕೆಲವು ಕಡೆಗಳಲ್ಲಿ ಸಮಸ್ಯೆಯಾಗಿದೆ. ಕುಡಿಯುವ ನೀರಿಗೆ ಯಾವುದೇ ಅಡ್ಡಿಪಡಿಸಬಾರದು. ಈ ಬಗ್ಗೆ ಕಾನೂನಿನ ತೊಡಕುಗಳಿದ್ದರೆ ಅರಣ್ಯ ಇಲಾಖೆ ಅಧಿಕಾರಿಗಳ ಸಭೆ ಕರೆದು, ಚರ್ಚಿಸಿ ಪರಿಹರಿಸಲಾಗುವುದು. ರೈತರ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಏಲಕ್ಕಿ ಬೆಳೆಗಾರರ ಸಾಲ ಮನ್ನಾ ಮಾಡಲಾಗುವುದು ಎಂದರು.

ಆಲಮಟ್ಟಿ ಅಣೆಕಟ್ಟಿನಲ್ಲಿ 535 ಅಡಿ ಎತ್ತರಕ್ಕೆ ಗೇಟ್ ಅಳವಡಿಸಲಾಗಿತ್ತು. ಆ ಗೇಟ್ ಅನ್ನು ಕತ್ತರಿಸಲಾಗಿದೆ. ಅದು ನನ್ನ ಹೃದಯ ಕತ್ತರಿಸಿದಂತಾಗಿದೆ
ವೀರಪ್ಪ ಮೊಯಿಲಿ, ಮಾಜಿ ಮುಖ್ಯಮಂತ್ರಿ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಇದು ರಾಜ್ಯದಲ್ಲಿ ಐತಿಹಾಸಿಕ ಮತ್ತು ಪವಿತ್ರವಾದ ದಿನ, ಗೌರಿ ಹಬ್ಬದ ದಿನ ಗಂಗೆ ಸಕಲೇಶಪುರದಿಂದ ಮಾರಮ್ಮನ ಕಣಿವೆಗೆ (ವಾಣಿವಿಲಾಸ) ಹರಿಯುತ್ತಿದ್ದಾಳೆ' ಎಂದು ಬಣ್ಣಿಸಿದರು. 'ಏಳೆಂಟು ಜನರು ತಮ್ಮ ಉದ್ಯಮ ನಷ್ಟವಾಗುತ್ತದೆ ಎಂಬ ಕಾರಣಕ್ಕೆ ತಡೆಯಾಜ್ಞೆ ತರಲು ಪ್ರಯತ್ನಿಸಿದ್ದರು. ನಿಮ್ಮ ವೈಯಕ್ತಿಕ ವಿಚಾರ ಇದಲ್ಲ. ರಾಜ್ಯದ ಜನರಿಗೆ ನೀರು ಪೂರೈಸುವ ಯೋಜನೆ ಇದು. ಯಾವ ಕಾರಣಕ್ಕೂ ನಿಲ್ಲುವುದಿಲ್ಲ ಎಂದು ಹೇಳಿದ್ದೆ. ಅದರಂತೆ ನಡೆದುಕೊಂಡಿದ್ದೇನೆ' ಎಂದು ಹೇಳಿದರು.

'ಈ ಯೋಜನೆ ಪೂರ್ಣಗೊಂಡರೆ ತಲೆ ಬೋಳಿಸುವುದಾಗಿ ಕೆಲವರು ಹೇಳಿಕೆ ನೀಡಿದ್ದರು. ಅವರು ತಲೆ ಬೋಳಿಸಿಕೊಳ್ಳುವುದು ಬೇಡ. ಒಳ್ಳೆಯ ದಿನ ಒಳ್ಳೆಯ ಮಾತು ಆಡೋಣ. 2027ರ ಒಳಗೆ ಎರಡನೇ ಹಂತವೂ ಮುಗಿಯಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವರಾದ ಕೆ.ಎನ್.ರಾಜಣ್ಣ, ಜಿ. ಪರಮೇಶ್ವರ, ಕೆ.ಎಚ್. ಮುನಿಯಪ್ಪ, ಎಂ.ಬಿ.ಪಾಟೀಲ, ಬೈರತಿ ಸುರೇಶ್, ಎನ್.ಎಸ್. ಬೋಸರಾಜು, ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಸಿಮೆಂಟ್ ಮಂಜು, ಸಂಸದ ಶ್ರೇಯಸ್ ಪಟೇಲ್, ಏಳು ಜಿಲ್ಲೆಗಳ ಜನಪ್ರತಿನಿಧಿಗಳು, ಅಧಿಕಾರಿಗಳು ಇದ್ದರು.

11 ಜಿಲ್ಲೆಗೆ 'ಯೆಲ್ಲೊ ಅಲರ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ಹನ್ನೊಂದು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ, ತುಮಕೂರು, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಭಾರಿ ಮಳೆಯ ಜತೆಗೆ ನಿರಂತರ ಬೀಸುವ ಗಾಳಿಯ ವೇಗವು ಪ್ರತಿ ಗಂಟೆಗೆ 40ರಿಂದ 50 ಕಿ.ಮೀ. ತಲುಪುವ ಸಾಧ್ಯತೆಯಿದೆ. ಒಳನಾಡಿನ ಉಳಿದ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ ನಿರಂತರ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಭಾನುವಾರವೂ ಕರಾವಳಿ ಹಾಗೂ ಮಲೆನಾಡು ಭಾಗ ಮತ್ತು ಉತ್ತರ ಒಳನಾಡಿನ ಕೆಲವೆಡೆ ಭಾರಿ ಮಳೆಯಾಗುವ ಸಂಭವವಿದೆ. 9 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಬೆಂಗಳೂರಿನಲ್ಲಿ ಮುಂದಿನ ಎರಡು ದಿನಗಳು ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124;48	16,104	15,570
ಹಾರಂಗಿ	2,859	2,858.43	2,572	2,500
ಕಬಿನಿ	2,284.00	2,283.40	4,445	3,948
ಹೇಮಾವತಿ	2,922	2,921.95	6,814	6,765
ಲಿಂಗನಮಕ್ಕಿ	1,819	1,817.55	13,570	13,423
ಸೂಪಾ (ಮೀ)	564	561.96	14,511	4,408.08
ಮಾಣಿ	595	591.14	3,266	-
ತುಂಗಭದ್ರಾ	1,633	1,618.24	70,746	580
ಮಲಪ್ರಭಾ	2,079.5	2,079.00	8,794	4,544
ಘಟಪ್ರಭಾ	2175	2,174.66	10,756	11,394
ಭದ್ರಾ *	186	183.06	8,193	7,001
ಆಲಮಟ್ಟಿ (ಮೀ)	519.6	519.53	64,322	72,436
ನಾರಾಯಣಪುರ (ಮೀ)	492.25	492.18	85,000	95,900

* ನೆಲಮಟ್ಟದಿಂದ

ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಹುದ್ದೆ ನಿರೀಕ್ಷಣೆಯಲ್ಲಿದ್ದ ಐಎಫ್‌ಎಸ್ ಅಧಿಕಾರಿ ಬಿ.ಪಿ. ರವಿ ಅವರನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಐಎಫ್‌ಎಸ್ ಅಧಿಕಾರಿ ಪಿ.ರುದ್ರನ್ ಅವರನ್ನು ಬಾಗಲಕೋಟೆ ವಿಭಾಗೀಯ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ, ರಾಜ್ಯ ಅರಣ್ಯ ಸೇವೆ ಅಧಿಕಾರಿ ಅಬ್ದುಲ್ ಅಜೀಜ್ ಅವರನ್ನು ಹಾವೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ನಕ್ಸಲ್ ಬಂಧನ

ಒಂದನೇ ಪುಟದಿಂದ...

'ಕೇಂದ್ರದ ಗುಪ್ತಚರ ಇಲಾಖೆಯಿಂದ ಮಾಹಿತಿ ಬಂದ ತಕ್ಷಣವೇ ಆತ ಅಡಗಿದ್ದ ಸ್ಥಳವನ್ನು ಪತ್ತೆಹಚ್ಚಿ ಚಲನವಲನದ ಮೇಲೆ ನಿಗಾ ಇಡಲಾಗಿತ್ತು. ಹಣ ಸಂಗ್ರಹ ಹಾಗೂ ರಹಸ್ಯ ಸಭೆ ನಡೆಸಿರುವುದು ಗೊತ್ತಾಗಿದೆ. ಅಲ್ಲದೇ ಆರೋಪಿ, ನಿಷೇಧಿತ ಸಂಘಟನೆಯ ಚಟುವಟಿಕೆಗಳನ್ನು ಉತ್ತರ ಭಾರತದ ವಿವಿಧ ರಾಜ್ಯಗಳಲ್ಲಿ ವಿಸ್ತರಿಸಿಕೊಂಡು ಸಂವಹನಕಾರನಾಗಿ ಕಾರ್ಯನಿರ್ವಹಿಸುತ್ತಿದ್ದ' ಎಂದು ಸಿಸಿಬಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಬಂಧಿತ ನಕ್ಸಲೀಯನ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ 14 ದಿನ ಸಿಸಿಬಿ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ' ಎಂದು ಮೂಲಗಳು ಖಚಿತಪಡಿಸಿವೆ.

ನಕಲಿ ಆಧಾರ್: 'ಆರೋಪಿ ಬಳಿ ಹಲವು ನಕಲಿ ದಾಖಲೆಗಳು ಸಿಕ್ಕಿವೆ. ಅವುಗಳನ್ನು ಪರಿಶೀಲಿಸಲಾಗುತ್ತಿದೆ. 'ವಿಕಾಸ್ ಫಾಡ್ಗೆ' ಹೆಸರಿನಲ್ಲಿ ನಕಲಿ ಆಧಾರ್ ಕಾರ್ಡ್ ಹೊಂದಿದ್ದ. ನಗರದ ಯಾವ ಸ್ಥಳದಲ್ಲಿ ಸಭೆ ನಡೆಸಿದ್ದ? ಯಾರನ್ನು ಭೇಟಿ ಮಾಡಿದ್ದ ಎಂಬುದು ಇನ್ನೂ ಖಚಿತವಾಗಿಲ್ಲ. ಆತ ಸಂಚರಿಸಿದ್ದ ಮಾರ್ಗಗಳಲ್ಲಿನ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ. ರಾಜ್ಯದಲ್ಲಿ ಯಾರಾದರೂ ಈತನ ಜತೆಗೆ ಸಂಪರ್ಕಕ್ಕೆ ಬಂದಿದ್ದಾರೆಯೆ ಎಂಬುದರ ಕುರಿತೂ ತನಿಖೆ ನಡೆಸಲಾಗುತ್ತಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಕಲಾವಿದೆಯರು ಹಾಗೂ ಚಿತ್ರರಂಗದ ಪ್ರಮುಖರು ಭಾಗಿಯಾಗುವ ನಿರೀಕ್ಷೆ

ಲೈಂಗಿಕ ದೌರ್ಜನ್ಯ: 16ಕ್ಕೆ ವಾಣಿಜ್ಯ ಮಂಡಳಿ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಚಲನಚಿತ್ರೋದ್ಯಮದಲ್ಲಿ ಕಲಾವಿದೆಯರು ಎದುರಿಸುತ್ತಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ಅಧ್ಯಯನ ಮಾಡಿ ವರದಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಸೆ.16ರಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯಲ್ಲಿ ಕಲಾವಿದೆಯರು ಹಾಗೂ ಚಿತ್ರರಂಗದ ಪ್ರಮುಖರ ಸಭೆ ನಡೆಯಲಿದೆ.

ಕಲಾವಿದೆಯರು ಎದುರಿಸುತ್ತಿರುವ ಲೈಂಗಿಕ ದೌರ್ಜನ್ಯ ಪ್ರಕರಣಗಳ ಅಧ್ಯಯನಕ್ಕೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಸಮಿತಿಯನ್ನು ರಚಿಸುವಂತೆ ಒತ್ತಾಯಿಸಿ ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಅಂಡ್ ಇಕ್ವಾಲಿಟಿ (ಫೈರ್) ನಿಯೋಗ ಗುರುವಾರ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತ್ತು. ಅದರ ಬೆನ್ನಲ್ಲೇ ಚಿತ್ರರಂಗದ ಎಲ್ಲರನ್ನೂ ಒಟ್ಟುಗೂಡಿಸಿ ಸಭೆ ನಡೆಸುವಂತೆ ರಾಜ್ಯ ಮಹಿಳಾ ಆಯೋಗ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಸೂಚನೆ ನೀಡಿತ್ತು.

'ಚಿತ್ರರಂಗದಲ್ಲಿ ಕಲಾವಿದೆಯರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಸೆ.13ರೊಳಗೆ ಸಭೆ ನಡೆಸಿ ಚರ್ಚಿಸಬೇಕು. ಚಿತ್ರರಂಗದ ನಟಿಯರನ್ನು ಆಹ್ವಾನಿಸಿ ಅವರ ಸಮ್ಮುಖದಲ್ಲಿ ಚಿತ್ರರಂಗದ ಪ್ರಮುಖರೊಂದಿಗೆ ಸಭೆ ನಡೆಸಿ, ಸಮಿತಿ ರಚಿಸಲು ಒತ್ತಾಯಿಸುವಂತೆ ತೀರ್ಮಾನ ತೆಗೆದುಕೊಳ್ಳಿ ಎಂದು ಮಹಿಳಾ ಆಯೋಗ ವಾಣಿಜ್ಯ ಮಂಡಳಿಗೆ ಪತ್ರ ಬರೆದಿತ್ತು. ಈ ಸಂಬಂಧ ವಾಣಿಜ್ಯ ಮಂಡಳಿಯಲ್ಲಿ ಆಂತರಿಕ ಸಭೆ ನಡೆಸಲಾಗಿದೆ. ಗೌರಿ–ಗಣೇಶ ಹಬ್ಬ ಮತ್ತು ಖಾಸಗಿ ಪ್ರಶಸ್ತಿ ಪ್ರದಾನ ಸಮಾರಂಭಗಳಿಂದಾಗಿ ಸಾಕಷ್ಟು ಕಲಾವಿದರು ಲಭ್ಯವಿಲ್ಲದ ಕಾರಣ ಸೆ.16ಕ್ಕೆ ವಾಣಿಜ್ಯ ಮಂಡಳಿ ಆವರಣದಲ್ಲಿ ಸಭೆ ನಡೆಯಲಿದೆ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗೌರವ ಕಾರ್ಯದರ್ಶಿ ಬಾ.ಮಾ. ಗಿರೀಶ್ ಹೇಳಿದರು.

'ಆ ಸಭೆಗೆ ಚಿತ್ರರಂಗದ ಪ್ರಮುಖರೆಲ್ಲರನ್ನು ಆಹ್ವಾನಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ. ನಗರದ ಪ್ರಮುಖ ಪಬ್‌ಗಳಲ್ಲಿ ನಟ–ನಟಿಯರು ಭಾಗಿಯಾಗಿ ಪಾರ್ಟಿ ನಡೆಸುವುದು ವಾಡಿಕೆ. ಸರ್ಕಾರ ಇದಕ್ಕೆ ಮೊದಲು ಕಡಿವಾಣ ಹಾಕಬೇಕು. ಈ ಬಗ್ಗೆಯೂ ಅಂದಿನ ಸಭೆಯಲ್ಲಿ ಚರ್ಚಿಸುತ್ತೇವೆ. ಕಲಾವಿದೆಯರ ಹಿತ ಕಾಪಾಡಲು ವಾಣಿಜ್ಯ ಮಂಡಳಿ ಸದಾ ಬದ್ಧವಾಗಿದೆ' ಎಂದು ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೇರಳ ಸರ್ಕಾರ, ಮಲಯಾಳಂ ಚಿತ್ರರಂಗದಲ್ಲಾಗುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯದ ಅಧ್ಯಯನಕ್ಕೆ ಹೇಮಾ ಸಮಿತಿ ರಚಿಸಿತ್ತು. ಈ ಸಮಿತಿ ನೀಡಿರುವ ವರದಿ ಚಿತ್ರರಂಗದಲ್ಲಿ ಬಿರುಗಾಳಿ ಎಬ್ಬಿಸಿದೆ. ಕೆಲವು ಹೆಸರಾಂತ ನಟ, ನಿರ್ದೇಶಕರು, ನಿರ್ಮಾಪಕರ ಮೇಲೆ ಲೈಂಗಿಕ ದೌರ್ಜನ್ಯ ಆರೋಪಗಳು ದಾಖಲಾಗಿವೆ. ಇದರ ಬೆನ್ನಲ್ಲೇ ಕನ್ನಡ ಚಿತ್ರರಂಗದಲ್ಲಿಯೂ ಅದೇ ರೀತಿ ಸಮಿತಿ ರಚಿಸಬೇಕೆಂದು ಕಲಾವಿದೆಯರಿಂದ ಒತ್ತಡ ಹೆಚ್ಚಾಗಿದೆ.

'ರಾಜ್ಯದಲ್ಲಿ ಮೀ ಟೂ ಪ್ರಕರಣ ಬೆಳಕಿಗೆ ಬಂದಾಗ ವಾಣಿಜ್ಯ ಮಂಡಳಿ ತನ್ನ ಕರ್ತವ್ಯ ನಿಭಾಯಿಸಿತ್ತು. ಇಂಥ ಸಮಸ್ಯೆಗಳ ಪರಿಹಾರಕ್ಕೆ ನಮ್ಮ ವ್ಯಾಪ್ತಿಯಲ್ಲಿ ಸಾಧ್ಯವಿರುವ ಎಲ್ಲ ಯತ್ನಗಳನ್ನು ಮಾಡುತ್ತೇವೆ. ಈ ಹಿಂದೆಯೂ ನಮ್ಮಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ನೇತೃತ್ವದಲ್ಲಿ ಒಂದು ಸಮಿತಿಯಿತ್ತು. ಮತ್ತೆ ಅದೇ ರೀತಿಯ ಸಮಿತಿ ರಚಿಸಲು ನಾವು ಸಿದ್ಧರಿದ್ದೇವೆ' ಎಂದು ಅವರು ಹೇಳಿದರು.

ಕನ್ನಡ ಚಿತ್ರರಂಗದಲ್ಲಿ ದೌರ್ಜನ್ಯ ಇಲ್ಲ: ತಾರಾ ಅನೂರಾಧಾ



ಬೆಂಗಳೂರು: ನನ್ನ ಗಮನಕ್ಕೆ ಬಂದ ಹಾಗೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ಕನ್ನಡ ಚಿತ್ರೋದ್ಯಮದಲ್ಲಿ ಇಲ್ಲ. ಚಿತ್ರರಂಗ ಆ ಮಟ್ಟಿಗೆ ಹಾಳಾಗಿಲ್ಲ. ನಮ್ಮ ಚಿತ್ರರಂಗದಲ್ಲಿ ಕುಟುಂಬದ ಬಾಂಧವ್ಯವಿದೆ. ಆ ರೀತಿ ಪ್ರಕರಣಗಳು ಬೆಳಕಿಗೆ ಬಂದಾಗ ಖಂಡಿತ ವಿರೋಧಿಸಬೇಕು ಎಂದು ನಟಿ ತಾರಾ ಅನೂರಾಧಾ ಹೇಳಿದ್ದಾರೆ.

ಸ್ಥಿತಿಗತಿ ಅಧ್ಯಯನಕ್ಕೆ ಸಮಿತಿ ರಚನೆಯಾಗಬೇಕೆಂದು ಕೆಲವರು ಒತ್ತಾಯಿಸುತ್ತಿದ್ದಾರೆ. ಅದರಲ್ಲಿ ತಪ್ಪಿಲ್ಲ. ಮಹಿಳೆಯರ ರಕ್ಷಣೆಗೆ ಮಹಿಳಾ ಆಯೋಗವಿದೆ. ಚಿತ್ರರಂಗದ ಸಮಸ್ಯೆಗಳ ಪರಿಹಾರಕ್ಕೆ ಚಲನಚಿತ್ರ ವಾಣಿಜ್ಯ ಮಂಡಳಿಯಿದೆ. ಈ ರೀತಿ ಸಮಸ್ಯೆಗಳಾದಾಗ ಇವರೆಲ್ಲ ನ್ಯಾಯ ಒದಗಿಸುತ್ತಾರೆ ಎಂಬ ನಂಬಿಕೆ ಇದೆ ಎಂದಿದ್ದಾರೆ.

ನಟ ರಮೇಶ್ ಅರವಿಂದ್ ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಚಿತ್ರರಂಗ ಮಾತ್ರ ಎಂದಲ್ಲ, ಯಾವುದೇ ಕ್ಷೇತ್ರದಲ್ಲಾದರೂ ಯಾರಿಗೇ ಆದರೂ ಕೊಡಬೇಕಾದ ಅಗತ್ಯ ಗೌರವ ಕೊಡಲೇಬೇಕು. ಯಾರಿಗಾದರೂ ಅನ್ಯಾಯ ಆಗುತ್ತಿದೆ ಎಂದಾದರೆ ನ್ಯಾಯ ಕೇಳುವ ಪ್ರಕ್ರಿಯೆಗೆ ನನ್ನ ಬೆಂಬಲಿದೆ ಎಂದಿದ್ದಾರೆ.

ಇಂಥ ವಿಷಯಗಳು ಬಂದಾಗ ಇಡೀ ಚಿತ್ರರಂಗವನ್ನು ತಕ್ಕಡಿಯ ಒಂದೇ ಕಡೆ ಇಟ್ಟು ತೂಗುವ ಕಾರ್ಯ ನಡೆಯುತ್ತಿರುವುದು ದುರಂತ. ಸಿನಿಮಾ ಎಂಬುದು ಬಹಳ ಅದ್ಭುತ ಕಲೆ. ಇಲ್ಲಿ ಎಲ್ಲರೂ ಬಹಳ ಕಷ್ಟಪಟ್ಟು ಕೆಲಸ ಮಾಡಿರುತ್ತೇವೆ. ಆದರೆ ಇಲ್ಲಿರುವ ಯಾರೋ ಕೆಲವರಿಂದ ಹೀಗೆ ಆದಾಗ ಇಡೀ ಚಿತ್ರರಂಗವನ್ನು ದೂಷಿಸುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.



ಕಲಾವಿದೆಯರ ಸಮಸ್ಯೆ ಆಲಿಸಲು ಸಮಿತಿ ರಚಿಸಬೇಕೆಂಬುದು ಸೂಕ್ತ ಬೇಡಿಕೆ. ಪತ್ರಕ್ಕೆ ಸಹಿ ಮಾಡಿ ಗುಹೆಯಲ್ಲಿ ಕುಳಿತರೆ ಪ್ರಯೋಜನವಿಲ್ಲ. ಹೋಗಿ ಏನಾಗುತ್ತಿದೆ ಎಂದು ನೋಡುವೆ
ರಕ್ಷಿತ್ ಶೆಟ್ಟಿ, ನಟ

ಪ್ರಮುಖ ಕಾರ್ಪೊರೇಟ್ ಆಸ್ಪತ್ರೆಗಳನ್ನು ಯೋಜನೆಯಡಿಗೆ ತರಲು ಮುಂದಾದ ಯಶಸ್ವಿನಿ ಟ್ರಸ್ಟ್

ಯಶಸ್ವಿನಿ: ಆಸ್ಪತ್ರೆ ಜಾಲ ವಿಸ್ತರಣೆ

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಯಶಸ್ವಿನಿ ಯೋಜನೆಯಡಿಯ ಆಸ್ಪತ್ರೆಗಳ ಜಾಲವನ್ನು ವಿಸ್ತರಿಸಲು ಮುಂದಾಗಿರುವ ಯಶಸ್ವಿನಿ ಟ್ರಸ್ಟ್, ಇಲ್ಲಿನ ಪ್ರಮುಖ ಸೂಪರ್ ಸ್ಪೆಷಾಲಿಟಿ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳನ್ನು ಯೋಜನೆ ವ್ಯಾಪ್ತಿಗೆ ತರಲು ಮುಂದಾಗಿದೆ.

ಸದ್ಯ ಈ ಯೋಜನೆಯಡಿ ನಗರದ 61 ಸೇರಿ 600ಕ್ಕೂ ಅಧಿಕ ಆಸ್ಪತ್ರೆಗಳು ನೋಂದಣಿಯಾಗಿವೆ. ಇವುಗಳಲ್ಲಿ ಬಹುತೇಕವು ಖಾಸಗಿ ಆಸ್ಪತ್ರೆಗಳಾಗಿವೆ. ಚಿಕಿತ್ಸಾ ಪ್ಯಾಕೇಜ್ ದರ ಕಡಿಮೆ ಸೇರಿ ವಿವಿಧ ಕಾರಣಗಳಿಂದ ಇಲ್ಲಿನ ಪ್ರಮುಖ ಸೂಪರ್ ಸ್ಪೆಷಾಲಿಟಿ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳು ಯೋಜನೆಯಡಿ ನೋಂದಣಿಗೆ ನಿರಾಸಕ್ತಿ ತೋರಿದ್ದವು. ಇದರಿಂದಾಗಿ ಫಲಾನುಭವಿಗಳಿಗೆ ಚಿಕಿತ್ಸೆ ಪಡೆಯುವುದು ಸಮಸ್ಯೆಯಾಗಿತ್ತು.

ಆದ್ದರಿಂದ ಯೋಜನೆಯಡಿ ಇಲ್ಲಿನ ಪ್ರಮುಖ ಖಾಸಗಿ ಆಸ್ಪತ್ರೆಗಳನ್ನು ತರಲು ಟ್ರಸ್ಟ್ ಮುಂದಾಗಿದ್ದು, ಚಿಕಿತ್ಸಾ ಪ್ಯಾಕೇಜ್ ದರ ಪರಿಷ್ಕರಣೆ, ಕಾಲ ಕಾಲಕ್ಕೆ ಚಿಕಿತ್ಸಾ ಬಿಲ್ಲುಗಳ ಹಣ ಪಾವತಿ ಸೇರಿ ವಿವಿಧ ಕ್ರಮಗಳನ್ನು ಕೈಗೊಂಡಿದೆ. ಇದರಿಂದಾಗಿ




ಪ್ರಮುಖ ಆಸ್ಪತ್ರೆಗಳನ್ನು ಯೋಜನೆಯಡಿಗೆ ತರುವ ಪ್ರಯತ್ನ ನಡೆದಿದೆ. ದರ ಪರಿಷ್ಕರಣೆ ಸೇರಿ ವಿವಿಧ ಕ್ರಮಗಳಿಂದ ನೋಂದಣಿಗೆ ಪ್ರಸ್ತಾವಗಳು ಸಲ್ಲಿಕೆಯಾಗುತ್ತಿವೆ

ಕೆ.ಎನ್. ರಾಜಣ್ಣ, ಸಹಕಾರ ಸಚಿವ

ಯೋಜನೆಯಡಿ ನೋಂದಣಿಗೆ ಖಾಸಗಿ ಆಸ್ಪತ್ರೆಗಳಿಂದ ಪ್ರಸ್ತಾವಗಳು ಸಲ್ಲಿಕೆಯಾಗುತ್ತಿವೆ.

ಯೋಜನೆಯಡಿ ಎಂ.ಎಸ್. ರಾಮಯ್ಯ, ಅಗರವಾಲ್, ಆಕಾಶ್, ಎಸ್.ಎಸ್. ಸ್ಪರ್ಶ್, ವೈದೇಹಿ ವೈದ್ಯಕೀಯ ಕಾಲೇಜು ಸೇರಿ 50 ಖಾಸಗಿ ಆಸ್ಪತ್ರೆಗಳು, ವಿಕ್ಟೋರಿಯಾ, ಬೌರಿಂಗ್, ನೆಫ್ರೊ ಯುರಾಲಜಿ ಸೇರಿ 11 ಸರ್ಕಾರಿ ಆಸ್ಪತ್ರೆಗಳು ಸೇವೆ ಒದಗಿಸುತ್ತಿವೆ. ಆದರೆ, ಮಣಿಪಾಲ್, ಅಪೋಲೊ, ನಾರಾಯಣ ಹೃದಯಾಲಯ, ಫೋರ್ಟಿಸ್ ಒಳಗೊಂಡಂತೆ ವಿವಿಧ ಕಾರ್ಪೊರೇಟ್ ಆಸ್ಪತ್ರೆಗಳು ಯೋಜನೆ ವ್ಯಾಪ್ತಿಗೆ ಬಂದಿಲ್ಲ. ಈ ಆಸ್ಪತ್ರೆಗಳನ್ನೂ ಸೆಳೆಯಲು ಯೋಜನೆಯಡಿ 200ಕ್ಕೂ ಅಧಿಕ ಚಿಕಿತ್ಸೆಗಳ ದರವನ್ನು ಪರಿಷ್ಕರಣೆ ಮಾಡಿದ್ದ ಟ್ರಸ್ಟ್, 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯ ಚಿಕಿತ್ಸಾ ಪ್ಯಾಕೇಜ್‌ಗಿಂತ ಹೆಚ್ಚಿನ ದರವನ್ನು ನಿಗದಿಪಡಿಸಿದೆ. ಯೋಜನೆಯಡಿ ನೋಂದಣಿಗೆ ಸಂಬಂಧಿಸಿದಂತೆ ಆಸ್ಪತ್ರೆಗಳ ಜೊತೆಗೆ ಮಾತುಕತೆ ನಡೆಸಿದೆ.



ಅಂಕಿ ಅಂಶಗಳು

2,128 ಯೋಜನೆಯಡಿ ಲಭ್ಯವಾಗುವ ಚಿಕಿತ್ಸೆಗಳು

₹5 ಲಕ್ಷ ಯೋಜನೆಯಡಿಯ ಗರಿಷ್ಠ ಚಿಕಿತ್ಸಾ ವೆಚ್ಚ

3 ತಿಂಗಳಲ್ಲಿ ₹ 32 ಕೋಟಿ ಮೊತ್ತದ ಚಿಕಿತ್ಸೆ

ಯೋಜನೆಯಡಿ ಈ ಆರ್ಥಿಕ ವರ್ಷದ ಮೊದಲ ಮೂರು ತಿಂಗಳ ಅವಧಿಯಲ್ಲಿ (ಏಪ್ರಿಲ್‌ನಿಂದ ಜೂನ್) 17 ಸಾವಿರ ಫಲಾನುಭವಿಗಳಿಗೆ ₹ 32 ಕೋಟಿ ಮೊತ್ತದ ಚಿಕಿತ್ಸೆ ಒದಗಿಸಲಾಗಿದೆ. ಇವರಲ್ಲಿ ಬಹುತೇಕರು ಖಾಸಗಿ ಆಸ್ಪತ್ರೆಗಳಲ್ಲಿಯೇ ಚಿಕಿತ್ಸೆ ಪಡೆದಿದ್ದಾರೆ.

ಯೋಜನೆ ಮರುಜಾರಿಯಾದ ಬಳಿಕ 478 ಐಸಿಯು ಹಾಗೂ ಎಚ್‌ಡಿಯು ಚಿಕಿತ್ಸೆಗಳನ್ನು ಹೆಚ್ಚುವರಿಯಾಗಿ ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ ಒಟ್ಟು ಚಿಕಿತ್ಸೆಗಳ ಸಂಖ್ಯೆ ಎರಡು ಸಾವಿರದ ಗಡಿ ದಾಟಿದೆ. ಈ ಮೊದಲು ಯೋಜನೆಯಡಿ 1,650 ಚಿಕಿತ್ಸೆಗಳನ್ನು ಒದಗಿಸಲಾಗುತ್ತಿತ್ತು.

1.77 ಲಕ್ಷ ಮಂದಿ ನೋಂದಣಿ: ಸಹಕಾರ ಇಲಾಖೆಯ ಮೂಲಕ 2003ರಲ್ಲಿ ಆರಂಭಗೊಂಡಿದ್ದ ಈ ಯೋಜನೆಯನ್ನು 2018ರ ಮೇ 31ರಂದು ಸ್ಥಗಿತಗೊಳಿಸಿ, ಆರೋಗ್ಯ ಕರ್ನಾಟಕ ಯೋಜನೆಯೊಂದಿಗೆ ವಿಲೀನಗೊಳಿಸಲಾಗಿತ್ತು. ಸಹಕಾರ ಸಂಘದ ಸದಸ್ಯರು ಹಾಗೂ ಅವರ ಕುಟಂಬದ ಸದಸ್ಯರ ಹಿತದೃಷ್ಟಿಯಿಂದ ಸರ್ಕಾರವು 2023ರ ಜನವರಿಯಲ್ಲಿ 'ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್' ಮೂಲಕ ಈ ಯೋಜನೆಗೆ ಮರುಚಾಲನೆ ನೀಡಿತ್ತು. ನಗರದಲ್ಲಿ ಈ ಯೋಜನೆಯಡಿ 1.77 ಲಕ್ಷ ಮಂದಿ ಸದಸ್ಯತ್ವ ಪಡೆದಿದ್ದಾರೆ.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಂತೆ ಈ ಯೋಜನೆಯಲ್ಲಿ ರೆಫರಲ್ ವ್ಯವಸ್ಥೆ ಇಲ್ಲದಿರುವುದರಿಂದ ಸದಸ್ಯರು ಯಾವುದೇ ನೋಂದಾಯಿತ ಆಸ್ಪತ್ರೆಗೆ ನೇರವಾಗಿ ತೆರಳಬಹುದಾಗಿದೆ. ಇದರಿಂದಾಗಿ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಇಲ್ಲಿನ ಪ್ರಮುಖ ಕಾರ್ಪೊರೇಟ್ ಆಸ್ಪತ್ರೆಗಳ ಜೊತೆಗೆ ಮಾತುಕತೆ ನಡೆಸಿದ್ದು, ಯೋಜನೆಯಡಿ ಇನ್ನಷ್ಟು ಆಸ್ಪತ್ರೆಗಳನ್ನು ಸೇರ್ಪಡೆ ಮಾಡಲು ಕ್ರಮ ವಹಿಸಲಾಗಿದೆ. ಯೋಜನೆ ಪ್ರಾರಂಭವಾದಾಗ 370 ಇದ್ದ ಆಸ್ಪತ್ರೆಗಳ ಸಂಖ್ಯೆ ಈಗ 600ರ ಗಡಿ ದಾಟಿದೆ' ಎಂದು ಸಹಕಾರ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಕಾಪಿಕಾಡ್ ಶೋ' ಬಹಿಷ್ಕಾರದ ಬೆದರಿಕೆ

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್

ಪ್ರಜಾವಾಣಿ ವಾರ್ತೆ

ಮಂಗಳೂರು: ತುಳುಚಿತ್ರ ನಟ, ನಿರ್ದೇಶಕ ದೇವದಾಸ್ ಕಾಪಿಕಾಡ್ ಅವರು ಬಿಜೆಪಿ ಸದಸ್ಯತ್ವ ಪಡೆದಿದ್ದಾರೆ ಎನ್ನಲಾದ ಚಿತ್ರಗಳು ವಿವಾದ ಸೃಷ್ಟಿಸಿದ್ದು, ಸೌದಿ ಅರೇಬಿಯಾದಲ್ಲಿ ನಡೆಯಲಿರುವ ಅವರ 'ದಿ ಕಾಪಿಕಾಡ್ ಶೋ'ಗೆ ಬಹಿಷ್ಕಾರ ಹಾಕುವ ಬೆದರಿಕೆಯ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.



ದೇವದಾಸ್ ಕಾಪಿಕಾಡ್

ಇದರ ಬೆನ್ನಲ್ಲೇ ದೇವದಾಸ್ ಕಾಪಿಕಾಡ್ ಅವರು ತಾವು ಬಿಜೆಪಿ ಸದಸ್ಯತ್ವ ಪಡೆದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ.

ಬಿಜೆಪಿ ಸದಸ್ಯತ್ವ ಅಭಿಯಾನದ ಅಂಗವಾಗಿ ಸೆ. 4ರಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಅವರು ದೇವದಾಸ್ ಕಾಪಿಕಾಡ್ ಅವರ ಸ್ಥಳೀಯ ಮನೆಗೆ ಭೇಟಿ ನೀಡಿದ್ದರು. ಈ ವೇಳೆ ದೇವದಾಸ್ ಸದಸ್ಯತ್ವ ಪಡೆದಿದ್ದಾರೆ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕವು ತನ್ನ ಫೇಸ್‌ಬುಕ್ ಪುಟದಲ್ಲಿ ಮಾಹಿತಿ ಹಂಚಿಕೊಂಡಿತ್ತು. ಸದಾನಂದ ಗೌಡರು ಸಹ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಇದನ್ನು ಹಂಚಿಕೊಂಡಿದ್ದರು. ಈ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.



ಬಿಜೆಪಿ ಘಟಕ ಹಂಚಿಕೊಂಡಿದ್ದ ಸದಸ್ಯತ್ವ ಅಭಿಯಾನದ ಚಿತ್ರ

ನಂತರದ ಬೆಳವಣಿಗೆಯಲ್ಲಿ, ಸೆ. 13 ಮತ್ತು 14ರಂದು ಸೌದಿ ಅರೇಬಿಯಾದಲ್ಲಿ ಆಯೋಜಿಸಿದ್ದ ದಿ ಕಾಪಿಕಾಡ್ ಶೋಗೆ ಬಹಿಷ್ಕಾರ ಹಾಕುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡಿವೆ. ಈ ಬಗ್ಗೆ ದೇವದಾಸ್ ಕಾಪಿಕಾಡ್ ಸ್ಪಷ್ಟನೆ ನೀಡಿರುವ ಧ್ವನಿ ಮುದ್ರಣ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹಂಚಿಕೆಯಾಗುತ್ತಿದೆ.

'ಬಿಜೆಪಿ ನಾಯಕರನ್ನು ಸೌಹಾರ್ದವಾಗಿ ಭೇಟಿಯಾಗಿದ್ದು, ನಾನು ಯಾವುದೇ ಪಕ್ಷಕ್ಕೆ ಸೇರ್ಪಡೆಯಾಗಿಲ್ಲ, ಎಲ್ಲ ಪಕ್ಷಗಳ ಮುಖಂಡರ ಜೊತೆ ನನಗೆ ಸೌಹಾರ್ದ ಸಂಬಂಧ ಇದೆ' ಎಂದು ಅವರು ಹೇಳಿಕೊಂಡಿದ್ದಾರೆ.

'ಸದಸ್ಯತ್ವ ಅಭಿಯಾನದ ಭಾಗವಾಗಿ ಸಮಾಜದ ಗಣ್ಯ ವ್ಯಕ್ತಿಗಳು, ಕಲಾವಿದರ ಮನೆಗೆ ಭೇಟಿ ನೀಡುವುದು ಸಹಜ ಪ್ರಕ್ರಿಯೆ. ದೇವದಾಸ್ ಮನೆಗೆ ಭೇಟಿ ನೀಡಿದ್ದು ನಿಜ, ಹಾಗೆಂದ ಮಾತ್ರಕ್ಕೆ ಅವರು ಪಕ್ಷದ ಚಟುವಟಿಕೆಯಲ್ಲಿ ತೊಡಗಿಕೊಳ್ಳುತ್ತಾರೆ ಎಂದರ್ಥವಲ್ಲ' ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಸತೀಶ್ ಕುಂಪಲ ಪ್ರತಿಕ್ರಿಯಿಸಿದ್ದಾರೆ.

ಎಲ್ಲರೂ ಎಚ್‌ಎಂಟಿ ಕೈಗಡಿಯಾರ ಕಟ್ಟಿ: ನಿಖಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಯುವಕರೆಲ್ಲರೂ ನಮ್ಮ ನಾಡಿನ ಹೆಮ್ಮೆಯ ಪ್ರತೀಕವಾದ ಎಚ್‌ಎಂಟಿ ಕೈಗಡಿಯಾರಗಳನ್ನು ಕಟ್ಟಿಕೊಳ್ಳಬೇಕು' ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಕುಮಾರಸ್ವಾಮಿ ಅವರು ಖರೀದಿಸಿ ತಮ್ಮ ಕೈಗೆ ಕಟ್ಟಿದ ಎಚ್‌ಎಂಟಿ ಕೈಗಡಿಯಾರದ ಚಿತ್ರವನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ನಿಖಿಲ್, 'ನಮ್ಮ ಎಚ್‌ಎಂಟಿ, ನಮ್ಮ ಹೆಮ್ಮೆ' ಎಂದಿದ್ದಾರೆ.

'ಎಚ್‌ಎಂಟಿ ಕೈಗಡಿಯಾರ ಒಂದು ಕಾಲದಲ್ಲಿ ಭಾರತದ ಹೃದಯ ಬಡಿತವಾಗಿತ್ತು. ಎಲ್ಲರ ಪಾಲಿಗೂ ಅದು ನಿತ್ಯ ನಾಡಿಯಾಗಿತ್ತು. ನಮ್ಮ ತಲೆಮಾರಿನ ಯುವ ಜನರಿಗೆ ಎಚ್‌ಎಂಟಿ ಕೈಗಡಿಯಾರ ಎಂದರೆ ದೊಡ್ಡ ವಿಷಯವಾಗಿತ್ತು. ಈಗ ನಾನು ಎಚ್‌ಎಂಟಿ ಕಟ್ಟಿದ್ದೇನೆ. ನೀವೂ ಎಚ್‌ಎಂಟಿ ಕಟ್ಟಿಕೊಳ್ಳಿ' ಎಂದು ಕೋರಿದ್ದಾರೆ.



ಎಚ್‌.ಡಿ. ಕುಮಾರಸ್ವಾಮಿ ಅವರು ಎಚ್‌ಎಂಟಿ ಕೈಗಡಿಯಾರವನ್ನು ನಿಖಿಲ್ ಅವರ ಕೈಗೆ ಕಟ್ಟಿದರು

'ಸಿ.ಎಂ ಆಕಾಂಕ್ಷಿಗಳ ಪಟ್ಟಿ ಬೆಳೆಯುತ್ತಿದೆ'

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ; ಪಕ್ಷದ ಸದಸ್ಯತ್ವ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವ ಪರಿಸ್ಥಿತಿ ಹತ್ತಿರವಾಗುತ್ತಿದೆ. ಹೀಗಾಗಿ ಕಾಂಗ್ರೆಸ್‌ನಲ್ಲಿ ಆ ಹುದ್ದೆಯ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗುತ್ತಿದೆ. ಡಿ.ಕೆ.ಶಿವಕುಮಾರ್ ಆ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ' ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎತ್ತಿನಹೊಳೆ ಯೋಜನೆಯ ಮೊದಲನೇ ಹಂತವನ್ನು ಸಿದ್ದರಾಮಯ್ಯ ಅವರು ಶುಕ್ರವಾರ ಉದ್ಘಾಟಿಸಿದ್ದಾರೆ. ಆದರೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಒಂದು ದಿನ ಮೊದಲೇ ಎತ್ತಿನಹೊಳೆಗೆ ಹೋಗಿ, ಪೂಜೆಕಾರ್ಯ ನಡೆಸಿದ್ದಾರೆ. ಸಿದ್ದರಾಮಯ್ಯ ರಾಜಿನಾಮೆ ಕೊಡಲೇಬೇಕಾದ ಸ್ಥಿತಿ ಎದುರಾಗಿದೆ' ಎಂದರು.

'ಎತ್ತಿನಹೊಳೆ ಯೋಜನೆಯ ಕ್ರೆಡಿಟ್ ತೆಗೆದುಕೊಳ್ಳಲು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಮಧ್ಯೆ ಪೈಪೋಟಿ ನಡೆಯುತ್ತಿದೆ. ಅವರಿಬ್ಬರೂ ಪರಸ್ಪರ ಪೈಪೋಟಿ ನಡೆಸುವುದನ್ನು ಬಿಟ್ಟು, ಯೋಜನೆಯಿಂದ ಆ ಭಾಗದ ಜನರಿಗೂ ಅನುಕೂಲವಾಗುವಂತೆ ಮಾಡಬೇಕು' ಎಂದರು.

'ವಾಲ್ಮೀಕಿ ನಿಗಮ ಹಗರಣ, ಮುಡಾ ನಿವೇಶನ ಹಂಚಿಕೆ ಹಗರಣ, ಸಿಎ ನಿವೇಶನ ಹಂಚಿಕೆ ಹಗರಣಗಳು ಮುಖ್ಯಮಂತ್ರಿ ಮತ್ತು ಸಚಿವರಿಗೆ ಸುತ್ತಿಕೊಂಡಿವೆ. ಅವರ ಸಂಕಷ್ಟ ಎಂಥದ್ದು ಎಂಬುದು ನನಗೆ ಅರ್ಥವಾಗುತ್ತಿದೆ. ಆದರೆ ಅದನ್ನು ಒಪ್ಪಿಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹೀಗಾಗಿಯೇ ತಮ್ಮ ವಿರುದ್ಧ ಪಿತೂರಿ ನಡೆಯುತ್ತಿದೆ ಎಂದು ಆರೋಪಿಸುತ್ತಿದ್ದಾರೆ' ಎಂದು ಲೇವಡಿ ಮಾಡಿದರು.



ಬಿ.ವೈ.ವಿಜಯೇಂದ್ರ ಅವರು ಪಕ್ಷದ ಹಿರಿಯ ನಾಯಕ ರಾಮಚಂದ್ರೇಗೌಡ ಅವರನ್ನು ಭೇಟಿ ಮಾಡಿ, ಅವರ ಸದಸ್ಯತ್ವವನ್ನು ನವೀಕರಿಸಿದರು

ಬಿಜೆಪಿ ನಾಯಕರ ವಿರುದ್ಧ ರಾಜ್ಯದ ಕಾಂಗ್ರೆಸ್ ಸರ್ಕಾರ ಹೂಡುತ್ತಿರುವ ಸಂಚು, ಬೆದರಿಕೆ ತಂತ್ರಗಳಿಗೆ ನಾವು ಹೆದರುವ ಪ್ರಶ್ನೆಯೇ ಇಲ್ಲ ಬಿ.ವೈ.ವಿಜಯೇಂದ್ರ

ಬಿಜೆಪಿ, ರಾಜ್ಯ ಘಟಕದ ಅಧ್ಯಕ್ಷ

ಸದಸ್ಯತ್ವ ನೋಂದಣಿ: ವಿಜಯೇಂದ್ರ ಅವರು ರಾಜ್ಯ ಬಿಜೆಪಿಯ ಹಿರಿಯ ನಾಯಕ ರಾಮಚಂದ್ರೇಗೌಡ ಅವರ ಮನೆಗೆ ಭೇಟಿ ನೀಡಿ, ಅವರ ಸದಸ್ಯತ್ವ ನವೀಕರಣ ಮಾಡಿದರು.

'ಆರಂಭದಲ್ಲಿ ನಾವು ರಸ್ತೆಗಳಲ್ಲಿ, ವೃತ್ತಗಳಲ್ಲಿ ಕೂತು ಸದಸ್ಯತ್ವ ನೋಂದಣಿ ಮಾಡಿಸಿದ್ದೆವು. ಈಗ ಮೊಬೈಲ್‌ನಲ್ಲಿಯೇ ಪಕ್ಷದ ಸದಸ್ಯತ್ವ ಪಡೆಯಬಹುದು. ಇದೊಂದು ದೊಡ್ಡ ಅನುಕೂಲ' ಎಂದು ರಾಮಚಂದ್ರೇಗೌಡ ಹೇಳಿದರು.

ಆರ್‌ಜೆಡಿ ಜೊತೆ ಮತ್ತೆಂದೂ ಮೈತ್ರಿ ಇಲ್ಲ–ಬಿಹಾರ ಸಿ.ಎಂ

ಪ್ರಜಾವಾಣಿ ವಾರ್ತೆ

ಪಟ್ನಾ: ಬಿಜೆಪಿಯ ಮೈತ್ರಿ ತೊರೆದು ಎರಡು ಬಾರಿ ಆರ್‌ಜೆಡಿ ಜೊತೆಗೆ ಕೈಜೋಡಿಸಿದ್ದನ್ನು 'ರಾಜಕೀಯ ಪ್ರಮಾದ' ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಬಣ್ಣಿಸಿದ್ದಾರೆ. ಮತ್ತೆಂದಿಗೂ ಲಾಲು ಪ್ರಸಾದ್ ಅವರ ಆರ್‌ಜೆಡಿ ಪಕ್ಷದ ಜೊತೆಗೆ ಕೈಜೋಡಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ಇಲ್ಲಿ ಇಂದಿರಾಗಾಂಧಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು ಬಿಜೆಪಿ ಅಧ್ಯಕ್ಷ, ಕೇಂದ್ರ ಆರೋಗ್ಯ ಸಚಿವ ಜೆ.ಪಿ.ನಡ್ಡಾ ಅವರ ಉಪಸ್ಥಿತಿಯಲ್ಲಿ ಈ ಮಾತು ಹೇಳಿದರು.

ಸೆಪ್ಟೆಂಬರ್ 3ರಂದು ಬಿಹಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ, ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಜೊತೆಗೆ ಗೋಪ್ಯ ಮಾತುಕತೆ ನಡೆಸಿದ್ದರಿಂದ ನಿತೀಶ್ ಕುಮಾರ್ ಅವರ ಈ ಹೇಳಿಕೆ ಮಹತ್ವ ಪಡೆದು ಕೊಂಡಿದೆ.



'ಮಾಹಿತಿ ಆಯುಕ್ತರ ನೇಮಕಾತಿಗೆ ಸಂಬಂಧಿಸಿದತೆ ನಾವು ಭೇಟಿ ಮಾಡಿದ್ದೆವು' ಎಂದು ತೇಜಸ್ವಿ ಯಾದವ್ ಅವರು ಬಳಿಕ ಸ್ಪಷ್ಟಪಡಿಸಿದ್ದರು.

ಈ ಕುರಿತ ಊಹಾಪೋಹಗಳಿಗೆ ಬಿಜೆಪಿ ಅಧ್ಯಕ್ಷರ ಸಮ್ಮುಖದಲ್ಲಿಯೇ ಮುಖ್ಯಮಂತ್ರಿ ಈ ಸ್ಪಷ್ಟನೆ ನೀಡಿದರು. ನಿತೀಶ್ ಅವರ ಜೆಡಿಯು ಕೇಂದ್ರದಲ್ಲಿ ಬಿಜೆಪಿ ಜೊತೆ ಮೈತ್ರಿ ಹೊಂದಿದ್ದು, ಪಕ್ಷದ ಇಬ್ಬರು ಸಚಿವರಾಗಿದ್ದಾರೆ. ಈಗಾಗಿ ನಕಾರಾತ್ಮಕ ಸಂದೇಶ ಹೋಗಬಾರದು ಎಂದು ಸ್ಪಷ್ಟನೆ ನೀಡಿದ್ದಾರೆ ಎನ್ನಲಾಗಿದೆ.

ಮೃತರಲ್ಲಿ ನಾಲ್ವರು ಮಹಿಳೆಯರು, ನಾಲ್ವರು ಮಕ್ಕಳು

ಹಾಥರಸ್‌ನಲ್ಲಿ ಅಪಘಾತ: 15 ಸಾವು

ಹಾಥರಸ್ (ಉತ್ತರ ಪ್ರದೇಶ, ಪಿಟಿಐ): ರಾಷ್ಟ್ರೀಯ ಹೆದ್ದಾರಿ 93ರಲ್ಲಿ ನಡೆದ ಅಪಘಾತದಲ್ಲಿ ನಾಲ್ವರು ಮಹಿಳೆಯರು ಹಾಗೂ ನಾಲ್ವರು ಮಕ್ಕಳು ಸೇರಿದಂತೆ 15 ಮಂದಿ ಮೃತಪಟ್ಟಿದ್ದಾರೆ.

ಹಾಥರಸ್‌ನಿಂದ ಆಗ್ರಾದತ್ತ ಪ್ರಯಾಣಿಸುತ್ತಿದ್ದ ವ್ಯಾನ್‌ಗೆ ಹಿಂದಿನಿಂದ ರಸ್ತೆ ಸಾರಿಗೆ ಬಸ್ ಶುಕ್ರವಾರ ಡಿಕ್ಕಿ ಹೊಡೆಯಿತು.

ಆಗ್ರಾ–ಅಲೀಗಢ ರಾಷ್ಟ್ರೀಯ ಹೆದ್ದಾರಿಯ ಕುವರ್‌ಪುರ್ ಬಳಿ ವ್ಯಾನ್ ಅನ್ನು ಹಿಂದಿಕ್ಕುವ ಭರದಲ್ಲಿ ಈ ಅಪಘಾತ ಸಂಭವಿಸಿದೆ. 15 ಮಂದಿ ಮೃತಪಟ್ಟಿದ್ದು, 13 ಜನ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಸ್ಥಳೀಯ ಎಸ್.ಪಿ ನಿಪುಣ್ ಅಗರ್‌ವಾಲ್ ಮಾಹಿತಿ ನೀಡಿದರು.



ಅಪಘಾತ ಸಂಭವಿಸಿದ ಸ್ಥಳದಲ್ಲಿ ನೆರೆದಿದ್ದ ಜನ –ಪಿಟಿಐ ಚಿತ್ರ

ಸ್ಥಳಕ್ಕೆ ತೆರಳಿ ಅಗತ್ಯ ಪರಿಹಾರ ಕ್ರಮಗಳನ್ನು ನೋಡಿಕೊಳ್ಳುವಂತೆ ಉತ್ತರ ಪ್ರದೇಶದ ಮುಖ್ಯಮಂತ್ರಿ ಆದಿತ್ಯನಾಥ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ ₹2 ಲಕ್ಷ ಪರಿಹಾರವನ್ನು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ. ಗಾಯಾಳುಗಳ ಕುಟುಂದವರಿಗೆ ತಲಾ ₹50 ಸಾವಿರ ಚಿಕಿತ್ಸಾ ನೆರವನ್ನೂ ಪ್ರಕಟಿಸಿದ್ದಾರೆ.

ಮಣಿಪುರ: ಆತಂಕ ಹೆಚ್ಚಿಸಿದ ಡ್ರೋನ್ ಹಾರಾಟ

ಇಂಫಾಲ್ (ಪಿಟಿಐ): ಮಣಿಪುರದ ಬಿಷ್ಣುಪುರ್, ಇಂಫಾಲ್ ಪೂರ್ವ ಜಿಲ್ಲೆಗಳಲ್ಲಿ ಕೆಲವೆಡೆ ಶುಕ್ರವಾರ ರಾತ್ರಿ ಹಲವು ಡ್ರೋನ್‌ಗಳ ಹಾರಾಟ ಕಂಡುಬಂದಿದೆ. ನಿವಾಸಿಗಳು ಮುನ್ನೆಚ್ಚರಿಕೆಯಿಂದ ವಿದ್ಯುತ್ ದೀಪಗಳನ್ನು ನಂದಿಸಿದ್ದಾರೆ.

ಇಂಫಾಲ್ ಪಶ್ಚಿಮ ಜಿಲ್ಲೆಯಲ್ಲಿ ಈ ವಾರದ ಆರಂಭದಲ್ಲಿ ವಸತಿ ಪ್ರದೇಶಗಳ ಮೇಲೆ ಬಾಂಬ್ ದಾಳಿ ನಡೆಸಲು ಡ್ರೋನ್‌ಗಳ ನೆರವು ಪಡೆಯಲಾಗಿತ್ತು. ಹೀಗಾಗಿ ಸ್ಥಳೀಯರಲ್ಲಿ ಆತಂಕ ಮೂಡಿತ್ತು.

ಶುಕ್ರವಾರ ರಾತ್ರಿ ಬಿಷ್ಣುಪುರ್ ಜಿಲ್ಲೆಯ ನರೈನ್‌ಸೇನಾ, ನಂಬೋಲ್ ಕಮಾಂಗ್ ಹಾಗೂ ಇಂಫಾಲ್ ಪೂರ್ವ ಜಿಲ್ಲೆಯ ಪುಖಾವೊ, ಡೋಲೈಥಾಬಿ, ಶಾಂತಿಪುರ ವಲಯದಲ್ಲಿ ಡ್ರೋನ್‌ಗಳು ಕಂಡುಬಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡ್ರೋನ್ ಬಳಸಿ ಬಾಂಬ್ ದಾಳಿ ಕೃತ್ಯ ನಡೆಯುವ ಸಾಧ್ಯತೆ ಇರುವುದರಿಂದ ಭದ್ರತಾ ಪಡೆಗಳು ಕಟ್ಟೆಚ್ಚರ ವಹಿಸಿದ್ದು, ದೊಡ್ಡ ಸಮೂಹಗಳಲ್ಲಿ ಜನರ ಚಲನವಲನದತ್ತ ನಿಗಾ ವಹಿಸಿವೆ.



ಕಾಲೇ ಚಕ್ರ!

ಗುಜರಿಯಾಗಿ ಬದಲಾಗಿರುವ ವಾಹನವೊಂದರ ಮುಂಭಾಗವನ್ನು ವ್ಯಕ್ತಿಯೊಬ್ಬರು ಕೈಗಾಡಿಯಲ್ಲಿ ತೆಗೆದುಕೊಂಡು ಹೋಗುತ್ತಿದ್ದ ಈ ದೃಶ್ಯ ಕಣ್ಣಿಗೆ ಬಿದ್ದಿದ್ದು ಬೆಂಗಳೂರಿನ ಸಿದ್ದಯ್ಯ ರಸ್ತೆಯಲ್ಲಿ. ಮುರುಕುವಾಹನಕ್ಕೆ ಕೈಗಾಡಿಯ ಎರಡು ಚಕ್ರಗಳ ಜೊತೆಗೆ, ತನ್ನೆರಡು ಕಾಲುಗಳನ್ನೇ ಚಕ್ರವನ್ನಾಗಿ ಮಾಡಿಕೊಂಡಂತೆ ಹೆಜ್ಜೆ ಹಾಕುತ್ತಿದ್ದ ಆ ವ್ಯಕ್ತಿಯ ಕಾಲ ಚಕ್ರದಲ್ಲಿ ದಿನವೊಂದು ದಾಖಲಾದ ಬಗೆ ಇದು –ಪ್ರಜಾವಾಣಿ ಚಿತ್ರ / ಎಂ.ಎಸ್‌.ಮಂಜುನಾಥ್

ವಕ್ಫ್ ಆಸ್ತಿ ಸರ್ಕಾರದ್ದಲ್ಲ: ಸಚಿವ ಜಮೀರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಆಸ್ತಿ ಸರ್ಕಾರದ್ದಲ್ಲ; ಸಮಾಜದ ದಾನಿಗಳು ನೀಡಿದ್ದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ನಡೆದ ಜಿಲ್ಲಾ ವಕ್ಫ್ ಅಧ್ಯಕ್ಷರು, ಅಧಿಕಾರಿಗಳ ಸಭೆಯ ನಂತರ ಮಾತನಾಡಿದ ಅವರು, 'ವಕ್ಫ್ ಆಸ್ತಿಯ ಒಂದು ಇಂಚನ್ನೂ ಸರ್ಕಾರದಿಂದ ಪಡೆದಿಲ್ಲ, ಸಮಾಜದ ಒಳಿತಿಗಾಗಿ ದಾನಿಗಳು ಉದಾರವಾಗಿ ನೀಡಿದ್ದಾರೆ. ದೇವರ ಆಸ್ತಿಯ ಸಂರಕ್ಷಣೆ ಸಮಾಜದ ಎಲ್ಲರ ಹೊಣೆ' ಎಂದರು.

'ವಕ್ಫ್ ಮಂಡಳಿಯಿಂದ 15 ಜಿಲ್ಲೆಗಳಲ್ಲಿ ಮಹಿಳಾ ಕಾಲೇಜುಗಳನ್ನು ನಿರ್ಮಿಸಲಾಗುತ್ತಿದೆ. ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಆಸ್ಪತ್ರೆ ನಿರ್ಮಾಣಕ್ಕೆ ಚಿಂತನೆ ನಡೆದಿದೆ. ಜಿಲ್ಲಾಮಟ್ಟದಲ್ಲಿ ನಡೆಸುವ ಅದಾಲತ್‌ನಿಂದ ಹಲವು ಸಮಸ್ಯೆಗಳು ಬಗೆಹರಿದಿವೆ' ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಬಾಷಾ, ಸದಸ್ಯರಾದ ಯಾಕೊಬ್, ಮೌಲಾನಾ ಶಾಫಿ ಸಾದಿ, ರಿಯಾಜ್, ಅಸೀಫ್ ಉಪಸ್ಥಿತರಿದ್ದರು.

ಆಂಧ್ರಪ್ರದೇಶದಿಂದ ಬಂದು ಕಳ್ಳತನ: 38 ಸೀರೆಗಳ ವಶ

ರೇಷ್ಮೆ ಸೀರೆ ಕಳವು: ಮಹಿಳೆಯರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಟ್ಟೆ ಖರೀದಿಸುವ ನೆಪದಲ್ಲಿ ಅಂಗಡಿಗಳಿಗೆ ತೆರಳಿ ಸಿಬ್ಬಂದಿಯ ಗಮನ ಬೇರೆಡೆ ಸೆಳೆದು ದುಬಾರಿ ಬೆಲೆಯ ರೇಷ್ಮೆ ಸೀರೆಗಳನ್ನು ಕಳ್ಳತನ ಮಾಡಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಜೆ.ಪಿ.ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ವಿಜಯವಾಡದ ಜಾನಕಿ, ಪೊನ್ನುರು ಮಲ್ಲಿ, ಮೇಧ ರಜಿನಿ ಹಾಗೂ ವೆಂಕಟೇಶ್ವರಮ್ಮ ಎಂಬುವರನ್ನು ಬಂಧಿಸಿ, ₹17.5 ಲಕ್ಷ ಮೌಲ್ಯದ 38 ರೇಷ್ಮೆ ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಇಬ್ಬರು ತಲೆ ಮರೆಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೆ.ಪಿ. ನಗರ ಠಾಣಾ ವ್ಯಾಪ್ತಿಯ ಸಿಲ್ಕ್ ಹೌಸ್‌ವೊಂದರಲ್ಲಿ ಆಗಸ್ಟ್ 25ರಂದು ಸೀರೆ ಖರೀದಿ ನೆಪದಲ್ಲಿ ಬಂದ ಆರು ಮಹಿಳೆಯರು, ದುಬಾರಿ ಬೆಲೆಯ ರೇಷ್ಮೆ ಸೀರೆ ತೋರಿಸುವಂತೆ ಸಿಬ್ಬಂದಿಗೆ ಸೂಚಿಸಿದ್ದರು. ಸೀರೆಗಳನ್ನು ತೋರಿಸುವಾಗಲೇ ಸಿಬ್ಬಂದಿಯ ಗಮನ ಬೇರೆಡೆ ಸೆಳೆದರು. ಇಬ್ಬರು ಮಹಿಳೆಯರು ತಾವು ಧರಿಸಿದ್ದ ಒಳ ಉಡುಪಿನಲ್ಲಿ ಎಂಟು ಹೊಸ ಸೀರೆ ಅಡಗಿಸಿಟ್ಟುಕೊಂಡು ಪರಾರಿಯಾದರು.

ಬಳಿಕ ಅಂಗಡಿಯಲ್ಲಿದ್ದ ನಾಲ್ವರು ಮಹಿಳೆಯರು ಒಟ್ಟು 10 ಸೀರೆಗಳನ್ನು ಬಚ್ಚಿಟ್ಟುಕೊಂಡು ಅಂಗಡಿಯಿಂದ ಹೊರ ಹೋಗುವಾಗ ಅನುಮಾನಗೊಂಡ ಸಿಬ್ಬಂದಿ ತಡೆದು ಪರಿಶೀಲನೆ ನಡೆಸಿದ್ದರು. ಆಗ ಕಳ್ಳತನ ಮಾಡಿರುವುದು ಗೊತ್ತಾಯಿತು. ಅಂಗಡಿ ಮಾಲೀಕರ ದೂರು ಆಧರಿಸಿ ಪೊಲೀಸರು ಸ್ಥಳಕ್ಕೆ ಬಂದು ಆರೋಪಿಗಳನ್ನು ಬಂಧಿಸಿದರು.

ಆರೋಪಿಗಳನ್ನು ವಿಚಾರಣೆಗೊಳಪಡಿಸಿದಾಗ ಜಯನಗರ, ಜೆ.ಪಿ. ನಗರದ ಸೀರೆ ಅಂಗಡಿಗಳಲ್ಲಿಯೂ ಸಿಬ್ಬಂದಿಯ ಗಮನ ಬೇರೆಡೆ ಸೆಳೆದು ಸೀರೆಗಳನ್ನು ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಕದ್ದ ಸೀರೆಗಳನ್ನು ಸ್ನೇಹಿತರ ಮೂಲಕ ಕಡಿಮೆ ಬೆಲೆಗೆ ವಿಜಯವಾಡದಲ್ಲಿ ಮಾರಾಟ ಮಾಡಿ ಹಣ ಸಂಪಾದನೆ ಮಾಡುತ್ತಿದ್ದರು. ಬಂಧಿತ ಮಹಿಳೆಯರ ಸ್ನೇಹಿತನೊಬ್ಬ ಕೋರಮಂಗಲದಲ್ಲಿ ವಾಸವಿದ್ದು, 28 ರೇಷ್ಮೆ ಸೀರೆಗಳನ್ನು ತಂದು ಠಾಣೆಗೆ ಒಪ್ಪಿಸಿದರು. ಉಳಿದ ಸೀರೆಗಳನ್ನು ಆರೋಪಿಗಳಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಅಗ್ನಿ–4 ಖಂಡಾಂತರ ಕ್ಷಿಪಣಿ ಪರೀಕ್ಷೆ ಯಶಸ್ವಿ

ಬಾಲಾಸೋರ್ (ಒಡಿಶಾ, ಪಿಟಿಐ): ಮಧ್ಯಮ ದೂರ ಕ್ರಮಿಸಬಲ್ಲ ಖಂಡಾಂತರ ಕ್ಷಿಪಣಿ ಅಗ್ನಿ–4ರ ಪ್ರಯೋಗಾರ್ಥ ಪರೀಕ್ಷೆಯು ಒಡಿಶಾದ ಚಾಂದೀಪುರದಲ್ಲಿ ಶುಕ್ರವಾರ ಯಶಸ್ವಿಯಾಗಿ ನಡೆಯಿತು.


ಕ್ಷಿಪಣಿಯ ಕಾರ್ಯಾಚರಣೆಯು ಸಮರ್ಪಕವಾಗಿದೆ. ತಾಂತ್ರಿಕ ಅಂಶಗಳೆಲ್ಲ ಸರಿಯಾಗಿವೆ ಎನ್ನುವುದು ಈ ಪರೀಕ್ಷೆಯಿಂದ ದೃಢಪಟ್ಟಿದೆ ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

ಮಹಾರಾಷ್ಟ್ರ ಚುನಾವಣೆ; ಮಹಾಯುತಿಯಲ್ಲಿ ಬಿರುಕು

ಶಿಂದೆ ಹೆಸರು ಕೈ ಬಿಟ್ಟಿದ್ದಕ್ಕೆ ಆಕ್ಷೇಪ

ಮುಂಬೈ (ಪಿಟಿಐ): ಮಹಾರಾಷ್ಟ್ರ ಆಡಳಿತಾರೂಢ 'ಮಹಾಯುತಿ' ಮೈತ್ರಿ ಒಕ್ಕೂಟದಲ್ಲಿ ಬಿರುಕು ಕಾಣಿಸಿಕೊಂಡಿದೆ.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ 'ಲಡ್ಕಿ ಬಹೀನ್ ಯೋಜನೆ'ಯ ಪ್ರಚಾರದ ಕರಪತ್ರ ಹಾಗೂ ಜಾಹೀರಾತುಗಳಲ್ಲಿ ಮುಖ್ಯಮಂತ್ರಿ ಏಕನಾಥ ಶಿಂದೆ ಹೆಸರು ಕೈ ಬಿಟ್ಟಿರುವುದಕ್ಕೆ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ವಿರುದ್ಧ ಶಿವಸೇನಾ ಮುಖಂಡ ಹಾಗೂ ಅಬಕಾರಿ ಸಚಿವ ಶಂಭುರಾಜ್ ದೇಸಾಯಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಶಂಭುರಾಜ್ ದೇಸಾಯಿ

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, 'ರಾಜ್ಯದ ಪ್ರತಿ ಮಹಿಳೆಗೂ ಮಾಸಿಕ ₹1,500 ವಿತರಿಸುವ 'ಮುಖ್ಯಮಂತ್ರಿ ಲಡ್ಕಿ ಬಹೀನ್ ಯೋಜನೆ'ಯ ಸಾಧನೆಯನ್ನು ಉಪಮುಖ್ಯಮಂತ್ರಿ ಅಜಿತ್ ಪವಾರ್ ತಮ್ಮದೆಂದು ಬಿಂಬಿಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಸಮಾರಂಭಗಳಲ್ಲಿ ಯೋಜನೆಯ ಪೂರ್ಣ ಹೆಸರು ಬಳಸುತ್ತಿಲ್ಲ. ಆದರೆ, ಯೋಜನೆಯು 'ಮುಖ್ಯಮಂತ್ರಿ' ಎಂಬುದನ್ನು ಒಳಗೊಂಡಿದೆ. ಅದನ್ನು ಕೈ ಬಿಟ್ಟಿರುವುದು ಸರಿಯಲ್ಲ. ಇಂತಹ ಬೆಳವಣಿಗೆಯೂ ಒಳ್ಳೆಯದಲ್ಲ' ಎಂದು ತಿಳಿಸಿದ್ದಾರೆ.

'ಇದು ರಾಜ್ಯ ಸರ್ಕಾರದ ಯೋಜನೆಯಾಗಿದ್ದು, ಪವಾರ್ ಅವರು ಎಲ್ಲರನ್ನೂ ಜತೆಗೆ ಕರೆದೊಯ್ಯಬೇಕು' ಎಂದು ಒತ್ತಾಯಿಸಿದ್ದಾರೆ.

ಮಹಾರಾಷ್ಟ್ರ ವಿಧಾನಸಭೆಗೆ ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದ್ದು, ಹಣಕಾಸು ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರು ಕಳೆದೊಂದು ತಿಂಗಳಿನಿಂದ ರಾಜ್ಯದಾದ್ಯಂತ 'ಜನ್ ಸಮ್ಮಾನ್ ಯಾತ್ರೆ' ಹಮ್ಮಿಕೊಂಡಿದ್ದಾರೆ.

ಶೇ 75ರಷ್ಟು ಸಾಲ ಪಡೆಯಲು ಸಚಿವ ಸಂಪುಟ ಒಪ್ಪಿಗೆ

₹25,000 ಕೋಟಿ ವೆಚ್ಚದಲ್ಲಿ ಒಆರ್‌ಆರ್, ಬ್ಯುಸಿನೆಸ್ ಕಾರಿಡಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಮಾರು ₹25,000 ಕೋಟಿ ಅಂದಾಜು ವೆಚ್ಚದಲ್ಲಿ ಬೆಂಗಳೂರು ಹೊರವರ್ತುಲ ರಸ್ತೆ ಯೋಜನೆ ಮತ್ತು ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಯೋಜನೆ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಈ ಯೋಜನೆಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯುವ ಪ್ರಸ್ತಾವಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿದರು. ಈ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅನುಷ್ಠಾನಕ್ಕೆ ತರಲಿದೆ.

'ಆರ್ಥಿಕ ಇಲಾಖೆಯ ಅಭಿಪ್ರಾಯದ ಪ್ರಕಾರ ಆರ್‌ಇಸಿ, ಹುಡ್ಕೊ, ಪಿಎಫ್‌ಸಿ ಹಾಗೂ ಇತರ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಒಪ್ಪಿಗೆ ನೀಡಲಾಯಿತು. ಶೇ 75 ರಷ್ಟು ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿ ಪಡೆಯುವ ಸಾಲದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ಭದ್ರತೆ ನೀಡಲು ಮತ್ತು ಬಡ್ಡಿ ಮರುಪಾವತಿಯನ್ನು ಸರ್ಕಾರದ ಅನುದಾನದ ಮೂಲಕ ನೀಡಲು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲು ಅನುಮತಿ ನೀಡಲಾಗಿದೆ' ಎಂದರು.

ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲದ ಮೊತ್ತಕ್ಕೆ ರಾಜ್ಯ ಸರ್ಕಾರದ ವತಿಯಿಂದ ಭದ್ರತೆ ನೀಡಲು ಮತ್ತು ಆರ್ಥಿಕ ಇಲಾಖೆಯ ಅಭಿಪ್ರಾಯದಂತೆ ಬಡ್ಡಿ ಮೊತ್ತವನ್ನು ಬಿಡಿಎ ಮತ್ತು ರಾಜ್ಯ ಸರ್ಕಾರ ಭರಿಸಬೇಕು ಎಂಬ ಅಂಶಕ್ಕೂ ಒಪ್ಪಿಗೆ ನೀಡಲಾಯಿತು ಎಂದು ಹೇಳಿದರು.

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಲಿಮಿಟೆಡ್ ಅಧ್ಯಕ್ಷರ ಸ್ಥಾನಕ್ಕೆ ಬೆಂಗಳೂರು ಅಭಿವೃದ್ಧಿ ಸಚಿವರ ಬದಲಾಗಿ ಬೇರೊಬ್ಬರನ್ನು ನೇಮಿಸಲೂ ಸಂಪುಟ ಸಭೆ ಅನುಮತಿ ನೀಡಿದೆ ಎಂದರು.

ಇತರ ನಿರ್ಣಯಗಳು:

- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಾಕಿ ಆಸ್ತಿ ತೆರಿಗೆ ಪಾವತಿಗೆ ಸಂಬಂಧಿಸಿದಂತೆ ಒಂದು ಬಾರಿಗೆ ಪಾವತಿಸುವ ಯೋಜನೆ ಅಂತಿಮ ದಿನಾಂಕವನ್ನು ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿ ಹೊರಡಿಸಿರುವ ಆದೇಶಕ್ಕೆ ಘಟನೋತ್ತರ ಅನುಮತಿ ಹಾಗೂ ಯೋಜನೆ ಅವಧಿಯನ್ನು 2024ರ ನವೆಂಬರ್ 30ರವರೆಗೆ ವಿಸ್ತರಿಸಲು ಬೆಂಗಳೂರು ಮಹಾನಗರ ಪಾಲಿಕೆ (2ನೇ ತಿದ್ದುಪಡಿ) ವಿಧೇಯಕ, 2024ಕ್ಕೆ ಅನುಮೋದನೆ.
- ಬೆಂಗಳೂರಿನ ನ್ಯೂರಾಲಜಿ ಸಂಸ್ಥೆಯ ಹೊರ ರೋಗಿಗಳ ವಿಭಾಗಕ್ಕೆ ₹16.15 ಕೋಟಿ ಅಂದಾಜು ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ ಮಾಡುವ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ.
- ಬೆಂಗಳೂರು ನವೀಕರಿಸಬಹುದಾದ ಇಂಧನ ಪಾರ್ಕ್ ನಿಗಮ ನಿಯಮಿತ ಎಂಬ ನವೀಕರಿಸಬಹುದಾದ ಇಂಧನ ಪಾರ್ಕ್ ಅನ್ನು ನಗರಾಭಿವೃದ್ಧಿ ಇಲಾಖೆಯ ವಿವಿಧ ಅಂಗ ಸಂಸ್ಥೆಗಳ ಜಂಟಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಅನುಮೋದನೆ.
- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 600 ಕೈದಿಗಳ ಸಾಮರ್ಥ್ಯವುಳ್ಳ ನೂತನ ಕೇಂದ್ರ ಕಾರಾಗೃಹ, ವಸತಿಯೇತರ ಕಟ್ಟಡಗಳು ಮತ್ತು ರಸ್ತೆ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.
- ಸಾಮರ್ಥ್ಯ ಪ್ರಮಾಣಪತ್ರ ನವೀಕರಣಕ್ಕೆ ಬರುವ ವಾಹನಗಳಿಗೆ ಅರ್ಹತಾ ಪರೀಕ್ಷೆ ಕೈಗೊಳ್ಳಲು ರಾಜ್ಯದ 32 ಸ್ಥಳಗಳಲ್ಲಿ ಸ್ವಯಂ ಚಾಲಿತ ವಾಹನಗಳ ಪರೀಕ್ಷಾ ಕೇಂದ್ರವನ್ನು ₹341 ಕೋಟಿ ಅಂದಾಜು ವೆಚ್ಚದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ.

'ನಿಪುಣ ಕರ್ನಾಟಕ' ಯೋಜನೆ ಜಾರಿಗೆ ಒಪ್ಪಿಗೆ

ಬೆಂಗಳೂರು: ಆಧುನಿಕ ತಂತ್ರಜ್ಞಾನಗಳಲ್ಲಿ ಜಾಗತಿಕ ಸ್ಪರ್ಧಾತ್ಮಕತೆಗಾಗಿ ಕೌಶಲ ತರಬೇತಿ ನೀಡುವ 'ನಿಪುಣ ಕರ್ನಾಟಕ' ಯೋಜನೆ ಆರಂಭಿಸಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.



ಈ ಯೋಜನೆಯನ್ನು ₹100 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲಾಗುವುದು. 2024–25ನೇ ಸಾಲಿನಲ್ಲಿ ಈ ಯೋಜನೆಯನ್ನು ₹10 ಕೋಟಿ ವೆಚ್ಚದಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಲಾಗುವುದು. ಈ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉದಯೋನ್ಮುಖ ತಂತ್ರಜ್ಞಾನಗಳ ಕ್ಷೇತ್ರದ ಕೈಗಾರಿಕೆಗಳ ಬೇಡಿಕೆಗಳನ್ನು ಈಡೇರಿಸಲು ಮತ್ತು ಕರ್ನಾಟಕದ ಯುವಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಕೌಶಲ ಮತ್ತು ಪುನರ್ ಕೌಶಲ ಹಾಗೂ ವೃತ್ತಿಪರ ತರಬೇತಿ ನೀಡಲಾಗುವುದು ಎಂದು ಹೇಳಿದರು.

ಹಾಸಿಗೆ, ದಿಂಬು, ಡೆಸ್ಕ್ ಖರೀದಿಗೆ ₹18.54 ಕೋಟಿ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲಾ– ಕಾಲೇಜುಗಳಿಗೆ ₹18.54 ಕೋಟಿ ವೆಚ್ಚದಲ್ಲಿ ಹಾಸಿಗೆ, ದಿಂಬು, ಡೆಸ್ಕ್ ಕಂ ಬೆಂಚ್ ಪೂರೈಕೆಗಾಗಿ ಟೆಂಡರ್ ಕರೆಯಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ 174 ಮೊರಾರ್ಜಿ ದೇಸಾಯಿ ವಸತಿಶಾಲೆಗಳು ಕ್ರೈಸ್ ಅಡಿ ಕಾರ್ಯನಿರ್ವಹಿಸುತ್ತಿವೆ. 43,030 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. 174 ರಲ್ಲಿ 66 ವಸತಿ ಶಾಲಾ–ಕಾಲೇಜುಗಳಿಗೆ 16,025 ಹಾಸಿಗೆ ಮತ್ತು ದಿಂಬುಗಳು ಹಾಗೂ 158 ವಸತಿ ಶಾಲಾ ಕಾಲೇಜುಗಳಿಗೆ 5,835 ಡೆಸ್ಕ್ ಕಂ ಬೆಂಚ್‌ಗಳನ್ನು ತುರ್ತಾಗಿ ಒದಗಿಸಬೇಕಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸಮಸ್ಯೆಗಳ ಉದ್ಯಾನ 'ಟ್ಯಾಗೋರ್' ಪಾರ್ಕ್

ಅಶುಚಿತ್ವ, ಅವ್ಯವಸ್ಥೆ | ಮುರಿದ ಬೆಂಚುಗಳು

ಅಧ್ವಾನದ ಸ್ಥಿತಿಯಲ್ಲಿ ನಡಿಗೆ ಪಥ



ನೆಲಹಾಸು ಅಧ್ವಾನ
ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಳಿತುಕೊಳ್ಳುವ ಸಿಮೆಂಟ್ ಹಾಗೂ ಕಲ್ಲಿನ ಬೆಂಚುಗಳು ಮುರಿದಿವೆ. ವಿದ್ಯುತ್ ಕಂಬ ಬಾಗಿದ್ದು, ಸ್ವಿಚ್ ಬೋರ್ಡ್ ಬಾಯ್ದೆರೆದಿದೆ. ನಡಿಗೆ ಪಥದಲ್ಲಿ ಕಸದ ರಾಶಿ ಬಿದ್ದಿದೆ.

ಆರ್.ಟಿ. ನಗರದ ವಾರ್ಡ್ ನಂಬರ್ 46ರ 18ನೇ ಕ್ರಾಸ್, ಆದರ್ಶ ಸ್ಕೂಲ್ ಹಿಂಭಾಗದಲ್ಲಿರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) 'ರವೀಂದ್ರನಾಥ ಟ್ಯಾಗೋರ್ ಉದ್ಯಾನ'ದ ಸದ್ಯದ ಸ್ಥಿತಿ ಇದು.

ಈ ಉದ್ಯಾನವು ಹೊರಗಿನಿಂದ ನೋಡಲು ಅಂದವಾಗಿ ಕಾಣಿಸುತ್ತದೆ. ಒಳ ಪ್ರವೇಶಿಸಿದರಷ್ಟೆ ಅಶುಚಿತ್ವ, ಅವ್ಯವಸ್ಥೆಗಳು, ಅಧ್ವಾನಗಳು ಅನಾವರಣಗೊಳ್ಳುತ್ತವೆ. ಪಾರ್ಕ್‌ನಲ್ಲಿ ಮೂಲ ಸೌಲಭ್ಯಗಳಿದ್ದರೂ, ನಿರ್ವಹಣೆಯ ಕೊರತೆಯಿಂದಾಗಿ ಅವು ಬಳಸುವ ಸ್ಥಿತಿಯಲ್ಲಿಲ್ಲ.

ನಡಿಗೆ ಪಥದಲ್ಲಿ ಅಲಲ್ಲಿ ಒಣಗಿದ ಎಲೆಗಳು ರಾಶಿಯಾಗುತ್ತಿರುತ್ತವೆ. ಒಣಗಿದ ಎಲೆಗಳನ್ನು ನಿಯಮಿತವಾಗಿ ತೆಗೆದು ಸ್ವಚ್ಛಗೊಳಿಸುವುದಿಲ್ಲ. ಹೀಗಾಗಿ ಇಲ್ಲಿ ನಡೆದಾಡುವ ಹಿರಿಯರಿಗೆ ಜಾರಿ ಬೀಳುವ ಭಯ. ಜಿಗಿದು ಓಡುವ ಪುಟ್ಟ ಮಕ್ಕಳೂ ಜಾರುತ್ತವೆಂಬ ಆತಂಕ ಪೋಷಕರದ್ದು.



ಮುರಿದು ಬಿದ್ದ ಆಸನ

'ನಡೆದು ದಣಿದವರು ಸುಧಾರಿಸಿಕೊಳ್ಳುವುದಕ್ಕೆ ಅಲ್ಲಲ್ಲಿ ಆಸನಗಳಿವೆ. ಆದರೆ ಎಲ್ಲವೂ ಕುಳಿತುಕೊಳ್ಳಲು ಯೋಗ್ಯವಾಗಿಲ್ಲ. ಒಂದೆರಡು ಮುರಿದಿವೆ. ಇನ್ನೊಂದೆರಡು ಉರುಳಿವೆ. ಇವೆಲ್ಲ ಮುರಿದು ಬಿದ್ದು ದೀರ್ಘ ಕಾಲವಾಗಿದ್ದರೂ, ಬದಲಾಯಿಸಿಲ್ಲ. ಮಳೆ ಬಂದಾಗ ತುಂಬಾ ಸಮಸ್ಯೆಯಾಗುತ್ತದೆ' ಎನ್ನುತ್ತಾರೆ ಹಿರಿಯ ನಾಗರಿಕರು.

ಕತ್ತರಿಸಿದ ಬೃಹತ್ ಮರದ ತುಂಡಿನಿಂದಾಗಿ ನಡಿಗೆ ಪಥದ ನೆಲಹಾಸು ಕಿತ್ತುಹೋಗಿದೆ. ಪಾರ್ಕ್ ಅಂಗಳದ ಒಂದು ಬದಿಯಲ್ಲಿರುವ ಗುಂಡಿಯ ಮೇಲೆ ಮುಚ್ಚಿದ್ದ ಕಬ್ಬಿಣದ ಮುಚ್ಚಳ ಅರ್ಧ ತೆರೆದುಕೊಂಡಿದೆ.

'ವಿದ್ಯುತ್ ದೀಪದ ಕಂಬಗಳಿವೆ. ಆದರೆ ದೀಪಗಳು ಬೆಳಗುವುದಿಲ್ಲ. ಒಂದು ವಿದ್ಯುತ್ ಕಂಬವಂತೂ ಬಾಗಿದೆ. ಕಂಬದಲ್ಲಿರುವ ವಿದ್ಯುತ್ ಸ್ವಿಚ್ ಬಾಕ್ಸ್ ಬಾಯ್ದೆರೆದಿದೆ. ತಂತಿಗಳು ಹೊರಗೆ ಇಣುಕುತ್ತಿವೆ. ಮಕ್ಕಳು ಅರಿವಿಲ್ಲದೆ ಮುಟ್ಟಿದರೆ ಅಪಾಯ' ಎನ್ನುತ್ತಾರೆ ವಾಯು ವಿಹಾರಿಗಳು.



'ಉದ್ಯಾನದಲ್ಲಿ ಕನಿಷ್ಠ ನಿರ್ವಹಣೆಯ ಅಗತ್ಯವಿದೆ. ಹುಳು, ಹುಪ್ಪಟೆಗಳು ಓಡಾಡುತ್ತಿರುತ್ತವೆ. ರಾತ್ರಿ ಹೊತ್ತು ಬೆಳಕಿನ ವ್ಯವಸ್ಥೆಗೆ ದೀಪಗಳು ಬೇಕು. ಉದ್ಯಾನದ ಸ್ವಚ್ಛತೆ ಕಡೆಗೆ ಹೆಚ್ಚು ಗಮನ ಕೊಡಬೇಕು' ಎನ್ನುತ್ತಾರೆ ವಾಯುವಿಹಾರಿ ಮುನಿಯಪ್ಪ.

ಉದ್ಯಾನದಲ್ಲಿ ಪ್ರತಿ ನಿತ್ಯ ಬೆಳಿಗ್ಗೆ ಮತ್ತು ಸಂಜೆ ನೂರಾರು ಮಂದಿ ವಾಯುವಿಹಾರಕ್ಕಾಗಿ ಬರುತ್ತಾರೆ. ಅವರಲ್ಲಿ ಹೆಚ್ಚಿನವರು ಮಹಿಳೆಯರು. ಪಾರ್ಕ್‌ನಲ್ಲಿನ ಅವ್ಯವಸ್ಥೆ ಕಂಡು ಇತ್ತೀಚೆಗೆ ಕೆಲವರು ವಾಯುವಿಹಾರಕ್ಕೆ ಬರುವುದನ್ನೇ ನಿಲ್ಲಿಸಿದ್ದಾರೆ ಎಂದು ಸ್ಥಳೀಯರು ಹೇಳುತ್ತಾರೆ.

> **ಉದ್ಯಾನದ ನಿರ್ವಹಣೆ ಸಮರ್ಪಕವಾಗಿಲ್ಲ. ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಗೆ, ಸ್ಥಳೀಯ ಜನಪ್ರತಿನಿಧಿಗಳ ಗಮನಕ್ಕೆ ತಂದಿದ್ದೇವೆ. ಏನೂ ಪ್ರಯೋಜನವಾಗಿಲ್ಲ**
> **ಭಾನುಪ್ರಕಾಶ್,** ಅಧ್ಯಕ್ಷರು, ಆರ್‌ಟಿ.ನಗರ ಕ್ಷೇಮಾಭಿವೃದ್ಧಿ ಸಂಘ

> **ಪಾರ್ಕ್‌ಗಳ ನಿರ್ವಹಣೆಗೆ ಟೆಂಡರ್ ಕರೆಯಲಾಗಿದೆ. ಉದ್ಯಾನದಲ್ಲಿರುವ ವಿದ್ಯುತ್ ಸಮಸ್ಯೆ ಸರಿಪಡಿಸಲು ಸಂಬಂಧಿಸಿದವರಿಗೆ ತಿಳಿಸಿದ್ದೇನೆ. ಸ್ವಚ್ಛತೆಗೂ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ.**
> **ಸುಗುಣ,** ಮುಖ್ಯ ಎಂಜಿನಿಯರ್, ಬಿಬಿಎಂಪಿ ಪೂರ್ವ



ಚೆಗ್ ಜಾಗತಿಕ ವಿದ್ಯಾರ್ಥಿ ಸ್ಪರ್ಧೆ ಅಂತಿಮ ಸುತ್ತಿನಲ್ಲಿ ನಗರದ ದಿವಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಿಟನ್‌ನ ಚೆಗ್ ಸಂಸ್ಥೆಯ 'ಜಾಗತಿಕ ಪ್ರತಿಭಾನ್ವಿತ ವಿದ್ಯಾರ್ಥಿಗಳ ಸ್ಪರ್ಧೆ'ಯ ಅಂತಿಮ 10 ಮಂದಿಯ ಪಟ್ಟಿಯಲ್ಲಿ ಬೆಂಗಳೂರಿನ ದಿವಾ ಉತ್ಕರ್ಷ ಸ್ಥಾನ ಪಡೆದಿದ್ದಾರೆ.

ದಿವಾ ಅವರು ನ್ಯಾಷನಲ್ ಅಕಾಡೆಮಿ ಫಾರ್ ಲರ್ನಿಂಗ್‌ನಲ್ಲಿ ವಿಜ್ಞಾನದ ವಿದ್ಯಾರ್ಥಿಯಾಗಿದ್ದಾರೆ. ದಿವಾ 13 ವರ್ಷದವರಾಗಿದ್ದಾಗ ಸೋದರ ಸೂರ್ಯ ಅವರಿಗೆ 2021ರಲ್ಲಿ ಮಧುಮೇಹ ಟೈ-1 ಪತ್ತೆಯಾಯಿತು. ಆಗ, ಆತ ಪಟ್ಟ ಸಂಕಟವನ್ನು ಕಂಡ ದಿವಾ, ಎಲ್ಲರಿಗೂ ಜೀವರಕ್ಷಕ ಇನ್ಸುಲಿನ್ ಲಭ್ಯವಾಗಬೇಕು, ಅರಿವು ಮೂಡಿಸಬೇಕು ಎಂದು ನಿರ್ಧರಿಸಿದರು. 'ಪ್ರಾಜೆಕ್ಟ್ ಸೂರ್ಯ' ಆರಂಭಿಸಿ, ಬಡ ಮಕ್ಕಳಿಗೆ ಮಧುಮೇಹದ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ.



ದಿವಾ ಉತ್ಕರ್ಷ

85 ಸ್ವಯಂ ಸೇವಕರನ್ನು ಹೊಂದಿರುವ 'ಪ್ರಾಜೆಕ್ಟ್ ಸೂರ್ಯ', 4.5 ಲಕ್ಷ ಜನರನ್ನು ತಲುಪಿದೆ. ಮಧುಮೇಹದ ಬಗ್ಗೆ ಅರಿವು ಮೂಡಿಸುವ ಜೊತೆಗೆ ₹12.50 ಲಕ್ಷಗಳನ್ನು ದೇಣಿಗೆಯಾಗಿ ಸಂಗ್ರಹಿಸಿ, ದೇಶದ ಗ್ರಾಮಗಳಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುತ್ತಿದೆ. 900ಕ್ಕೂ ಹೆಚ್ಚು ಮಕ್ಕಳಿಗೆ 6 ಸಾವಿರ ಇನ್ಸುಲಿನ್, ಗ್ಲುಕೋಸ್ ಸ್ಟ್ರಿಪ್ಸ್, ಸಿರಿಂಜ್‌ಗಳನ್ನು ಒದಗಿಸಿದೆ ಎಂದು ಪ್ರಕಟಣೆ ತಿಳಿಸಿದೆ.

'ಪ್ರಾಜೆಕ್ಟ್ ಸೂರ್ಯ'ವನ್ನು ಜಾಗತಿಕ ಮಟ್ಟದಲ್ಲಿ ಹಲವು ಚಾಪ್ಟರ್‌ಗಳಲ್ಲಿ ವಿಸ್ತರಿಸಬೇಕೆಂಬ ಅಭಿಲಾಷೆಯನ್ನು ದಿವಾ ಹೊಂದಿದ್ದಾರೆ. ಐದು ದಶಲಕ್ಷ ಜನರಿಗೆ ನೇರವಾಗಿ ತೆರಿಗೆರಹಿತ ಇನ್ಸುಲಿನ್ ಅನ್ನು ಕಾರ್ಪೊರೇಟ್ ಕಂಪನಿಗಳ ಮೂಲಕ ನಿಧಿ ಸಂಗ್ರಹಿಸಿ ಒದಗಿಸಬೇಕೆಂಬ ಗುರಿಯನ್ನು ಅವರು ಹೊಂದಿದ್ದಾರೆ.

ಚೆಗ್ ಸ್ಪರ್ಧೆಗೆ 176 ದೇಶಗಳಿಂದ 11 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದವು. ಅದರಲ್ಲಿ ಅಂತಿಮ ಸುತ್ತಿಗೆ 10 ಮಂದಿಯನ್ನು ಆಯ್ಕೆ ಮಾಡಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದ ಸಂಸ್ಥೆಗೆ ₹1 ಲಕ್ಷ ಡಾಲರ್ ಬಹುಮಾನ ನೀಡಲಾಗುತ್ತದೆ.

'ಕರ್ತವ್ಯಕ್ಕೆ ಅಡ್ಡಿ: ದೂರು ನೀಡಿದ್ದರೆ ಕ್ರಮ ಕೈಗೊಳ್ಳಿ'

ಬೆಂಗಳೂರು: 'ಆಯುಷ್ ಇಲಾಖೆಯ ಅಧಿಕಾರಿಗಳ ವಿರುದ್ಧ ಮೂವರು ಪದೇ ಪದೇ ದೂರು ನೀಡುತ್ತಿರುವುದರ ಹಿಂದೆ ಸ್ವಹಿತಾಸಕ್ತಿ ಇದ್ದರೆ ದೂರುದಾರರ ವಿರುದ್ಧವೇ ಕ್ರಮ ಕೈಗೊಳ್ಳಿ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

'ವಾಸುದೇವ ಹೊಳ್ಳ, ಜೆ.ಎಸ್.ಡಿ. ಪಾಣಿ, ಕಿರಣ್ ಪೂಜಾರಿ ಎಂಬುವವರು ಆಯುಷ್ ಇಲಾಖೆಯ ಕೆಲವು ಅಧಿಕಾರಿಗಳ ವಿರುದ್ಧ ಮತ್ತು ಇಲಾಖೆಯ ಕಾರ್ಯನಿರ್ವಹಣೆಯ ಬಗ್ಗೆ ಗುರುತರವಾದ ಆರೋಪ ಮಾಡಿ ಆರೋಗ್ಯ ಸಚಿವಾಲಯಕ್ಕೆ, ಮುಖ್ಯಮಂತ್ರಿ ಸಚಿವಾಲಯಕ್ಕೆ, ಮುಖ್ಯ ಕಾರ್ಯದರ್ಶಿಯವರಿಗೆ ನಿರಂತರ ದೂರು ನೀಡುತ್ತಿದ್ದಾರೆ. ಈ ದೂರುಗಳ ಬಗ್ಗೆ ತನಿಖೆಗೆ ಸೂಚಿಸಿದ್ದೆ, 'ದೂರುದಾರರು ವೈಯಕ್ತಿಕ ಹಿತಾಸಕ್ತಿಗಾಗಿ ಮತ್ತು ಉದ್ದೇಶಪೂರ್ವಕವಾಗಿ ದೂರು ನೀಡಿದ್ದಾರೆಯೇ ಎಂಬ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಬೇಕು. ಇದೇ ಉದ್ದೇಶಕ್ಕೆ ದೂರು ನೀಡಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು' ಎಂದು ಈಚೆಗೆ ಹೊರಡಿಸಿರುವ ಟಿಪ್ಪಣಿಯಲ್ಲಿ ನಿರ್ದೇಶನ ನೀಡಿದ್ದಾರೆ.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಕೇಂದ್ರ ಸಚಿವ ಸೋಮಣ್ಣ ಚಾಲನೆ



ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸೋಮಣ್ಣ, 'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಮತ್ತು ಕಾಯಕ ಸಿದ್ಧಾಂತದ ಅಡಿಯಲ್ಲಿ ಕೇಂದ್ರ ಸರ್ಕಾರ ಆಡಳಿತ ನಡೆಸುತ್ತಿದೆ. ಬಡವರು ಮತ್ತು ಮಧ್ಯಮ ವರ್ಗದವರು ಆರ್ಥಿಕವಾಗಿ ಸಬಲರಾಗಲು ಜನಧನ್, ಉಜ್ವಲ ಮತ್ತು ಪ್ರಧಾನಮಂತ್ರಿ ಆವಾಸ್ ಯೋಜನೆ, ಆಯುಷ್ಮಾನ್ ಭಾರತ್, ಮುದ್ರಾ ಯೋಜನೆಗಳು ಸಹಕಾರಿಯಾಗಿವೆ' ಎಂದು ಹೇಳಿದರು.

ದೇಶದಲ್ಲಿ ಯುವ ಸಮುದಾಯದ ಸಂಖ್ಯೆ ಹೆಚ್ಚಿದ್ದು, ಅವರ ಸಾಮರ್ಥ್ಯ ದೇಶದ ಅಭಿವೃದ್ಧಿಗೆ ಬಳಕೆಯಾಗಬೇಕು ಎಂದರು.

ಈ ವೇಳೆ ಬಿಜೆಪಿ ಯುವ ಮೋರ್ಚಾ ರಾಜ್ಯ ಘಟಕದ ಮಾಜಿ ಉಪಾಧ್ಯಕ್ಷ ಡಾ.ಅರುಣ್ ಸೋಮಣ್ಣ, ಬಿಜೆಪಿ ಗೋವಿಂದರಾಜನಗರ ಮಂಡಲ ಸಮಿತಿ ಅಧ್ಯಕ್ಷ ವಿಶ್ವನಾಥಗೌಡ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಮೋಹನ್ ಕುಮಾರ್, ಮಂಡಲ ಮಹಿಳಾ ಸಮಿತಿ ಅಧ್ಯಕ್ಷೆ ರತ್ನಮ್ಮ, ಮುಖಂಡರಾದ ಸಿ.ಎಂ. ರಾಜಪ್ಪ, ಶ್ರೀಧರ್, ಎಚ್.ರಮೇಶ್ ಹಾಜರಿದ್ದರು.

ಹೆಡ್ ಕಾನ್‌ಸ್ಟೆಬಲ್ ವಿರುದ್ಧ ದೂರು

ಮೈಸೂರು: ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ನೀಡಲಾಗುವ ಪ್ರಯಾಣ ಭತ್ಯೆಯಲ್ಲಿ ₹25 ಲಕ್ಷ ದುರುಪಯೋಗಪಡಿಸಿಕೊಂಡ ಆರೋಪದಲ್ಲಿ ಕೆಎಸ್‌ಆರ್‌ಪಿ ಹೆಡ್ ಕಾನ್‌ಸ್ಟೆಬಲ್ ಸಿ.ಆರ್.ಸುಪ್ರೀತ್ ವಿರುದ್ಧ ಇಲ್ಲಿನ ನಜರ್‌ಬಾದ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬ್ಯಾಂಕ್ ನೌಕರನಿಗೆ ₹18.73 ಲಕ್ಷ ವಂಚನೆ

ತುಮಕೂರು: 'ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು' ಎಂಬ ಆಮಿಷಕ್ಕೆ ಒಳಗಾಗಿ ಶಿರಾ ಪಟ್ಟಣದ ಬ್ಯಾಂಕ್ ನೌಕರ ಬಿ.ಎನ್.ಹರೀಶ್ ₹18.73 ಲಕ್ಷ ಕಳೆದುಕೊಂಡಿದ್ದಾರೆ.

ಅಪರಿಚಿತರು ಕರೆ ಮಾಡಿ ಆನ್‌ಲೈನ್‌ನಲ್ಲಿ ಷೇರು ಖರೀದಿ ಮತ್ತು ಮಾರಾಟದ ಬಗ್ಗೆ ತಿಳಿಸಿದ್ದಾರೆ. ಹಣ ಹೂಡಿಕೆ ಮಾಡಿ ಶೇ 20ರಷ್ಟು ಲಾಭ ಪಡೆಯಬಹುದು ಎಂದು ಹೇಳಿ ವಂಚಿಸಿದ್ದಾರೆ. ಈ ಕುರಿತು ಅವರು ಸೈಬರ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಪುಣೆ ರೇಸ್

ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆ

ಅಕ್ಕಾಸಾಹೇಬ್ ಮಹಾರಾಜ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ನಾರ್ಥರನ್ ಸಿಂಗರ್ 1, ಮೊಜೊ 6, ಮಲಾಖಿ 8
2ನೇ ರೇಸ್: ಬಿಗ್ ರೆಡ್ 1, ಫ್ಲೆಮಿಂಗ್ ಲಾಂಬೊರ್ತಿನಿ 2
3ನೇ ರೇಸ್: ಕ್ರಿಸ್ಟೊಫಾನಿ 3, ಇಲ್ ವೊಲೊ 9, ಕರೀನ 4
4ನೇ ರೇಸ್: ಮಾರ್ಕಸ್ 3, ಟೈಮ್‌ಲೆಸ್ ವಿಷನ್ 14, ಸಿಲ್ವರ್ ಸ್ಟ್ರೈಕ್ 5
5ನೇ ರೇಸ್: ಲಾರ್ಡ್ ಎರಿಕ್ 1, ಆರ್ಕೇಡಿಯನ್ 3, ರೆಜಿನ ಮೆಮೋರಾಬಿಲಿಸ್ 2
6ನೇ ರೇಸ್: ಟೈಮ್ ಅಂಡ್ ಟೈಡ್ 1, ಮಿಸ್ ಅಮೆರಿಕನ್ ಪೀ 5, ಮಾರ್ಕೆಟ್ ಕಿಂಗ್ 3
7ನೇ ರೇಸ್: ಸೂಪರ್‌ಇಂಪೋಸ್ 1, ಏರೀಸ್ 5, ಫಿಡಾಟೊ 12
8ನೇ ರೇಸ್: ಪ್ರಿನ್ಸ್ ಇಗೋರ್ 1, ಮಿದಾಸ್ ಟಚ್ 2, ಜಕಾಪ 6

ಉತ್ತಮ ಬೆಟ್: ಬಿಗ್ ರೆಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	6,7,8

ಕಾರು ನಿಯಂತ್ರಣ ತಪ್ಪಿ ಘಟನೆ • ಮಹಿಳೆಗೆ ಗಾಯ, ಕಾರು ಜಖಂ

ನಿರ್ದೇಶಕ ನಾಗಶೇಖರ್ ಕಾರು ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರ ನಿರ್ದೇಶಕ ನಾಗಶೇಖರ್ ಅವರು ಚಾಲನೆ ಮಾಡುತ್ತಿದ್ದ ಬೆಂಜ್ ಕಾರು ಅಪಘಾತವಾಗಿದ್ದು, ಮಹಿಳೆಯೊಬ್ಬರು ಗಾಯಗೊಂಡಿದ್ದಾರೆ.

ಜ್ಞಾನಭಾರತಿ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಾಗಶೇಖರ್ ಅವರು ತಮ್ಮ ಕಾರು ಚಾಲನೆ ಮಾಡಿಕೊಂಡು ಹೋಗುವ ವೇಳೆ ನಿಯಂತ್ರಣ ತಪ್ಪಿ ಬಸ್ ತಂಗುದಾಣದಲ್ಲಿ ನಿಂತಿದ್ದ ದೊಡ್ಡಗೊಲ್ಲರಹಟ್ಟಿ ನಿವಾಸಿ ಲಕ್ಷ್ಮೀ ಎಂಬುವವರಿಗೆ ಡಿಕ್ಕಿ ಹೊಡೆದು, ಬಳಿಕ ಮರಕ್ಕೆ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಕಾರು ಜಖಂಗೊಂಡಿದ್ದು, ನಾಗಶೇಖರ್‌ಗೆ ಸಣ್ಣಪುಟ್ಟ ಗಾಯವಾಗಿದೆ.

'ಕಾರು ಅಪಘಾತದಲ್ಲಿ ಗಾಯಗೊಂಡಿದ್ದ ಮಹಿಳೆಯನ್ನು ನಾಗಶೇಖರ್ ಅವರು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದಾರೆ. ಬಳಿಕ ಠಾಣೆಗೆ ಬಂದು ಘಟನೆ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಮೈನಾ', 'ಸಂಜು ವೆಡ್ಸ್ ಗೀತಾ', 'ಅರಮನೆ', 'ಮಾಸ್ತಿಗುಡಿ ಸೇರಿದಂತೆ ಹಲವು ಚಿತ್ರಗಳನ್ನು ನಾಗಶೇಖರ್ ನಿರ್ದೇಶಿಸಿದ್ದಾರೆ.

'ಇನ್‌ಸ್ಟಾಗ್ರಾಂ ಸ್ಟಾರ್'ಗೆ ಎಚ್ಚರಿಕೆ ನೀಡಿದ ಪೊಲೀಸರು

ಅಪರಾಧ ಸುದ್ದಿ

ಬೆಂಗಳೂರು: 'ಇನ್‌ಸ್ಟಾಗ್ರಾಂ ಸ್ಟಾರ್' ಎಂದು ಪರಿಚಿತನಾಗಿರುವ ಜರ್ಮನಿಯ ಯೂನೀಸ್ ಝುರೂರಾ ಅವರನ್ನು ಅನುಮತಿ ಪಡೆಯದೆ ಜನರ ಗುಂಪು ಸೇರಿಸಿದ್ದ ಆರೋಪದ ಅಡಿ ಅಶೋಕನಗರ ಠಾಣೆ ಪೊಲೀಸರು ಗುರುವಾರ ವಶಕ್ಕೆ ಪಡೆದು, ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ.

'ಯೂನೀಸ್ ಝುರೂರಾ ವಿವಿಧ ದೇಶಗಳಿಗೆ ತೆರಳಿ ಅಚ್ಚರಿಯ ಉಡುಗೊರೆ ನೀಡುತ್ತಾರೆ. ಅವರು ಕೆಲವು ಪ್ರಶ್ನೆ ಕೇಳಿ ಸರಿಯಾದ ಉತ್ತರ ನೀಡಿದವರಿಗೆ ದುಬಾರಿ ಬೆಲೆಯ ಐ-ಫೋನ್ ಕೊಡುತ್ತಾರೆ ಎಂದು ಹೇಳಲಾಗಿದೆ. ಅವರು ಗುರುವಾರ ಮಹಾತ್ಮ ಗಾಂಧಿ ರಸ್ತೆಗೆ ಬಂದಿದ್ದರು. ಅದೇ ವೇಳೆ ಅವರ ಅಭಿಮಾನಿಗಳೂ ಜಮಾವಣೆಗೊಂಡಿದ್ದರು. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಿತ್ತು. ಮಾಹಿತಿ ತಿಳಿದು ಸ್ಥಳಕ್ಕೆ ಪೊಲೀಸರು ಬಂದಿದ್ದರು. ಅನುಮತಿ ಪಡೆಯದೆ ಜನರ ಗುಂಪು ಸೇರಿಸಿದ್ದರಿಂದ ಪೊಲೀಸರು ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದು, ಎಚ್ಚರಿಕೆ ನೀಡಿ ಬಿಡುಗಡೆ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಅಪಹರಣ: ಎಂಟು ಮಂದಿ ಬಂಧನ

ಬೆಂಗಳೂರು: ಗುತ್ತಿಗೆದಾರರೊಬ್ಬರನ್ನು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ₹5 ಲಕ್ಷ ಸುಲಿಗೆ ಮಾಡಿದ್ದ ಎಂಟು ಆರೋಪಿಗಳನ್ನು ಶ್ರೀರಾಮಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶ್ರೀರಾಮಪುರದ ಅರುಣ್, ಪ್ರತಾಪ್, ಅಕ್ರಂ, ಅಖಿಲೇಶ್, ಅನ್ಸರ್, ನವೀನ್, ರೆಹಮಾನ್, ಸೈಯದ್ ಬಕಾಸ್ ಬಂಧಿತರು. ಶ್ರೀರಾಂಪುರದ ಮೊಹಮ್ಮದ್ ಮೂಸಾ ಅವರನ್ನು ಆರೋಪಿಗಳು ಅಪಹರಣ ಮಾಡಿದ್ದರು.

ಮನೆ ನವೀಕರಣ ಮಾಡುವುದಾಗಿ ಕರೆದೊಯ್ದು ನವೀನ್ ನೇತೃತ್ವದಲ್ಲಿ ಅಪಹರಣ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

11ನೇ ವರ್ಷದ ವಿನಾಯಕ ವಾರ್ಷಿಕೋತ್ಸವ: ವಿಗ್ರಹ ಪ್ರತಿಷ್ಠಾಪನೆ, ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಆಯೋಜನೆ ಹಾಗೂ ಸ್ಥಳ: ಶಂಕರ್‌ನಾಗ್ ವಿನಾಯಕ ಗೆಳೆಯರ ಬಳಗ, ನಾಗದೇವನಹಳ್ಳಿ, ಜಿ. ತಿಮ್ಮಯ್ಯ ಬಡಾವಣೆ, ಬೆಳಿಗ್ಗೆ 7ರಿಂದ



39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಸಹಸ್ರ ಮೋದಕ ಹೋಮ, ಗಣ ಹೋಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, 5ನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ, ಬೆಳಿಗ್ಗೆ 10ರಿಂದ

ಕಲಾಕೃತಿಗಳ ಪ್ರದರ್ಶನ: ಕಲಾವಿದ ಅಮಿತಾಭ್ ಆಶೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11

43ನೇ ವಿನಾಯಕೋತ್ಸವ: ಭರತನಾಟ್ಯ ಪ್ರದರ್ಶನ, ದಾಸರ ಪದಗಳು: ಮೈಸೂರು ರಾಮಚಂದ್ರ ಆಚಾರ್, ಆಯೋಜನೆ ಹಾಗೂ ಸ್ಥಳ: ವಿನಾಯಕ ಮಿತ್ರ ಮಂಡಳಿ, # 633, 1-ಎ ಮುಖ್ಯರಸ್ತೆ, ವಿನಾಯಕ ಮಿತ್ರ ಮಂಡಳಿ ರಸ್ತೆ, ಜಯನಗರ 8ನೇ ಬ್ಲಾಕ್, ಸಂಜೆ 6ರಿಂದ

ನಗರದಲ್ಲಿ ನಾಳೆ

ವಿಶೇಷ ಸಂಚಿಕೆ ಬಿಡುಗಡೆ ಹಾಗೂ ವಿಚಾರಸಂಕಿರಣ: 'ಖಾಸಗಿ ಸಂಸ್ಥೆಗಳಲ್ಲಿ ಕನ್ನಡಿಗರಿಗೆ ಉದ್ಯೋಗ', ವಿಷಯ ಮಂಡನೆ: ಪುರುಷೋತ್ತಮ ಬಿಳಿಮಲೆ, ಜಿ.ಆರ್. ಗೋಪಿನಾಥ್, ವಿನಯ್ ಕುಮಾರ್ ಜಿ.ಬಿ., ಯು.ಟಿ. ಆಯೇಶಾ ಫರ್ಜಾನ, ಸಿ.ಜಿ. ಲಕ್ಷ್ಮೀಪತಿ, ಗಿರೀಶ್ ಕಾರ್ಗದ್ದೆ, ಸಮನ್ವಯ: ಜಯರಾಮ್ ರಾಯಪುರ, ಆಯೋಜನೆ: ಸಮಾಜಮುಖಿ, ಸ್ಥಳ: ಸಮಾಜಮುಖಿ ಸಭಾಂಗಣ, 3ನೇ ಮಹಡಿ, ಮಿಡಾಸ್ ಸ್ಕೂಲ್ ಆಫ್ ಎಂಟರ್‌ಪ್ರೆನರ್‌ಶಿಪ್, ನಂ.10, ಶೇಷಾದ್ರಿಪುರ ಮುಖ್ಯರಸ್ತೆ, ಬೆಳಿಗ್ಗೆ 10

ತೇಜಸ್ವಿ ಜೀವಲೋಕ-12: ಛಾಯಾಚಿತ್ರ, ಸಾಕ್ಷ್ಯಚಿತ್ರ, ಸುಚಿತ್ರ ಪ್ರದರ್ಶನ ಹಾಗೂ ಸಂವಾದ: ಆಯೋಜನೆ: ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಪರಿಸರ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 10

39ನೇ ವರ್ಷದ ಮಿಲ್ಕ್ ಕಾಲೊನಿ ಗಣೇಶ ಹಬ್ಬ: ಸಹಸ್ರ ಮೋದಕ ಹೋಮ, ಗಣ ಹೋಮ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ: ಆಯೋಜನೆ ಹಾಗೂ ಸ್ಥಳ: ಸ್ವಸ್ತಿಕ್ ಯುವಕರ ಸಂಘ, 5ನೇ ಮುಖ್ಯ ರಸ್ತೆ, ಮಿಲ್ಕ್ ಕಾಲೊನಿ, ರಾಜಾಜಿನಗರ 2ನೇ ಹಂತ, ಬೆಳಿಗ್ಗೆ 10ರಿಂದ

ಎನ್. ನರಸಿಂಹಯ್ಯ ಜನ್ಮ ಶತಮಾನ ವರ್ಷಾಚರಣೆ ಪ್ರಯುಕ್ತ ಕವಿಗೋಷ್ಠಿ, ಗೀತ ಗಾಯನ ಹಾಗೂ ಪ್ರಶಸ್ತಿ ಪ್ರದಾನ: ನಂಜುಂಡಸ್ವಾಮಿ ಬಿ..ಎ., ಅಧ್ಯಕ್ಷತೆ: ರು. ಬಸಪ್ಪ, ಪ್ರಶಸ್ತಿ ಪುರಸ್ಕೃತರು: ಪಿ. ಮಲ್ಲಿಕಾರ್ಜುನಪ್ಪ, ಪಿ. ಪುರುಷೋತ್ತಮ್, ಜಯಲಕ್ಷ್ಮಿ ನಾಗೇಂದ್ರ, ಎಂ.ಆರ್. ವೆಂಕಟಾಚಲ ಅಯ್ಯಂಗಾರ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

'ಪ್ರಭಾಪ್ರಭುತ್ವ-ಸಂವಿಧಾನ-ಒಕ್ಕೂಟ ವ್ಯವಸ್ಥೆ' ಚಿಂತನಾ ಸಮಾವೇಶ: 'ಬಹುತ್ವ ಭಾರತದಲ್ಲಿ ಏಕ ಸಂಸ್ಕೃತಿಯ ಅಪಾಯಗಳು': ರಾಜೇಂದ್ರ ಚೆನ್ನಿ, 'ಪ್ರಜಾಪ್ರಭುತ್ವದಲ್ಲಿ ಸಂವಿಧಾನ ಪರಿಪಾಲನೆಯ ಹೊಣೆಗಾರಿಕೆ': ಜಾಣಗೆರೆ ವೆಂಕಟರಾಮಯ್ಯ, ಅಧ್ಯಕ್ಷತೆ: ಜಿ. ರಾಮಕೃಷ್ಣ, ಆಯೋಜನೆ: ಜನಮನ ಪ್ರತಿಷ್ಠಾನ, ಭಾರತ ಯಾತ್ರಾ ಕೇಂದ್ರ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ಪಶ್ಚಿಮ, ಬೆಳಿಗ್ಗೆ 10.30

ಉಪನ್ಯಾಸ: 'ಜೈನ ಆಗಮಗಳ ಅಗಮನ ಒಂದು ಚಿಂತನೆ': ತೇಜಸ್ವಿನಿ ಡಿ., 'ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಭಾರತದ ಮೇಲೆ ಪರಿಣಾಮ': ಪ್ರೊ. ಆರ್. ವೈದ್ಯನಾಥನ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 10.30

ನೃತ್ಯ ದ್ಯುತಿ: ಧ್ರುತಿ ಪಿ. ಶೆಟ್ಟಿ ಅವರ ರಂಗ ಪ್ರವೇಶ, ಅತಿಥಿಗಳು: ತೇಜಸ್ವಿ ಸೂರ್ಯ, ಅಹಲ್ಯಾ ಶರ್ಮ, ಶೀಲಾ ಚಂದ್ರಶೇಖರ್, ಆಯೋಜನೆ: ಸಾಧನಾ ಸಂಗಮ ನೃತ್ಯ ಶಾಲೆ, ಸ್ಥಳ: ಕೆಇಎ ಪ್ರಭಾತ್ ರಂಗಮಂದಿರ, ಬಸವೇಶ್ವರನಗರ, ಬೆಳಿಗ್ಗೆ 10.30

ಕಲಾಕೃತಿಗಳ ಪ್ರದರ್ಶನ: ಕಲಾವಿದ ಅಮಿತಾಭ್ ಆಶೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದೊಮ್ಮಲೂರು, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ ಹಾಗೂ ಎಚ್.ಆರ್. ಲಕ್ಷ್ಮಮ್ಮ ಮತ್ತು ಎ.ಬಿ. ಮಾರೇಗೌಡ ಸ್ಮರಣಾರ್ಥ 'ಸಾವಿತ್ರಿಬಾಯಿ ಪುಲೆ ಹಾಗೂ ಜ್ಯೋತಿ ಬಾ ಪುಲೆ ಪ್ರಶಸ್ತಿ' ಪ್ರದಾನ: ಕೆ. ಷರೀಫಾ, ಉದ್ಘಾಟನೆ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ಎ.ಎಸ್. ನಾಗರಾಜಸ್ವಾಮಿ, ಉಪಸ್ಥಿತಿ: ರಾಮಣ್ಣ ಎಚ್. ಕೋಡಿಹೊಸಹಳ್ಳಿ, ಆಯೋಜನೆ: ಕನ್ನಡ ಸಂಘರ್ಷ ಸಮಿತಿ, ಸ್ಥಳ: ಬಿ.ಎಂ.ಶ್ರೀ. ಕಲಾಭವನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

43ನೇ ವಿನಾಯಕೋತ್ಸವ: ಗಾಯನ: ಸುನಿತಾ, ಹರ್ಷ, ಶ್ರೀನಿಧಿ ಶಾಸ್ತ್ರಿ, ಸುರಕ್ಷಾ ದಾಸ್, ಆಯೋಜನೆ ಹಾಗೂ ಸ್ಥಳ: ವಿನಾಯಕ ಮಿತ್ರ ಮಂಡಳಿ, # 633, 1-ಎ ಮುಖ್ಯರಸ್ತೆ, ವಿನಾಯಕ ಮಿತ್ರ ಮಂಡಳಿ ರಸ್ತೆ, ಜಯನಗರ 8ನೇ ಬ್ಲಾಕ್, ಸಂಜೆ 6.30ರಿಂದ

'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in



ಗಣೇಶ ಬಂದ...

ಬೃಹತ್ ಗಣೇಶ ವಿಗ್ರಹವನ್ನು ವಾಹನವೊಂದರಲ್ಲಿ ಇರಿಸಿ ಸಾಗಿಸುತ್ತಿದ್ದ ದೃಶ್ಯ ಕಬ್ಬನ್ ರಸ್ತೆಯಲ್ಲಿ ಗಣೇಶ ಹಬ್ಬದ ಮುನ್ನಾದಿನವಾದ ಶುಕ್ರವಾರ ಕಂಡುಬಂದಿತು
ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಕರ್ತವ್ಯ ಲೋಪ: ಜೆಇ ಅಮಾನತು

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ತವ್ಯ ಲೋಪ ಎಸಗಿದ ಎಚ್.ಡಿ.ಕೋಟೆ ಪುರಸಭೆಯ ಕಿರಿಯ ಎಂಜಿನಿಯರ್ ಸುರೇಶ್ ಕೆ. ಅವರನ್ನು ಸೇವೆಯಿಂದ ಅಮಾನತುಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆ-4ರ ಅಡಿಯಲ್ಲಿ ನಿರ್ವಹಿಸಲಾದ ಕಾಮಗಾರಿಯಲ್ಲಿ ಗುಣಮಟ್ಟ ಇಲ್ಲದಿರುವುದನ್ನು ಗುರುತಿಸಿ ಶಿಸ್ತುಕ್ರಮ ಜರುಗಿಸಲಾಗಿದೆ.

ವಿವಿಧ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯ ಪರಿಶೀಲನೆಗೆ ತೆರಳಿದ್ದ ಸುರೇಶ್ ಜಿಲ್ಲಾಡಳಿತಕ್ಕೆ ತಪ್ಪು ಮಾಹಿತಿ ನೀಡಿದ್ದರು. ವರದಿ ನೀಡಿ, ಬಿಲ್ಲು ಪಾವತಿಸಲು ಕಡತ ಸಲ್ಲಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಪಿಒಪಿ ಗಣೇಶ: ಕುಂಬಾರರ ಬದುಕಿಗೂ ಕಂಟಕ

ಬೈಲಮೂರ್ತಿ.ಜಿ


ಹೆಸರಘಟ್ಟ: ಪರಿಸರಕ್ಕೆ ಕಂಟಕವಾಗಿರುವ ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ಗಣೇಶ ವಿಗ್ರಹಗಳು ಕಲೆ, ಪಾರಂಪರಿಕ ಕಸುಬುಗಾರಿಕೆ ಮಾಡುವವರ ಬದುಕಿಗೂ ತೀವ್ರ ಪೆಟ್ಟು ಕೊಟ್ಟಿವೆ.

ಇದು ಹೆಸರಘಟ್ಟದ ಸಾಂಪ್ರದಾಯಿಕ ಮಣ್ಣಿನ ಮೂರ್ತಿಗಳನ್ನು ತಯಾರಿಸುವ ಕುಂಬಾರರ ಕುಟುಂಬದ ಅಭಿಪ್ರಾಯ.

ಪಿಒಪಿ ಗಣೇಶ ಬಳಕೆ ಹೆಚ್ಚಾಗಿ ಮಣ್ಣಿನ ವಿಗ್ರಹ ತಯಾರಿಸುವ ಕುಂಬಾರರ ಕುಟುಂಬಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿವೆ. ಪಿಒಪಿ ಮೂರ್ತಿಗಳ ಬಳಕೆ ನಿಷೇಧಿಸಿರುವ ಆದೇಶದ ಕಟ್ಟುನಿಟ್ಟಿನ ಅನುಷ್ಠಾನ ವಿಳಂಬವಾಗಿತ್ತು. ಈಗ ನಿಷೇಧಿಸಿದರೂ ಪ್ರಯೋಜನವಾಗಿಲ್ಲ. ಈಗಾಗಲೇ ಅಕ್ರಮವಾಗಿ ಪಿಒಪಿ ವಿಗ್ರಹಗಳು ಮಾರುಕಟ್ಟೆ ಪ್ರವೇಶಿಸಿವೆ ಎನ್ನುವುದು ಅವರ ಅಳಲು.

'ಕುಂಬಾರಿಕೆ ಕಸುಬು ಬಿಡಬಾರದೆಂದು 25 ವರ್ಷಗಳಿಂದ ಮಣ್ಣಿನ ಗಣಪತಿ ತಯಾರಿಸುತ್ತಿದ್ದೇವೆ. ಪ್ರತಿ ವರ್ಷ ಪಿಒಪಿ ಮೂರ್ತಿಗಳು ಮಾರುಕಟ್ಟೆಗೆ ಲಗ್ಗೆ ಇಡುವುದರಿಂದ ವ್ಯಾಪಾರದ ಮೇಲೆ ಬರೆ ಬೀಳುತ್ತಿದೆ' ಎಂದು ಗಣೇಶ ವಿಗ್ರಹ ತಯಾರಕರಾದ ಜಯಲಕ್ಷ್ಮಮ್ಮ ಹೇಳಿದರು.

'ಹೆಸರಘಟ್ಟ ಕೆರೆಯಿಂದ ಜೇಡಿ ಮಣ್ಣು ತಂದು, ನೈಸರ್ಗಿಕ ಬಣ್ಣಗಳಿಂದ ವಿಗ್ರಹಗಳನ್ನು ತಯಾರಿಸುತ್ತಿದ್ದೇವೆ. ನಮ್ಮ ಕುಟುಂಬದ 12 ಜನ ಸದಸ್ಯರು ವಿಗ್ರಹ ತಯಾರಿಕೆಯಲ್ಲಿ ತೊಡಗುತ್ತೇವೆ. ಪ್ರತಿ ವರ್ಷ ತಯಾರಿಸುವ ಎಲ್ಲ ವಿಗ್ರಹಗಳು ಮಾರಾಟವಾದರೆ ₹6 ಲಕ್ಷದಿಂದ ₹7 ಲಕ್ಷದವರೆಗೆ ವ್ಯಾಪಾರವಾಗುತ್ತದೆ. ಈ ಬಾರಿ 2500 ವಿಗ್ರಹಗಳನ್ನು ತಯಾರಿಸಿದ್ದೇವೆ. ಇಲ್ಲಿವರೆಗೆ 14 ವಿಗ್ರಹಗಳಿಗಷ್ಟೇ ಮುಂಗಡ ಹಣ ಕೊಟ್ಟು ಬೇಡಿಕೆ ಸಲ್ಲಿಸಿದ್ದಾರೆ. ಸರ್ಕಾರ ಈ ಬಗ್ಗೆ ಗಮನಹರಿಸಿ ಸಂಕಷ್ಟದಲ್ಲಿರುವ ಕುಂಬಾರರ ಕುಟುಂಬಗಳಿಗೆ ಆಸರೆಯಾಗಬೇಕು' ಎಂದು ವಿಗ್ರಹ ತಯಾರಕ ಸುನಿಲ್ ರಾಜ್ ಅವರು ಹೇಳಿದರು.



ಸುಭಾಷಿತ

ಅಲ್ಪ ಜ್ಞಾನವು ಲೋಟದಲ್ಲಿನ ನೀರಿನಂತೆ ಸ್ಪಷ್ಟ-ಪಾರದರ್ಶಕ. ಪೂರ್ಣ ಜ್ಞಾನವು ಸಮುದ್ರದಲ್ಲಿನ ನೀರಿನಂತೆ ನಿಗೂಢ.

– ರವಿಂದ್ರನಾಥ ಟ್ಯಾಗೋರ್

ವಿದ್ಯಾರ್ಥಿಗಳ ಆತ್ಮಹತ್ಯೆ ತಗ್ಗಿಸಲು ಬೇಕಿದೆ ಸಂಘಟಿತ ಪ್ರಯತ್ನ

ದೇಶದಲ್ಲಿ ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ದೇಶದ ಭವಿಷ್ಯದ ದೃಷ್ಟಿಯಿಂದ ಯುವಸಮೂಹದ ಆರೋಗ್ಯ ಮತ್ತು ಮನೋಧರ್ಮವು ಅತ್ಯಂತ ಮುಖ್ಯವಾಗಿರುವ ಕಾರಣದಿಂದ ಈ ಬೆಳವಣಿಗೆಯು ಕಳವಳಕಾರಿಯಾದುದು. ಕೆಲವೊಂದು ವರದಿಗಳ ಪ್ರಕಾರ, ಈಗ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಮಾಣವು ಹಿಂದಿನ ವರ್ಷಗಳ ವಾರ್ಷಿಕ ಸರಾಸರಿಗಿಂತಲೂ ಹೆಚ್ಚಾಗಿದೆ. ದೇಶದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ದತ್ತಾಂಶಗಳನ್ನು ಆಧರಿಸಿ ಸಿದ್ಧಪಡಿಸಿದ ಅಧ್ಯಯನ ವರದಿಯನ್ನು ದೆಹಲಿಯಲ್ಲಿ ಇತ್ತೀಚೆಗೆ ನಡೆದ ಐಸಿ3 ಕಾನ್ಫರೆನ್ಸ್ ಆ್ಯಂಡ್ ಎಕ್ಸ್‌ಪೋನಲ್ಲಿ ಬಿಡುಗಡೆ ಮಾಡಲಾಗಿದೆ. ಅದರ ಪ್ರಕಾರ, ದೇಶದಲ್ಲಿ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯಲ್ಲಿನ ವಾರ್ಷಿಕ ಏರಿಕೆ ಪ್ರಮಾಣ ಶೇಕಡ 2ರಷ್ಟಿದ್ದರೆ, ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಲ್ಲಿನ ಏರಿಕೆ ಪ್ರಮಾಣ ಶೇ 4ಕ್ಕೆ ತಲುಪಿದೆ. 2022ರಲ್ಲಿ ದೇಶದಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳಲ್ಲಿ ಪುರುಷ ವಿದ್ಯಾರ್ಥಿಗಳ ಪ್ರಮಾಣ ಶೇ 53ರಷ್ಟಿತ್ತು. ಆದರೆ, ವಿದ್ಯಾರ್ಥಿನಿಯರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆಯಲ್ಲಿ ಆ ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 7ರಷ್ಟು ಏರಿಕೆಯಾಗಿತ್ತು. ವಿವಿಧ ಕಾರಣಗಳಿಗಾಗಿ ಆತ್ಮಹತ್ಯೆ ಪ್ರಕರಣಗಳು ಸರಿಯಾಗಿ ವರದಿಯಾಗುವುದಿಲ್ಲ. ಇದರಿಂದಾಗಿ ಒಂದಷ್ಟು ಪ್ರಕರಣಗಳು ಅಪರಾಧ ದಾಖಲೆಗಳ ಬ್ಯೂರೊ ದತ್ತಾಂಶವನ್ನು ಸೇರುವುದಿಲ್ಲ. ವಾಸ್ತವಿಕ ಪರಿಸ್ಥಿತಿಯು ವರದಿಯಲ್ಲಿ ಉಲ್ಲೇಖಿಸಿರುವುದಕ್ಕಿಂತಲೂ ಗಂಭೀರವಾಗಿಯೇ ಇದೆ.



ವಿದ್ಯಾರ್ಥಿಗಳ ಆತ್ಮಹತ್ಯೆಯು ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿದೆ. ಇದರ ನಿವಾರಣೆಗೆ ಗಂಭೀರ ಪ್ರಯತ್ನಗಳು ಆಗಬೇಕಿದೆ

ಜೀವನದ ಮಹತ್ವದ ಘಟ್ಟ ಪ್ರವೇಶಿಸುವ ಹೊಸ್ತಿಲಲ್ಲಿರುವ ಯುವ ಸಮೂಹವು ಭವಿಷ್ಯದ ಕುರಿತು ಆಶಾವಾದ ಮತ್ತು ಸಕಾರಾತ್ಮಕ ಚಿಂತನೆ ಹೊಂದಿರಬೇಕು. ಈ ದಿಸೆಯಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ವಿದ್ಯಾರ್ಥಿ ಜೀವನದ ಹಂತದಲ್ಲಿ ಬಹುತೇಕರು ವೈಯಕ್ತಿಕ, ಕೌಟುಂಬಿಕ ಮತ್ತು ಸಾಮಾಜಿಕ ಸವಾಲುಗಳನ್ನು ಎದುರಿಸಿದ ಅನುಭವವನ್ನು ಹೊಂದಿರುವುದಿಲ್ಲ. ಅದುವೇ ಹಲವರನ್ನು ಆತ್ಮಹತ್ಯೆಯತ್ತ ದೂಡುತ್ತದೆ. ವಿದ್ಯಾರ್ಥಿಗಳ ಆತ್ಮಹತ್ಯೆಯು ದೊಡ್ಡ ಸಾಮಾಜಿಕ ಸಮಸ್ಯೆಯಾಗಿ ಬೆಳೆಯುತ್ತಿದೆ. ಇದಕ್ಕೆ ಹಲವು ಅಂಶಗಳು ಕಾರಣವಾಗಿವೆ. ವಿದ್ಯಾರ್ಥಿಗಳ ಮೇಲೆ ಶೈಕ್ಷಣಿಕ ಮತ್ತು ಕೌಟುಂಬಿಕ ಒತ್ತಡಗಳು ಹೆಚ್ಚುತ್ತಿವೆ. ಹಲವರು ಬಲವಂತದ ಕಾರಣಕ್ಕಾಗಿ ತಮಗೆ ಇಷ್ಟವಿಲ್ಲದ ಶೈಕ್ಷಣಿಕ ಕೋರ್ಸ್ ಅಥವಾ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳಿಗೆ ಆರ್ಥಿಕ ಕಾರಣಗಳೂ ಇವೆ. ಭವಿಷ್ಯದ ಬಗೆಗಿನ ಉದ್ವೇಗದಿಂದಲೂ ಕೆಲವರು ಜೀವನವನ್ನು ಕೊನೆಗಾಣಿಸಿಕೊಂಡಿದ್ದಾರೆ. 2019ರಿಂದ 2023ರ ಅವಧಿಯಲ್ಲಿ 69 ಮಂದಿ ಐಐಟಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶೈಕ್ಷಣಿಕ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಿಗೆ ಸಂಬಂಧಿಸಿದ ಕೋಚಿಂಗ್ ಕೇಂದ್ರಗಳ ಪ್ರಧಾನ ತಾಣವಾಗಿರುವ ರಾಜಸ್ಥಾನದ ಕೋಟಾದಲ್ಲಿ ಶೈಕ್ಷಣಿಕ ಒತ್ತಡಗಳನ್ನು ತಡೆದುಕೊಳ್ಳಲಾಗದೇ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳು ಪದೇ ಪದೇ ವರದಿಯಾಗುತ್ತಿವೆ. 12 ವರ್ಷದಷ್ಟು ಸಣ್ಣ ವಯಸ್ಸಿನ ಮಕ್ಕಳು ಕೂಡ ಆತ್ಮಹತ್ಯೆ ಮಾಡಿಕೊಂಡಿರುವುದು ಅಥವಾ ಆತ್ಮಹತ್ಯೆಯ ಪ್ರಯತ್ನ ಮಾಡಿರುವಂತಹ ವರದಿಗಳೂ ಇವೆ.

ಶಾಲೆಗಳಲ್ಲಿ ಮಾನಸಿಕ ಆರೋಗ್ಯದ ವಿಷಯವನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕಾದ ಅಗತ್ಯವಿದೆ. ಕ್ರೀಡೆ ಮತ್ತು ಇತರ ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢವಾಗಿ ಬೆಳೆಯಲು ಸಹಕಾರಿಯಾಗುತ್ತವೆ. ಆದರೆ, ಹೆಚ್ಚಿನ ಶಾಲೆಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಒತ್ತು ನೀಡಿ, ಪಠ್ಯೇತರ ಚಟುವಟಿಕೆಗಳನ್ನು ಕಡೆಗಣಿಸುತ್ತಿವೆ. ವಿದ್ಯಾರ್ಥಿಗಳಿಗೆ ಆಪ್ತ ಸಮಾಲೋಚನೆಯ ಸೌಲಭ್ಯ ಒದಗಿಸಬಹುದಾದ ಸಾಧ್ಯತೆಯನ್ನು ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳು ಹೊಂದಿದ್ದರೂ ಅವು ಆ ಕೆಲಸವನ್ನು ಮಾಡುತ್ತಿಲ್ಲ. ಈ ವಿಚಾರದಲ್ಲಿ ಪೋಷಕರ ಮೇಲೆ ಮಹತ್ತರವಾದ ಜವಾಬ್ದಾರಿ ಇದೆ. ಮಕ್ಕಳು ತಮ್ಮದೇ ಆದ ವೈಯಕ್ತಿಕ ಜೀವನವನ್ನು ಹೊಂದಿದ್ದಾರೆ ಎಂಬುದನ್ನು ಪೋಷಕರು ಅರ್ಥ ಮಾಡಿಕೊಳ್ಳಬೇಕು. ಪೋಷಕರ ಇಚ್ಛೆಗೆ ತಕ್ಕಂತೆ ಮಕ್ಕಳು ಜೀವನ ನಡೆಸಬೇಕು ಎಂದು ಅವರ ಮೇಲೆ ಒತ್ತಡ ಹೇರುವುದು ಸರಿಯಲ್ಲ. ಜಗತ್ತು ದಿನದಿಂದ ದಿನಕ್ಕೆ ಹೆಚ್ಚು ಸ್ಪರ್ಧಾತ್ಮಕವೂ ಮತ್ತು ವ್ಯಕ್ತಿಗತವೂ ಆಗುತ್ತಿದೆ. ಯಶಸ್ಸಿಗೆ ಒಂದೇ ಮಾದರಿ ಇರುವುದಿಲ್ಲ, ಜೀವನವನ್ನು ಹಲವು ಬಗೆಯಲ್ಲಿ ಯಶಸ್ವಿಯಾಗಿ ಮುನ್ನಡೆಸಬಹುದು ಎಂಬುದನ್ನು ಮಕ್ಕಳಿಗೆ ಮನದಟ್ಟು ಮಾಡುವ ಜವಾಬ್ದಾರಿ ಸಮಾಜದ ಮೇಲಿದೆ. ವಿದ್ಯಾರ್ಥಿಗಳ ಆತ್ಮಹತ್ಯೆ ಸಮಸ್ಯೆಯ ಪರಿಹಾರಕ್ಕೆ ವಿವಿಧ ಹಂತಗಳಲ್ಲಿ ಕೆಲಸ ಮಾಡಬೇಕಿದೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಇದೊಂದು ಪ್ರಮುಖ ಸವಾಲು ಎಂಬುದನ್ನು ಸಮಾಜವು ಒಪ್ಪಿಕೊಂಡು, ಅದರ ನಿವಾರಣೆಗೆ ಹೆಜ್ಜೆ ಇಡಬೇಕು.

ದಿನದ ಟ್ವೀಟ್

ರಾಜಕೀಯ ಸ್ವಾರ್ಥ ಇರಬಾರದು



ಯಾವುದೇ ಧರ್ಮ ಅಥವಾ ಸಮುದಾಯಕ್ಕೆ ಸೇರಿದ ರಾಜರು, ಮಹಾರಾಜರು, ಸಂತರು ಮತ್ತು ಗುರುಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಜನರು ಸಕಾರಾತ್ಮಕವಾಗಿ ಯೋಚಿಸಬೇಕು. ಅವರ ಪ್ರತಿಮೆಗಳನ್ನು ಸ್ಥಾಪಿಸುವುದರಲ್ಲಿ ದುರುದ್ದೇಶ ಅಥವಾ ರಾಜಕೀಯ ಸ್ವಾರ್ಥ ಇರಬಾರದು. ಮಹಾರಾಷ್ಟ್ರದಲ್ಲಿ ಆಗಿರುವಂತೆ ಯಾವುದೇ ರಾಜ್ಯದಲ್ಲಿ ಪ್ರತಿಮೆ ಕುಸಿದರೆ, ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕೇ ವಿನಾ ಅದರ ನೆಪದಲ್ಲಿ ರಾಜಕೀಯ ಮಾಡಬಾರದು.

(ಮಹಾರಾಷ್ಟ್ರದ ರಾಜ್‌ಕೋಟ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಕುಸಿತಕ್ಕೆ ಸಂಬಂಧಿಸಿದ ರಾಜಕೀಯ ಮೇಲಾಟಕ್ಕೆ ಪ್ರತಿಕ್ರಿಯೆ)

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಕಿಡಿನುಡಿ



...ನಿಮ್ಮ ಜೊತೆ ನಿಲ್ಲುವವರು ಯಾರು ಎಂಬುದು ಸಂಕಷ್ಟದ ಸಂದರ್ಭಗಳಲ್ಲಿ ನಿಮಗೆ ಮನವರಿಕೆಯಾಗುತ್ತದೆ ಎಂಬ ಮಾತಿದೆ. ನಮ್ಮನ್ನು ರಸ್ತೆಯ ಮೇಲೆ ಎಳೆದಾಡಿದ ಸಂದರ್ಭದಲ್ಲಿ ಬಿಜೆಪಿಯನ್ನು ಬಿಟ್ಟು ಬೇರೆಲ್ಲ ಪಕ್ಷಗಳೂ ನಮ್ಮ ಬೆಂಬಲಕ್ಕೆ ನಿಂತವು. ನಾವು ನೋವು ಅನುಭವಿಸಿದ್ದೇವೆ. ಅದೇ ರೀತಿ ಯಾತನೆ ಅನುಭವಿಸಿದ ಎಲ್ಲ ಮಹಿಳೆಯರ ಪರವಾಗಿ ನಿಲ್ಲುತ್ತೇವೆ.

ವಿನೇಶ್ ಫೋಗಟ್, ಒಲಿಂಪಿಯನ್ ಕುಸ್ತಿಪಟು

25 ವರ್ಷಗಳ ಹಿಂದೆ

ಮಂಗಳವಾರ, 7-9-1999

● **ದಂತವೈದ್ಯ ಕಾಲೇಜು ಪ್ರಕರಣ: ಬಂಗಾರಪ್ಪ ಆರೋಪ ಮುಕ್ತ**

ಬೆಂಗಳೂರು, ಸೆ. 6– ನಗರದ ಪಿ.ಸಿ. ದಂತವೈದ್ಯ ಕಾಲೇಜಿಗೆ ಮನ್ನಣೆ ಕೊಡಿಸಲು ಅಂದಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರು ₹ 5 ಲಕ್ಷ ತೆಗೆದುಕೊಂಡರೆಂಬ ಆರೋಪದಿಂದ ಅವರನ್ನು ಹೈಕೋರ್ಟ್ ಇಂದು ಮುಕ್ತಗೊಳಿಸಿತು.

ಕಾಲೇಜಿಗೆ ಮನ್ನಣೆ ಪಡೆಯಲು ಬಂಗಾರಪ್ಪ ಅವರೂ ಸೇರಿದಂತೆ ಹಲವರಿಗೆ ಲಂಚ ನೀಡಿದುದಾಗಿ ಕಾಲೇಜಿನ ಪ್ರಾಂಶುಪಾಲ ಆರ್.ಡಿ.ಪೆಣ್ಣತ್ತೂರು ತಿಳಿಸಿದ್ದರ ಮೇರೆಗೆ ತನಿಖೆ ನಡೆಸಿದ ಸಿಬಿಐನವರು ವಿಶೇಷ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು.

● **ವೈಜಯಂತಿಮಾಲಾ ಬಾಲಿ ಬಿಜೆಪಿಗೆ**

ಚೆನ್ನೈ, ಸೆ. 6 (ಯುಎನ್‌ಐ)– ಖ್ಯಾತ ನಟಿ, ರಾಜ್ಯಸಭಾ ಸದಸ್ಯೆ ವೈಜಯಂತಿಮಾಲಾ ಬಾಲಿ ಇಂದು ಇಲ್ಲಿ ಬಿಜೆಪಿ ಸೇರಿದರು. 1984, 1989ರಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಮದ್ರಾಸ್ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

50 ವರ್ಷಗಳ ಹಿಂದೆ

ಶನಿವಾರ, 7-9-1974

● **ತನಿಖಾ ನಿರ್ಣಯ ಚರ್ಚೆಗೆ ಸರ್ಕಾರದ ಒಪ್ಪಿಗೆ: ವಿರೋಧಪಕ್ಷಕ್ಕೆ ಜಯ**

ನವದೆಹಲಿ, ಸೆ. 6– ಆಮದು ಲೈಸೆನ್ಸ್ ಪ್ರಕರಣದ ಬಗ್ಗೆ ಸಂಸದೀಯ ತನಿಖೆ ನಡೆಸಬೇಕೆಂಬ ವಿರೋಧ ಪಕ್ಷದ ನಿರ್ಣಯ ಕುರಿತು ಲೋಕಸಭೆಯಲ್ಲಿ ಚರ್ಚೆಗೆ ಸರ್ಕಾರ ಇಂದು ಒಪ್ಪಿಕೊಂಡಿದ್ದು ವಿರೋಧ ಪಕ್ಷಕ್ಕೆ ಭಾರಿ ಜಯವುಂಟಾಯಿತು.

ಲೋಕಸಭೆಯ ಕಲಾಪಗಳನ್ನೆಲ್ಲ ಮುಂದಕ್ಕೆ ಹಾಕುವ ಅಪರೂಪ ಕ್ರಮ ಕೈಗೊಂಡ ಸಭಾಧ್ಯಕ್ಷರು, ಕಲಾಪ ಸಲಹಾ ಸಮಿತಿಯ ತೊಂಬತ್ತು ನಿಮಿಷದ ಸಭೆ ನಡೆಸಿದ ನಂತರ ನಿರ್ಣಯ ಕುರಿತು ಚರ್ಚೆಗೆ ಸರ್ಕಾರ ಒಪ್ಪಿರುವುದನ್ನು ಪ್ರಕಟಿಸಿದರು.

ಪ್ರಧಾನಿ ನಿವಾಸದಲ್ಲಿ ನಿನ್ನೆ ಮಧ್ಯರಾತ್ರಿ ನಡೆದ ಸಂಪುಟದ ಹಿರಿಯ ಸದಸ್ಯರ ಸಭೆಯನ್ನು ಅನುಸರಿಸಿ ಲೈಸೆನ್ಸ್ ಹಗರಣದ ಬಗ್ಗೆ ಸಂಸದೀಯ ತನಿಖೆಗೆ ವಿರೋಧ ಪಕ್ಷದ ಬೇಡಿಕೆ ವಿಷಯದಲ್ಲಿ ಸರ್ಕಾರ ತನ್ನ ಬಿಗಿಧೋರಣೆಯನ್ನು ಸಡಿಲಿಸಿದೆ.

● **ಭಾರತದ ಉದ್ದೇಶದ ಬಗ್ಗೆ ತನಗೆ ಯಾವುದೇ ಶಂಕೆ ಇಲ್ಲ: ನೇಪಾಳ**

ನವದೆಹಲಿ, ಸೆ. 6– ಸಿಕ್ಕಿಂಗೆ ಸಹ ಸದಸ್ಯ ಸ್ಥಾನಮಾನ ನೀಡುವ ಭಾರತದ ನಿರ್ಧಾರದ ಬಗ್ಗೆ ಕಳೆದ ಎರಡು ದಿನಗಳಿಂದ ಉಗ್ರ ಪ್ರದರ್ಶನ ನಡೆಸಿದ ನಂತರ ಭಾರತದ ಉದ್ದೇಶದ ಬಗ್ಗೆ ತನಗೆ ಯಾವುದೇ ಭೀತಿ ಇಲ್ಲವೆಂದು ನೇಪಾಳ ಭಾರತಕ್ಕೆ ಆಶ್ವಾಸನೆ ನೀಡಿದೆ.

ಎಲ್ಲರನ್ನೂ ಒಳಗೊಳ್ಳುವ ಅಭಿವೃದ್ಧಿ ನಮ್ಮದಾಗುವುದು ಅಗತ್ಯ

ಭಾರತ: ಭವಿಷ್ಯ, ಅವಕಾಶ, ಸಾಧ್ಯತೆ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

‘ನಿಮಗೆ ಶುಭವಾಗುತ್ತೆತೆ’ ಎಂದು ಜನರಿಗೆ ಕಣಿ ಹೇಳುವವರನ್ನು ಸಂತೆ, ಜಾತ್ರೆ, ಬೀದಿಗಳಲ್ಲಿ ಕಾಣುತ್ತಲೇ ಇರುತ್ತೇವೆ. ಅದೇ ರೀತಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆ ತಜ್ಞರೊಬ್ಬರು ದೇಶಗಳ ಆರ್ಥಿಕ ಅಭಿವೃದ್ಧಿಯ ಬಗ್ಗೆ ಕಣಿ ಹೇಳುತ್ತಾರೆ. ಇವರ ಹೆಸರು ಕಿರಿಲ್ ಸೊಕೋಲೋಫ್. ಮುಂದಿನ ದಶಕಗಳಲ್ಲಿ ಯಾವ್ಯಾವ ದೇಶಗಳು ಆರ್ಥಿಕವಾಗಿ ಮುನ್ನಡೆಯುತ್ತವೆ, ಯಾವ ದೇಶಗಳು ಮುಗ್ಗರಿಸುತ್ತವೆ, ಯಾವು ಹಿಂದುಳಿಯುತ್ತವೆ ಎಂಬುದನ್ನೆಲ್ಲ ಇವರು ಕಣ್ಣಾರೆ ಕಂಡವರಂತೆ ಹೇಳುತ್ತಾರೆ.

ಅಂತರರಾಷ್ಟ್ರೀಯ ಸಂಶೋಧನಾ ಸಂಸ್ಥೆ ‘13 ಡಿ’ ಮುಖ್ಯಸ್ಥರಾಗಿರುವ ಕಿರಿಲ್, ಇನ್ನು 25 ವರ್ಷಗಳಲ್ಲಿ ಭಾರತವು ಇಡೀ ವಿಶ್ವಕ್ಕಲ್ಲದಿದ್ದರೂ ದಕ್ಷಿಣ ಭೂಗೋಳದ ಭಾಗದಲ್ಲಿ ಏಕಮೇವಾದ್ವಿತೀಯ ನಾಯಕನಾಗಿ ಮೆರೆಯಲಿದೆ ಎಂದು ಇಂಗ್ಲಿಷ್ ದಿನಪತ್ರಿಕೆಯೊಂದಕ್ಕೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ. ಇಡೀ ದೇಶವಾಗಿ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ನಾವು ಏನೇನು ಮಾಡಿದರೆ ಅವರ ಮಾತು ಸಾಕಾರಗೊಳ್ಳಬಹುದು ಎಂಬುದನ್ನು ಅವರು ವಿವರಿಸಿದ್ದಾರೆ ಮತ್ತು ಈಗಾಗಲೇ ನಾವು ಯಾವುದರಲ್ಲಿ ಮುಂದಿದ್ದೇವೆ ಎಂಬುದರ ಪಟ್ಟಿಯನ್ನು ಸಹ ನೀಡಿದ್ದಾರೆ.


ಈ ನಾಲ್ಕು ದಶಕಗಳಲ್ಲಿ ಜಾಗತಿಕ ಆರ್ಥಿಕತೆಯ ಏಳುಬೀಳುಗಳ ಬಗ್ಗೆ ಇವರು ಹೇಳಿರುವುದು ಬಹುಮಟ್ಟಿಗೆ ನಿಜವಾಗಿದೆ. 90ರ ದಶಕದಲ್ಲಿ ಚೀನಾ ಆರ್ಥಿಕವಾಗಿ ದೊಡ್ಡ ಸ್ಥಾನ ಸಂಪಾದಿಸಲಿದೆ ಎಂದಿದ್ದರು. ಅದು ನಿಜವಾಯಿತು. ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಯಾಗಲಿದೆ ಎಂದಿದ್ದರು. ಅದೂ ನಮ್ಮ ಕಣ್ಣೆದುರಿಗೇ ಇದೆ. ಜಗತ್ತಿನ ಜನಸಂಖ್ಯೆಯ ಶೇಕಡ 88ರಷ್ಟು ವಿಶ್ವದ ದಕ್ಷಿಣ ಭಾಗದಲ್ಲಿಯೇ ಇದೆ. ಅವರೆಲ್ಲರಿಗೂ ಮುಂದಿನ ನೂರು ವರ್ಷಗಳ ಕಾಲ ಭಾರತ ನಾಯಕನಾಗಲಿದೆ ಎಂಬ ಕಿರಿಲ್ ಅವರ ಮಾತು ನಮ್ಮವರಲ್ಲಿ ಹುಮ್ಮಸ್ಸು ತುಂಬಿದ್ದರೆ, ಅಮೆರಿಕ, ಚೀನಾದಲ್ಲಿ ಆತಂಕ ಸೃಷ್ಟಿಸಿದೆ. 14 ವರ್ಷಗಳಿಂದ ಅಮೆರಿಕದಲ್ಲಿ ಕೇಂದ್ರೀಕೃತಗೊಂಡಿದ್ದ ಬಂಡವಾಳವು ಇನ್ನು ಮುಂದೆ ಭಾರತಕ್ಕೆ ಹರಿದುಬರಲಿದೆ, ಬಂಗಾರದ ಬೆಲೆ ಊಹಿಸಲಾಗದಷ್ಟು ಎತ್ತರಕ್ಕೆ ಏರಲಿದೆ ಎಂದಿದ್ದಾರೆ.

ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮವನ್ನು 2022ರಲ್ಲಿ ಆಚರಿಸಿದ್ದ ನಾವು ಈಗ ನೂರನೆಯ ವರ್ಷದತ್ತ ದಾಪುಗಾಲು ಹಾಕಿದ್ದೇವೆ. ಹೊಸ ತಂತ್ರಜ್ಞಾನದ ಬಲ ನಮ್ಮ ಹೆಜ್ಜೆಗಳನ್ನು ಹಿಂದೆಂದಿಗಿಂತ ಹೆಚ್ಚು ದೃಢವಾಗಿಸಿದೆ. ಇಡೀ ವಿಶ್ವದಲ್ಲಿ ಯಾಂತ್ರಿಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ನಮ್ಮಷ್ಟು ಬಳಸುವವರು ಯಾರೂ ಇಲ್ಲ. ‘ತರುಣದೇಶ’ ಎಂಬ ಖ್ಯಾತಿಯೂ ನಮಗಿದೆ. ಈ ತಾರುಣ್ಯವನ್ನೇ ಬಂಡವಾಳ ಮಾಡಿಕೊಂಡು ವ್ಯವಸ್ಥಿತವಾಗಿ ಉಪಯೋಗಿಸಿಕೊಂಡರೆ ಇನ್ನು 25 ವರ್ಷಗಳಲ್ಲಿ ವಿಶ್ವದ ನಂಬರ್ 1 ಆರ್ಥಿಕ ಶಕ್ತಿಯಾಗಿ ಹೊಮ್ಮುವ ಎಲ್ಲಾ ಅವಕಾಶಗಳು ನಮ್ಮೆದುರುಗಿವೆ.

ನಮ್ಮ ಆರ್ಥಿಕತೆಯ ಪ್ರಮಾಣ ಈಗಾಗಲೇ ಮೂರೂಕಾಲು ಲಕ್ಷ ಕೋಟಿ ಡಾಲರ್ ದಾಟಿದೆ. ಮುಂದಿನ ವರ್ಷದ ಕೊನೆಯ ವೇಳೆಗೆ ಅದನ್ನು ಐದು ಲಕ್ಷ ಕೋಟಿ ಡಾಲರ್‌ಗೆ ತಲುಪಿಸುವ ಉದ್ದೇಶದ ಯೋಜನೆಗಳು ಜಾರಿಯಲ್ಲಿವೆ. 2047ಕ್ಕೆ ಅದು 30 ಲಕ್ಷ ಕೋಟಿ ಡಾಲರ್ ಆಗಲಿದೆ ಎಂಬ ಅಂದಾಜಿದೆ. ಆಗ ಪ್ರತಿ ವ್ಯಕ್ತಿಯ ವಾರ್ಷಿಕ ತಲಾ ಆದಾಯವು ₹ 15 ಲಕ್ಷದಷ್ಟು ಇರುತ್ತದೆ. ಈಗಿನ ತಲಾ ಆದಾಯವು ₹ 2 ಲಕ್ಷ ಆಗಿದೆ. ನೀತಿ ಆಯೋಗವು ಜರ್ಮನಿ, ಸಿಂಗಪುರ, ಜಪಾನ್, ದಕ್ಷಿಣ ಕೊರಿಯಾ ದೇಶಗಳ ಸಾಧನೆಗಳ ಮಾದರಿಯನ್ನು ನಮ್ಮಲ್ಲೂ ಅನುಕರಿಸಬಹುದು ಎಂದು ಹೇಳುತ್ತಿದೆ. ಭವಿಷ್ಯದ ತಂತ್ರಜ್ಞಾನಗಳು ಎಂದು ಬಿಂಬಿತಗೊಂಡಿರುವ 63ರ ಪೈಕಿ 57ರಲ್ಲಿ ಚೀನಾ ಸಂಪೂರ್ಣ ಹಿಡಿತ ಸಾಧಿಸಿದೆ ಎಂಬ ಮಾಹಿತಿ ಇದೆ. ಮೂಲಸೌಕರ್ಯ ಅಭಿವೃದ್ಧಿಗಾಗಿ ಚೀನಾ ತನ್ನ ಜಿಡಿಪಿಯ ಶೇ 20ರಷ್ಟು ಬಳಸುತ್ತದೆ. ನಾವು ಬಳಸುತ್ತಿರುವುದು ಶೇ 3.3ರಷ್ಟು ಮಾತ್ರ. ಮೂಲಸೌಕರ್ಯ ಸೃಷ್ಟಿಯಾಗದೆ ದೊಡ್ಡ ಮಟ್ಟದ ಆರ್ಥಿಕ ಬೆಳವಣಿಗೆ ಕಷ್ಟವೇ ಸರಿ. ನಮ್ಮದು ವಿಕಸಿತ ಭಾರತವಾಗಲು ಪಕ್ಕದ ಚೀನಾದ ಸಾಧನೆಯನ್ನು ಮೀರಿಸಲೇಬೇಕು.

ಆರ್ಥಿಕತೆಯನ್ನು ತ್ವರಿತವಾಗಿ ವೃದ್ಧಿಸಬಲ್ಲ ಎಂಟು ವಿವಿಧ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅದಕ್ಕೆ ಬೇಕಾದ ಬಂಡವಾಳ ಮತ್ತು ಮಾನವ ಸಂಪನ್ಮೂಲ ಈ ಎರಡನ್ನೂ ಒದಗಿಸಿ ನಿಶ್ಚಿತ ಗುರಿ ತಲುಪುವ ಕೆಲಸಗಳು ನಡೆಯುತ್ತಿವೆ. ದೇಶದ ಜನಸಂಖ್ಯೆ 144 ಕೋಟಿ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಅರ್ಧದಷ್ಟು ಜನರ ವಯಸ್ಸು 29ರ ಕೆಳಗಿದೆ. 2047ಕ್ಕೆ ಜನಸಂಖ್ಯೆಯು 165 ಕೋಟಿಯಷ್ಟು ಆಗಲಿದೆ. ಜನರ ಸರಾಸರಿ ಆಯುಷ್ಯ 84 ವರ್ಷಕ್ಕೆ ಏರಲಿದೆ. ಶೇ 100ರ ಸಾಕ್ಷರತೆ, ರಸ್ತೆಗಳ ಮೇಲೆ ಶೇಕಡ 75ರಷ್ಟು ಎಲೆಕ್ಟ್ರಿಕ್ ವಾಹನಗಳು, ಕೆಲಸ ಮಾಡಲು ಸಾಮರ್ಥ್ಯವಿರುವ 112 ಕೋಟಿ ಜನ, ದೇಶದ ವಿಶ್ವವಿದ್ಯಾಲಯಗಳಲ್ಲಿ ಹೊರದೇಶಗಳ 5 ಲಕ್ಷ ವಿದ್ಯಾರ್ಥಿಗಳು ಇರಲಿದ್ದಾರೆ ಎಂಬ ಭವ್ಯ ಚಿತ್ರಣವಿದೆ.

1997ರಲ್ಲಿ ಸುವರ್ಣ ಸ್ವಾತಂತ್ರ್ಯವನ್ನು ದೇಶ ಸಂಭ್ರಮದಿಂದ ಆಚರಿಸಿತು. ಅಲ್ಲಿಂದ ಈಚೆಗೆ 27 ವರ್ಷಗಳು ಸಂದಿವೆ. ಅಂದು ಬಳಕೆಯಲ್ಲಿದ್ದ ತಂತ್ರಜ್ಞಾನದ ಅನೇಕ ಸಲಕರಣೆಗಳು ಈಗ ಎಲ್ಲಿಯೂ ಕಾಣಿಸುತ್ತಿಲ್ಲ. ಟೈಪ್ ರೈಟರ್, ರೀಲ್ ಕ್ಯಾಮೆರಾ, ಕ್ಯಾಸೆಟ್ ಟೇಪ್, ಸಂಗೀತ ಕೇಳಲು ಬಳಸುತ್ತಿದ್ದ ವಾಕ್ಮನ್, ಎಸ್‌ಟಿಡಿ ಬೂತ್, ಮುದ್ರಿತ ರೋಡ್ ಮ್ಯಾಪ್, ಉಬ್ಬಿದ ಟೆಲಿವಿಷನ್, ಫ್ಲಾಪಿ ಡಿಸ್ಕ್, ಟೆಲಿಗ್ರಾಂ ಕಳಿಸುವ ಸಾಧನ, ಪಾಕೆಟ್ ರೇಡಿಯೊ, ಟ್ರಾನ್ಸಿಸ್ಟರ್, ಸಿ.ಡಿ, ಡಿ.ವಿ.ಡಿ, ಡಯಲ್‌ಅಪ್ ಇಂಟರ್ನೆಟ್ ಸಾಧನ ಹೀಗೆ ಹತ್ತು ಹಲವು ಎಲೆಕ್ಟ್ರಾನಿಕ್ಸ್ ವಸ್ತುಗಳು ತೆರೆಮರೆಗೆ ಸರಿದು ದಶಕಗಳೇ ಆಗಿವೆ. ಮೊದಲೆಲ್ಲ ಎಲ್ಲ ಮನೆಗಳಲ್ಲೂ ಇರುತ್ತಿದ್ದ ಲ್ಯಾಂಡ್‌ಲೈನ್ ದೂರವಾಣಿ ಸಂಪರ್ಕ ವ್ಯವಸ್ಥೆ ಈಗ ಬಹುಮಟ್ಟಿಗೆ ಸರ್ಕಾರಿ ಕಚೇರಿಗಳಿಗಷ್ಟೇ ಸೀಮಿತಗೊಂಡಿದೆ. ಈಗ ಬಳಕೆಯಲ್ಲಿರುವ ಕೇಬಲ್ ಟಿ.ವಿ. ಜಾಲ, ಡಿಟಿಎಚ್ ಸೇವೆ, ಫ್ಯಾಕ್ಸ್ ಯಂತ್ರ, ಏಕಬಳಕೆಯ ಪ್ಲಾಸ್ಟಿಕ್, ಲೋಹದ ಬೀಗದ ಕೈ, ಡೀಸೆಲ್ ವಾಹನ, ಶಾಪಿಂಗ್‌ಗೆ ಬಳಸುವ ಪ್ಲಾಸ್ಟಿಕ್ ಕೈಚೀಲ... ಇಂಥವುಗಳು 2047ರ ವೇಳೆಗೆ ಸಂಪೂರ್ಣ ಕಣ್ಮರೆಯಾಗಲಿವೆ.



ಆರ್ಥಿಕ ಅಭಿವೃದ್ಧಿಯಾದರೆ ಎಲ್ಲವೂ ಆದಂತೆ ಎನ್ನುವುದು ಅರ್ಧಸತ್ಯವಷ್ಟೇ. ಜನರ ಸಾಮಾಜಿಕ, ಸಾಂಸ್ಕೃತಿಕ, ಭಾವನಾತ್ಮಕ ಆಯಾಮಗಳಲ್ಲೂ ಅಭಿವೃದ್ಧಿ ಹಾಸುಹೊಕ್ಕಾಗಬೇಕು. ಜೀವನವಿಧಾನ ಸರಳಗೊಳ್ಳಬೇಕು. ಸಮುದಾಯಗಳ ಆರೋಗ್ಯ ಉನ್ನತ ಮಟ್ಟದಲ್ಲಿರಬೇಕು. ಪ್ರಜೆಗಳ ನೆಮ್ಮದಿಯ ಸೂಚ್ಯಂಕ ಹೆಚ್ಚಬೇಕು. 2070ರ ವೇಳೆಗೆ ಶೂನ್ಯ ಇಂಗಾಲ ಹೊಮ್ಮುವಿಕೆಯನ್ನು ಸಾಧಿಸುತ್ತೇವೆ ಎಂದು ಶಪಥ ಮಾಡಿದ್ದೇವೆ. ಭೂಮಿ ಬಿಸಿ ಏರಿಕೆಯನ್ನು ತಡೆಯುವಲ್ಲಿ ನಾವು ಎಲ್ಲ ದೇಶಗಳಿಗಿಂತ ಮುಂದಿರಬೇಕು. ಜನ ತಮ್ಮ ಎಲ್ಲ ನಡವಳಿಕೆಗಳಲ್ಲೂ ಸಾಮಾಜಿಕ ಪ್ರಜ್ಞೆ ಮೆರೆಯಬೇಕು. ಕುವೆಂಪು ಹೇಳಿದ ವಿಶ್ವಮಾನವ ತತ್ವದ ತಳಹದಿಯ ಮೇಲೆ ನಮ್ಮ ಕೆಲಸಗಳು ನಡೆಯಬೇಕು.

ದುಡಿಯುವ ಕೈಗಳಿಗೆ ಉದ್ಯೋಗಗಳು ಸಿಗಬೇಕು. ದೇಶಕ್ಕೆ ಹೆಸರು ಮತ್ತು ಆರ್ಥಿಕ ಸದೃಢತೆ ಈ ಎರಡನ್ನೂ ತಂದುಕೊಟ್ಟಿದ್ದ ಸರ್ಕಾರಿ ಸ್ವಾಮ್ಯದ ಅನೇಕ ಉದ್ಯಮಗಳು ಬಾಗಿಲು ಹಾಕಿಕೊಂಡಿವೆ. ಅವುಗಳ ಪುನಶ್ಚೇತನ ಆಗಬೇಕು. ಸಂಶೋಧನೆಯ ಪ್ರಯೋಜನಗಳು ಎಲ್ಲರಿಗೂ ತಲುಪುತ್ತಿಲ್ಲ. ವಿಜ್ಞಾನ– ತಂತ್ರಜ್ಞಾನ ಸಂಶೋಧನೆಗೆ ನೀಡುತ್ತಿರುವ ಅನುದಾನದ ಪ್ರಮಾಣ ಹೆಚ್ಚಬೇಕು. ಉನ್ನತ ಶಿಕ್ಷಣವು ಗ್ರಾಮೀಣ ಮಕ್ಕಳಿಗೆ ಎಟಕುತ್ತಿಲ್ಲ. ಸುಧಾರಿತ ವೈದ್ಯಕೀಯ ಸೇವೆಗಳು ದುಡ್ಡಿರುವವರಿಗೆ ಮಾತ್ರ ಎನ್ನುವ ಪರಿಸ್ಥಿತಿ ಈಗಲೂ ಇದೆ. ಕೇರಳ ರಾಜ್ಯದಲ್ಲಿ ಪ್ರತಿ 10,000 ಜನರಿಗೆ 42 ಮಂದಿ ವೈದ್ಯರು ಇದ್ದರೆ, ಜಾರ್ಖಂಡ್‌ನಲ್ಲಿ ಅಷ್ಟೇ ಜನರಿಗೆ ಬರೀ ನಾಲ್ಕು ವೈದ್ಯರು ಲಭ್ಯವಿದ್ದಾರೆ. ಆತ್ಮನಿರ್ಭರದ ಕೆಲಸಗಳು ನಮ್ಮ ರಕ್ಷಣಾ ಸಂಶೋಧನೆಯಲ್ಲಿ ಎದ್ದುಕಾಣುತ್ತಿಲ್ಲ. ನಮ್ಮದೇ ತಂತ್ರಜ್ಞಾನ ಬಳಸಿ ಜೆಟ್ ಎಂಜಿನ್ ನಿರ್ಮಿಸುವ ಪ್ರಯತ್ನವು 25 ವರ್ಷಗಳಿಂದ ನಡೆದಿದ್ದರೂ ಅದು ಇನ್ನೂ ಸಾಧ್ಯವಾಗಿಲ್ಲ. ಚಾಲಕರಹಿತ ಆಗಸ ವಾಹನಗಳ ನಿರ್ಮಾಣ ತಂತ್ರಜ್ಞಾನ ನಮ್ಮನ್ನು ಇನ್ನೂ ಕೈಹಿಡಿದಿಲ್ಲ. ಒಲಿಂಪಿಕ್ ಆಟೋಟಗಳಲ್ಲಿ ಪದಕಗಳ ಸಂಖ್ಯೆ ಎರಡಂಕಿ ದಾಟುತ್ತಿಲ್ಲ.

ಆಹಾರ ಬೆಳೆಯುವ ರೈತ, ದೇಶ ಕಾಯುವ ಸೈನಿಕ, ಮಕ್ಕಳನ್ನು ರೂಪಿಸುವ ಶಿಕ್ಷಕ ಮತ್ತು ದೇಶದ ಉತ್ಪನ್ನ ರೂಪಿಸುವ ಶ್ರಮಿಕ ವರ್ಗಕ್ಕೆ ಆತ್ಮಗೌರವ ಮತ್ತು ಗಳಿಕೆ ಈ ಎರಡೂ ಹೆಚ್ಚಾಗುವಂತೆ ಸಮಾಜದ ನಡವಳಿಕೆ ರೂಪುಗೊಳ್ಳಬೇಕು. ಈ ದಿಸೆಯಲ್ಲಿ ಸಮೂಹಪ್ರಜ್ಞೆ ಜಾಗೃತಗೊಂಡರೆ ವಿಕಸಿತ ಭಾರತದ ಕನಸು ನನಸಾಗುವುದು ಕಷ್ಟವೇನಲ್ಲ.

ಚುರುಮುರಿ



ಸ್ವರ್ಗಭಾಷಾ ಕೈಪಿಡಿ!

● ಚಂದ್ರಕಾಂತ ವಡ್ಡು

‘ಹಲೋ ಪ್ರಾಣೆ… ಹೇಗಿದ್ದೀಯಾ? ಹುಟ್ಟು ಹಬ್ಬದ ಹಾರ್ದಿಕ ಶುಭಾಶಯ…’ ಪ್ರಾಣಿ ಜೊತೆ ಮಾತುಕತೆಯಾ ಎಂದು ಗಾಬರಿ ಬೀಳಬೇಡಿ. ಪ್ರಾಣೇಶ, ಗೆಳೆಯರ ಬಾಯಲ್ಲಿ ಪ್ರೀತಿಯ ‘ಪ್ರಾಣಿ’ ಅರ್ಥಾತ್ ಮನುಷ್ಯಪ್ರಾಣಿ ಅಷ್ಟೇ. ಅಪಾರ ದೈವಭಕ್ತಿಯ ಈತ ಗೆಳೆಯರ ಪ್ರಾಣ ತಿಂದ ಮಾತ್ರಕ್ಕೆ ಪ್ರಾಣಿ ಆಗಬೇಕಿರಲಿಲ್ಲ. ಮಾತಾಡುವಾಗ ಮಹಾಪ್ರಾಣ ನುಂಗಿ ಅಲ್ಪಪ್ರಾಣಗಳನ್ನಷ್ಟೇ ಉದುರಿಸುವುದು ಕೂಡ ಪ್ರಾಣಿನಾಮಧೇಯಕ್ಕೆ ಕಾರಣವಾಗಿರಬಹುದು.

‘ಏನೋ ಇದೀನಿ… ಭೂಮಿಗೆ ಭಾರವಾಗಿ…’ ಪ್ರಾಣಿಯ ನಿರಾಶೆಯ ದನಿ ತಿಂಗಳೇಶನಿಗೂ ಬೇಸರ ತರಿಸಿತು.

‘ಹುಟ್ಟು ಹಬ್ಬದ ದಿನ ಯಾಕೋ ಹೀಗಂತೀಯಾ? ಏನಾಯ್ತೀಗ?’

‘ಇನ್ನೇನು ಅರುವತ್ತು ವರ್ಷ ಆಯ್ತು, ಶಿವ ಶಿವಾ ಅಂತ ಸ್ವರ್ಗದ ಕಡೆ ಮುಖ ಮಾಡೋಣ ಅಂದ್ರೆ… ಅದೇನೋ ಸಂಸ್ಕೃತ ಅಡ್ಡ ತಂದಾರಲ್ಲಪ್ಪಾ…’. ಮಹಾಪ್ರಾಣ ಉಚ್ಚಾರ ಅಂದ್ರೆ ಪ್ರಾಣಾನೇ ಬಿಡುವ ಈ ಪ್ರಾಣಿ ಇನ್ನು ಸಂಸ್ಕೃತ ಕಲಿಯೋದು, ಸ್ವರ್ಗ ಸೇರೋದು…

‘ಅಯ್ಯೋ ತಲೆ ಕೆಡಿಸಿಕೊಳ್ಳಬೇಡ. ಇನ್ನೇನು ಎಲ್ಲಾ ಕಡೆ ಸಂಸ್ಕೃತ ಕೋರ್ಸುಗಳು, ಮನೆಪಾಠ ಶುರುವಾಗುತ್ತವೆ. ‘ಸ್ವರ್ಗಭಾಷಾ ಕೈಪಿಡಿ’, ‘ಸ್ವರ್ಗಕ್ಕೆ ಮೂವತ್ತೇ ಮೆಟ್ಟಿಲು’, ‘ಸಂಸ್ಕೃತ ಭಾಷಾ-ಸ್ವರ್ಗಕ್ಕೆ ವೀಸಾ’, ‘ಸಂಸ್ಕೃತ ಕಲಿ- ಸ್ವರ್ಗಕ್ಕೆ ಜಿಗಿ’ ಪುಸ್ತಕಗಳು ಬರಬಹುದು’.

‘ಸ್ವರ್ಗದ ಆಸೆಯಿಂದ ನಾವು ತೀರ್ಥಯಾತ್ರೆ ಮಾಡಿದ್ದೆಲ್ಲಾ ವೇಸ್ಟ್ ಆಯ್ತು. ಈಗಿನ ಹುಡುಗರು ಬುದ್ಧಿವಂತರು ನೋಡು. ಹೈಸ್ಕೂಲಿನಲ್ಲೇ ಸಂಸ್ಕೃತ ಆಯ್ಕೆ ಮಾಡಿಕೊಂಡು ಸ್ಕೋರೂ ಮಾಡ್ತಾವೆ, ಸ್ವರ್ಗದ ದಾರಿನೂ ಕಾಣ್ತಾವೆ. ನಮ್ಮಪ್ಪ ಕನ್ನಡ ಓದ್ಸಿ ನರಕಕ್ಕೆ ಕೆಡವಿದ’.

‘ಆಗಿದ್ದಾಯ್ತು, ಹಿಂದಿನವರನ್ನು ದೂರುತ್ತಾ ದಿನ ದೂಡೋದಿಕ್ಕೆ ನೀನೇನೂ ಸರ್ಕಾರ ನಡೆಸುವವನಲ್ಲ. ಈಗಲಾದ್ರೂ ಪ್ರಯತ್ನ ಪಟ್ಟರೆ ‘ವೀಸಾ’ ಸಿಗಬಹುದು’.

‘ಅರುವತ್ತನೇ ವಯಸ್ಸಿನಲ್ಲಿ ಎಂಥದೋ ಪ್ರಯತ್ನ? ಈಗ ವಯಸ್ಸಿನ ಜೊತೆಗೆ ಬಿ.ಪಿ, ಶುಗರು ಎಲ್ಲವೂ ಏರುಗತಿಯಲ್ಲಿವೆ; ಆಯಸ್ಸೊಂದೇ ಇಳಿಮುಖಿ!’

‘ನೀನೀಗ ಹಿರಿಯ ನಾಗರಿಕ. ಬ್ಯಾಂಕ್ ಬಡ್ಡಿ ಅರ್ಧ ಪರ್ಸೆಂಟು ಏರಿಕೆಯಾಗಲಿದೆ, ಖುಷಿಪಡು!’

ಸಂಗತ

ತರಗತಿಯ ಮಹತ್ವ ಮನಗಾಣಿಸಬೇಕಿದೆ

ವಿದ್ಯಾರ್ಥಿಗಳ ಹಾಜರಾತಿಯ ಕೊರತೆ ಜಾಗತಿಕ ಸಮಸ್ಯೆಯಾಗಿ ಪರಿಣಮಿಸಿದೆ

● ಬಿ.ಎಸ್. ಭಗವಾನ್

‘ಶಾಲೆಗೆ ಚಕ್ಕರ್, ಊಟಕೆ ಹಾಜರ್, ಲೆಕ್ಕದಿ ಬರಿ ಸೊನ್ನೆ....’ ಈ ಸಿನಿಮಾ ಹಾಡಿನಲ್ಲಿ ತರಗತಿಗಳಿಗೆ ಗೈರಾಗುವುದರ ದುಷ್ಪರಿಣಾಮಗಳು ಮಾರ್ಮಿಕವಾಗಿ ವ್ಯಕ್ತಗೊಂಡಿವೆ. ಒಂದಿಲ್ಲೊಂದು ಕಾರಣಕ್ಕೆ ತರಗತಿಯಿಂದ ತಪ್ಪಿಸಿಕೊಳ್ಳಬಹುದು. ಆದರೆ ಮುಂದೆ ದೀರ್ಘಾವಧಿಗೆ ಎದುರಾಗುವ ಸಮಸ್ಯೆಗಳು ಬಹುಮುಖಿ.

ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದ ದಿನ ಅದೆಷ್ಟು ಹಿಗ್ಗಿರುತ್ತಾರೆ, ಕಂಡಕಂಡವರ ಬಳಿ ಸಂತೋಷವನ್ನು ಹಂಚಿಕೊಂಡಿರುತ್ತಾರೆ. ತರಗತಿಗೆ ಕ್ರಮಬದ್ಧವಾಗಿ ಹಾಜರಾಗದಿದ್ದರೆ ಬೇರೆ ಬೇರೆ ನೆಲೆಯಲ್ಲಿ ಅದು ಅಪರಾಧಪ್ರಜ್ಞೆಯಾಗಿ ವಿದ್ಯಾರ್ಥಿಯನ್ನು ಕಾಡಬಹುದು. ಹೋಂ ವರ್ಕ್, ಅಸೈನ್‌ಮೆಂಟ್ ಏನು ನಿಯೋಜಿಸಿದ್ದಾರೊ, ಎತ್ತ ಮುಂದಿನ ಪಾಠವೊ ಎಂಬ ಆತಂಕ ತಲೆದೋರುವುದು. ಅಧ್ಯಾಯಗಳನ್ನು ಪೋಣಿಸುವ ದಾರಕ್ಕೆ ಕತ್ತರಿ ಬಿದ್ದಿರುತ್ತದೆ. ಸಾಲದ್ದಕ್ಕೆ ಬೋಧಿಸಿದ ವಿಷಯಗಳ ಕುರಿತ ಚರ್ಚೆಗಳಲ್ಲಿ ಭಾಗಿಯಾಗಲಿಲ್ಲವಲ್ಲ ಎಂಬ ಕೊರಗು. ಅಧ್ಯಾಪಕರ ಬೋಧನೆಗಳನ್ನು ಮತ್ತೆ ಪಡೆಯಲಾಗದು.

ಎಂದೋ ‘ಹುಣ್ಣಿಮೆಗೊಮ್ಮೆ’ ಕಾಣಿಸಿಕೊಳ್ಳುವ ವಿದ್ಯಾರ್ಥಿಗಳೆಂದರೆ ಶಿಕ್ಷಕರಿಗೂ ಅಷ್ಟಕ್ಕಷ್ಟೆ. ಅಪರೂಪಕ್ಕೆ ಹಾಜರಾಗುವ ವಿದ್ಯಾರ್ಥಿಗಳು ಪಾಠದಲ್ಲಿನ ಸಂದೇಹಗಳನ್ನು ಬಗೆಹರಿಸಲು ಕೋರಿದಾಗ ಶಿಕ್ಷಕರಲ್ಲಿ ಏನು ತಾನೆ ಉತ್ಸಾಹವಿದ್ದೀತು? ತರಗತಿಗಳನ್ನು ಉಪೇಕ್ಷಿಸಿದರೆ ಅಂಕ, ಗ್ರೇಡ್‌ಗಳಲ್ಲೂ ಹಿನ್ನಡೆ ಕಟ್ಟಿಟ್ಟಬುತ್ತಿ. ವಿದ್ಯಾರ್ಥಿಗೆ ತನಗೂ ಮತ್ತು ಶಾಲೆಗೂ ಶೈಕ್ಷಣಿಕ ಸಂಪರ್ಕವೇ ಕಡಿದುಹೋದಂತಹ ಅನಾಥಪ್ರಜ್ಞೆ ಆವರಿಸುತ್ತದೆ. ಕೇವಲ ಹಾಜರಾತಿಗಾಗಿ ತರಗತಿಗೆ ಬರುವವರೂ ಉಂಟು! ಅಂತಹವರು ಬೇಸರಕ್ಕೆ ಪರಿಹಾರ ಕಂಡುಕೊಳ್ಳುವುದು ನಿದ್ರೆ, ಪಿಸುಮಾತು, ಚುಕ್ಕಿ ಆಟ, ಮೊಬೈಲಿನಲ್ಲಿ... ಪರಿಣಾಮ ಇತರರ ಏಕಾಗ್ರತೆಗೂ ಭಂಗ.

ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿಯ ಕೊರತೆ ಜಾಗತಿಕ ಸವಾಲು. ಸತತ 30 ದಿನಗಳಲ್ಲಿ 6ರಿಂದ 7 ದಿನಗಳು ಮಾತ್ರ ತರಗತಿಗೆ ಹಾಜರಾದರೆ ಅದನ್ನು ‘ದೀರ್ಘಕಾಲದ ಗೈರುಹಾಜರಿ’ ಎಂದು ಗುರುತಿಸಲಾಗುತ್ತದೆ. ಕೆಲವು ಮಕ್ಕಳು ಶಾಲೆಯಿಂದ ವಿಮುಖರಾಗಲು ಸಕಾರಣಗಳು ಇದ್ದಿರಬಹುದು. ಕ್ರಮಿಸಬೇಕಾದ ಅಂತರ, ಪೌಷ್ಟಿಕ ಆಹಾರದ ಕೊರತೆ, ಮನೆಯ ವಾತಾವರಣ, ಕನಿಷ್ಠ ಸೌಲಭ್ಯಗಳನ್ನೂ ಒದಗಿಸಲಾಗದ ಪಾಲಕರ ಅಸಹಾಯಕತೆಯು ಅಡೆತಡೆ ಒಡ್ಡುವುದುಂಟು. ವಿದ್ಯಾಲಯದ ಆಡಳಿತ ವರ್ಗವು ವಿದ್ಯಾರ್ಥಿಗಳನ್ನು ಅವರ ಪೋಷಕರ ಸಮೇತ ಆಪ್ತ ಸಮಾಲೋಚನೆಗೆ ಒಳಪಡಿಸಿದರೆ ನ್ಯೂನತೆ ತಕ್ಕಮಟ್ಟಿಗೆ ತಿಳಿಯಾಗುತ್ತದೆ. ಪಠ್ಯಕ್ರಮವನ್ನಲ್ಲದೆ ಮಕ್ಕಳು ಶಾಲೆಯಿಂದ ಆಟೋಟ, ಕಲೆ, ಕೌಶಲ, ಅಭಿನಯ, ಕೃಷಿ, ಅಡುಗೆ, ಕಸೂತಿ, ಸಾಹಸ ಚಟುವಟಿಕೆಯಂತಹ ಪಠ್ಯೇತರ ಚಟುವಟಿಕೆಗಳನ್ನೂ ನಿರೀಕ್ಷಿಸುತ್ತಾರೆ. ಅವು ಶಾಲಾ ಆವರಣದಲ್ಲಿ ಮೆರೆದರೆ ತರಗತಿ ತಾನೇತಾನಾಗಿ ತುಂಬುವುದು.

ಯಾವುದೇ ಒಂದು ತರಗತಿ ಸಾವಯವವಾಗಿರಲು ಗುರು ಮತ್ತು ಶಿಷ್ಯರು ಈ ಅಂಶವನ್ನಂತೂ ಅಲಕ್ಷಿಸುವಂತಿಲ್ಲ. ಅದುವೇ ತರಗತಿಗೆ ಬರುವ ಮುನ್ನ ತಯಾರಿ. ಬೋಧಕರಿಗೆ ಅಂದಿನ ಪಾಠ ಬೋಧಿಸಲು ಹಾಗೂ ಶಿಷ್ಯರಿಗೆ ಗಮನವಹಿಸಿ ಅಂದಿನ ಪಾಠ ಆಲಿಸಲು ಇದು ಅಗತ್ಯ. ಶಿಕ್ಷಕರು ತಮ್ಮಲ್ಲಿನ ಶೈಕ್ಷಣಿಕ ಅನುಭವಗಳ ಭಂಡಾರವನ್ನು ಮಕ್ಕಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಾರೆ. ತರಗತಿ ಒಲ್ಲೆನೆಂದರೆ ಅಂಥ ಅನುಭವ ಬೇರೆಲ್ಲಿ ಲಭ್ಯ? ಪ್ರತಿಭಾಶಾಲಿ ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತು ಆಸಕ್ತಿಯಿಂದ ಪಾಠ ಕೇಳಿ ಗ್ರಹಿಸುವ ರಹಸ್ಯವೆಂದರೆ ಅವರು ತದನಂತರ ಅಭ್ಯಸಿಸುವ ಅಗತ್ಯವಿರದೆಂದು. ಅದೇ ಸಮಯದಲ್ಲಿ ಇನ್ನೊಂದು ಅಧ್ಯಾಯ ಪರಿಚಯಿಸಿಕೊಳ್ಳಬಹುದು ಎಂಬ ಜಾಣತನ ಅವರದೆನ್ನೋಣ. ಪಠ್ಯದಲ್ಲಿನ ಪರಿಕಲ್ಪನೆಗಳನ್ನು ವೈವಿಧ್ಯಮಯವಾಗಿ ತರಗತಿಯ ಬೋಧನೆಗಳು ಬಿಂಬಿಸಬಲ್ಲವು. ಆ ಮೂಲಕ ಹೊಸ ಚರ್ಚೆ, ವಿಸ್ತೃತ ಚಿಂತನೆಗಳಿಗೆ ಆಸ್ಪದವಾಗುತ್ತದೆ.



ಯಾವುದೇ ಪಠ್ಯವು ಸಂಪನ್ಮೂಲ ವ್ಯಕ್ತಿಗಿಂತ ಸಮರ್ಥವಾಗಿ ವ್ಯಾಖ್ಯಾನಿಸದು. ನುರಿತ ಮತ್ತು ಅರಿತ ಶಿಕ್ಷಕರು ಮಾತ್ರ ಸಮಕಾಲೀನ ಪೂರಕ ಸಂಗತಿಗಳನ್ನು ಪಠ್ಯದ ಅಂಶಗಳ ಜೊತೆಗೆ ವಿವರಿಸಬಲ್ಲರು. ತರಗತಿಗೆ ಹಾಜರಾಗಿ ಸ್ಫುಟವಾದ ನೋಟ್ಸ್ ತಯಾರಿಸಿಕೊಂಡರೆ ಅದು ಪರೀಕ್ಷೆಗೆ ಮುಖ್ಯ ಸಿದ್ಧತೆಗಳಲ್ಲೊಂದು. ಅಂದ ಹಾಗೆ ವಿದ್ಯಾರ್ಥಿಗಳದ್ದೇ ನೋಟ್ಸ್ ಸಹಪಾಠಿಯ ನೋಟ್ಸ್‌ಗಿಂತ ಹೆಚ್ಚು ಪ್ರಯೋಜನಕಾರಿ.

ತರಗತಿಗೆ ವೇಳಾಪಟ್ಟಿಯಂತೆ ತಪ್ಪದೇ ಹಾಜರಾಗುವುದು ಕ್ರೀಡೆ ಅಥವಾ ಸಂಗೀತದ ಅಭ್ಯಾಸದಂತೆ. ಅದು ಬದ್ಧತೆ ಮತ್ತು ಶಿಸ್ತಿನ ಪ್ರತಿರೂಪ. ತರಗತಿಗೆ ತಡವಾಗಿ ಬರುವುದೂ ಗೈರುಹಾಜರಿಯ ಒಂದು ರೂಪ. ಬಹುಮಟ್ಟಿಗೆ ನಿಯತವಾಗಿ ತರಗತಿಗೆ ಹಾಜರಾಗದ ಪರಿಣಾಮವೇ ಪರೀಕ್ಷೆಗಳಲ್ಲಿ ಅಕ್ರಮವೆಸಗಲು ಪ್ರೇರಣೆ. ವಿದ್ಯಾಲಯಕ್ಕೆ ಬಂದೂ ತರಗತಿಗಳಿಗೆ ಬಾರದಿರುವ ಪ್ರವೃತ್ತಿಯೂ ಇದೆ. ಪರೀಕ್ಷೆಗಳು ಸಮೀಪಿಸುತ್ತಿರುವಾಗ ತರಗತಿಗಳಿಗೆ ಹಾಜರಾದರೆ ಪಾಠದ ಹಿಂದು, ಮುಂದು ತಿಳಿಯದೆ ತಳಮಳ, ತಬ್ಬಿಬ್ಬು. ಇದರಿಂದಾಗಿ ತರಗತಿ ಹಾಗೂ ಪರೀಕ್ಷೆ ಎರಡೂ ವಿಫಲ.

ಪಾಠ ಒಮ್ಮೆಗೇ ಅರ್ಥವಾಗದಿರಬಹುದು. ಆದರೆ, ಒಂದೂ ತರಗತಿಯನ್ನು ಬಿಡದೆ ನಿಯಮಿತವಾಗಿ ಹಾಜರಾದರೆ ಮಂದಗತಿಯಲ್ಲಾದರೂ ಗ್ರಹಿಕೆ ನಿಶ್ಚಿತ. ಬೋಧನೆಯ ತನ್ಮಯ ಆಲಿಕೆಯಿಂದ ಯಶಸ್ಸು ಸಾಧ್ಯವಷ್ಟೆ ಅಲ್ಲ, ಸಂಭಾವ್ಯವೆಂಬ ನಂಬಿಕೆ ಬಲಗೊಳ್ಳುತ್ತದೆ. ಶೈಕ್ಷಣಿಕ ಸಾಫಲ್ಯದ ದೃಷ್ಟಿಯಲ್ಲಿ ತರಗತಿಯನ್ನು ಎದೆಹಾಲಿಗೆ ಹೋಲಿಸಬಹುದು.

ವಾಚಕರ ವಾಣಿ

ಭವಿಷ್ಯ ಅಂಧಕಾರ

‘ಜಯ ಜಿಂದಾಲು, ಜನ ಕಂಗಾಲು’ ಶೀರ್ಷಿಕೆಯ ರವೀಂದ್ರ ಭಟ್ಟ ಅವರ ಲೇಖನ (ಪ್ರ.ವಾ., ಆ. 30) ಸಕಾಲಿಕ. ಆದರೆ ಇಂದಿನ ರಾಜಕಾರಣಿಗಳು ಯಾವುದಕ್ಕೂ ಹೇಸುವುದಿಲ್ಲ. ವೋಟು ಕೊಡುವ ನಾವು ಒಳ್ಳೆಯವರಾಗದಿದ್ದರೆ, ವಿವೇಕಿಗಳಾಗದಿದ್ದರೆ ಇದೇ ಗತಿ. ಮುಂದಿನ ಪೀಳಿಗೆಯ ಭವಿಷ್ಯ ಅಂಧಕಾರ.

ಗೋಪಾಲರಾವ್, ಬೆಂಗಳೂರು

ಚಿತ್ರಮಂದಿರ: ದರ ದುಬಾರಿ

ಚಿಕ್ಕಮಗಳೂರು ಜಿಲ್ಲೆಯ ಕಡೂರಿನಂತಹ ಚಿಕ್ಕ ಊರಿನಲ್ಲಿ ಚಿತ್ರಮಂದಿರದ ಟಿಕೆಟ್ ದರ ನೂರು ರೂಪಾಯಿ. ಇಂತಹ ಊರುಗಳಲ್ಲಿ ನೂರು ರೂಪಾಯಿ ಕೊಟ್ಟು ಸಿನಿಮಾ ನೋಡಲು ಥಿಯೇಟರಿಗೆ ಬನ್ನಿ ಎಂದರೆ ಯಾರು ತಾನೆ ಬರುತ್ತಾರೆ? ಟಿಕೆಟ್ ದರ ಜನಸಾಮಾನ್ಯರ ಕೈಗೆ ಎಟಕುವಂತಿದ್ದರೆ ಖಂಡಿತವಾಯಿತೂ ಅವರು ಚಿತ್ರಮಂದಿರಕ್ಕೆ ಬರುತ್ತಾರೆ. ಸಂಬಂಧಪಟ್ಟವರು ಈ ದಿಸೆಯಲ್ಲಿ ಯೋಚಿಸಲಿ.

ಎಸ್.ಎನ್. ಕೃಷ್ಣಮೂರ್ತಿ, ಕಡೂರು

ಸಾಧಕರ ಮಿಂಚು!

ಪ್ಯಾರಾಲಿಂಪಿಕ್ಸ್‌ನಲ್ಲಿ
ಭಾರತದ ಪ್ರತಿಭೆಗಳ ಸಾಧನೆ
ಸಾಬೀತು
ಪದಕಗಳು ಮೇಲಿಂದ ಮೇಲೆ
ಹೆಚ್ಚಾಯ್ತು!
ಚಿನ್ನ ಬೆಳ್ಳಿ ಕಂಚು...
ಎಲ್ಲದರಲ್ಲೂ ಭಾರತೀಯರು
ಮಿಂಚು ಮಿಂಚು!

ಹರಳಹಳ್ಳಿ ಪುಟ್ಟರಾಜು
ಪಾಂಡವಪುರ

ತಪ್ಪನ್ನು ಪ್ರಶ್ನಿಸುವ ಕೆಚ್ಚು ಬೇಕಿದೆ

ರಾಜ್ಯದಲ್ಲಿ ಪ್ರಭಾವಿ ರಾಜಕಾರಣಿಗಳು ಭ್ರಷ್ಟಾಚಾರದ ವಿಚಾರದಲ್ಲಿ ಪರಸ್ಪರ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಇಲ್ಲಿ ಯಾವ ಪಕ್ಷದ ನೇತಾರನೂ ಸಾಚಾ ಅಲ್ಲ. ರಾಜಕಾರಣಿಗಳ ಭ್ರಷ್ಟಾಚಾರದ ಬಗ್ಗೆ ಜನ ಧ್ವನಿ ಎತ್ತಿದ್ದರೆ, ಚಳವಳಿ, ಆಂದೋಲನ ಮಾಡಿದ್ದರೆ ಈ ವಿಚಾರದಲ್ಲಿ ಅವರು ಕೊಂಚಮಟ್ಟಿಗಾದರೂ ಭಯಪಡುತ್ತಿದ್ದರು. ಜಾತಿ ಮೋಹದಲ್ಲಿ ಸಿಲುಕಿರುವ ಮತದಾರರು ರಾಜಕಾರಣಿಗಳ ತಪ್ಪನ್ನು ಪ್ರಶ್ನಿಸುವ ಬದಲು ಭ್ರಷ್ಟರ ಬೆಂಬಲಕ್ಕೆ ನಿಲ್ಲುತ್ತಿದ್ದಾರೆ. ಭ್ರಷ್ಟಾಚಾರ ಭೂತಾಕಾರ ತಳೆಯಲು ಇದೂ ಒಂದು ಪ್ರಧಾನ ಕಾರಣ.

ಟಿ. ಶಿವಮೂರ್ತಿ ಉಪ್ಪಾರ, ಕೆಸ್ತೂರು, ಯಳಂದೂರು

ಮಕ್ಕಳ ಪ್ರತಿಭೆ ಹೊರಹೊಮ್ಮಲು ವೇದಿಕೆ ಆಗಬೇಕು

ಕೆಲವು ವರ್ಷಗಳ ಹಿಂದೆ, ಗಣೇಶೋತ್ಸವದ ಸಂದರ್ಭದಲ್ಲಿ ಮಕ್ಕಳಿಗಾಗಿ ವಿವಿಧ ಕ್ರೀಡೆ, ಕಾವ್ಯ ಗಾಯನ ಮತ್ತು ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತಿತ್ತು. ಸ್ಪರ್ಧೆಗಳಲ್ಲಿ ಭಾಗವಹಿಸಿ ಗೆಲುವು ಸಾಧಿಸಿದ ಮಕ್ಕಳಿಗೆ ಮತ್ತು ಯುವಕ-ಯುವತಿಯರಿಗೆ ಪ್ರೋತ್ಸಾಹ ರೂಪದಲ್ಲಿ ಬಹುಮಾನ ನೀಡಲಾಗುತ್ತಿತ್ತು. ಈ ಸಂದರ್ಭದಲ್ಲಿ ಕಬಡ್ಡಿ ಮತ್ತು ಕುಸ್ತಿ ಸ್ಪರ್ಧೆಗಳು ತಪ್ಪದೇ ನಡೆಯುತ್ತಿದ್ದವು. ಆದರೆ ಈಗ ರಸಮಂಜರಿ ಕಾರ್ಯಕ್ರಮಗಳನ್ನು ಮಾತ್ರ ಆಯೋಜಿಸಲಾಗುತ್ತಿದೆ. ಮಕ್ಕಳು ಮತ್ತು ಯುವಕರಲ್ಲಿನ ಪ್ರತಿಭಾ ಪ್ರದರ್ಶನಕ್ಕೆ ಇದರಿಂದ ಯಾವ ಪ್ರಯೋಜನವೂ ಸಿಗುತ್ತಿಲ್ಲ. ಗ್ರಾಮೀಣ ಕ್ರೀಡೆಗಳಿಗೆ ಮತ್ತು ಬೇರೆ ಬೇರೆ ಬಗೆಯ ಪ್ರತಿಭೆ ಹೊರಹೊಮ್ಮಲು ಈ ಉತ್ಸವವು ವೇದಿಕೆ ಆಗಲಿ.

ಬಸಪ್ಪ ಯ. ಬಂಗಾರಿ, ಬೆಂಗಳೂರು

ಆಹಾರ ಉತ್ಪನ್ನ: ಜನಸಾಮಾನ್ಯರಿಗೆ ಸಿಗಲಿ

ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆ (ಸಿಎಫ್‌ಟಿಆರ್‌ಐ) ನಿರಂತರವಾಗಿ ಒಂದಿಲ್ಲೊಂದು ಹೊಸ ಆಹಾರ ಉತ್ಪನ್ನವನ್ನು ಸಂಶೋಧಿಸಿ, ಬಿಡುಗಡೆ ಮಾಡುತ್ತಿದೆ. ಅಚ್ಚರಿಯೆಂದರೆ ಈ ಉತ್ಪನ್ನಗಳು ಎಲ್ಲಿ ಸಿಗುತ್ತವೆ, ಯಾರಿಗೆ ಮಾರಾಟವಾಗುತ್ತವೆ ಎನ್ನುವುದು ಜನಸಾಮಾನ್ಯರಿಗೆ ತಿಳಿಯುವುದೇ ಇಲ್ಲ. ಮಾರುಕಟ್ಟೆ ಮಾಡದೇ ಇದ್ದರೆ, ಈ ಉತ್ಪನ್ನಗಳು ಕೇವಲ ಸಂಶೋಧನಾ ಹಂತಕ್ಕೆ ಸೀಮಿತವಾಗುತ್ತವೆ. ಅಲ್ಲದೇ, ಇಲ್ಲಿ ಸಂಶೋಧಿತವಾಗುವ ಉತ್ಪನ್ನಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಅಥವಾ ದೊಡ್ಡ ದೊಡ್ಡ ವ್ಯಾಪಾರಿ ಸಂಸ್ಥೆಗಳಿಗೇ ನೀಡುವಂತಾದರೆ ಅದರಿಂದ ಜನಸಾಮಾನ್ಯರಿಗೆ ಅಷ್ಟೇನೂ ಪ್ರಯೋಜನವಾಗದು. ನಮ್ಮ ದೇಶದಲ್ಲಿ ಅಪೌಷ್ಟಿಕತೆ ಎನ್ನುವುದು ಬಹುದೊಡ್ಡ ಸಮಸ್ಯೆಯಾಗಿದೆ. ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳುಳ್ಳ ಆಹಾರೋತ್ಪನ್ನಗಳನ್ನು ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಗಳಲ್ಲಿ ನೀಡುವುದರತ್ತಲೂ ಗಮನಹರಿಸಿದಲ್ಲಿ ಸಂಸ್ಥೆಯ ಶ್ರಮ ಸಾರ್ಥಕವಾಗುತ್ತದೆ. ಸದೃಢ– ಸ್ವಸ್ಥ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಿದಂತಾಗುತ್ತದೆ.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಕೇಂದ್ರವು ಒಂದೇ ತಕ್ಕಡಿಯಲ್ಲಿ ತೂಗಲಿ

ಕೇಂದ್ರ ಸರ್ಕಾರವು ಗೋವಾ– ತಮ್ನಾರ್ ವಿದ್ಯುತ್ ಮಾರ್ಗದ ಯೋಜನೆಗೆ ತೋರಿಸಿದ ಆಸಕ್ತಿಯನ್ನು ಕರ್ನಾಟಕದ ಮಹದಾಯಿ ಯೋಜನೆಗೂ ತೋರಿಸಲಿ. ಈ ಎರಡೂ ಯೋಜನೆಗಳು ಮಾನವನ ಜೀವನಕ್ಕೆ ಅತ್ಯುಪಯುಕ್ತವಾದ ವಿದ್ಯುತ್ ಮತ್ತು ಕುಡಿಯುವ ನೀರು ಪೂರೈಸುವ ಯೋಜನೆಗಳಾಗಿವೆ. ಇಂತಹ ಯೋಜನೆಗಳನ್ನು ಕೇಂದ್ರ ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳು ಒಂದೇ ತಕ್ಕಡಿಯಲ್ಲಿ ತೂಗಿ, ಅವುಗಳಿಗೆ ಅನುಮತಿ ಮತ್ತು ಅನುದಾನ ಒದಗಿಸಬೇಕು.

ಅರಣ್ಯ ಮತ್ತು ಪರಿಸರದ ನೆಪದಲ್ಲಿ ಮಹದಾಯಿ ಯೋಜನೆಗೆ ಅಡ್ಡಗಾಲು ಹಾಕುತ್ತಿರುವ ಗೋವಾ ಸರ್ಕಾರದ ನಡೆಯನ್ನು ಕೇಂದ್ರ ಸರ್ಕಾರ ಒಮ್ಮೆ ಬರಿಗಣ್ಣಿನಿಂದ ನೋಡಲಿ. ಗೋವಾದ ವಿದ್ಯುತ್ ಯೋಜನೆಗೆ ಸಹಕಾರ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಪ್ರಧಾನಿಯವರು ಗೋವಾ ಸರ್ಕಾರಕ್ಕೂ ಇದೇ ರೀತಿ ಪತ್ರ ಬರೆದು ಕರ್ನಾಟಕದ ಮಹದಾಯಿ ಯೋಜನೆಗೆ ಸಹಕರಿಸುವಂತೆ ಸೂಚಿಸಲಿ.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಳ್ಳಾರಿಯಲ್ಲಿ ಜಿಂದಾಲ್ ಕಂಪನಿಗೆ 3,667 ಎಕರೆ ಜಮೀನು ಮಾರಾಟ ನಿರ್ಧಾರ ಸರಿಯೇ?

ರಾಜ್ಯದ ಜನರಿಗೆ ಸರ್ಕಾರ ಮಾಡಿದ ಮಹಾದ್ರೋಹ



ಬಡವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ, ಮಹಿಳೆಯರಿಗೆ ಅನ್ಯಾಯ ಮಾಡಿ, ಅವರ ಸಂಪತ್ತನ್ನು ಅಂಬಾನಿ, ಅದಾನಿಗೆ ಸುರಿದ ನರೇಂದ್ರ ಮೋದಿ ಅವರು 'ಚಾರ್ ಸೌ ಪಾರ್' ಮುಟ್ಟದಂತೆ ಜನ ಬುದ್ಧಿ ಕಲಿಸಿದರು. ಅದು ಸಿದ್ದರಾಮಯ್ಯ ಅವರಿಗೆ ಪಾಠವಾಗಬೇಕು. ಜಿಂದಾಲ್‌ಗೆ ಜಮೀನು ಮಾರಾಟ ಮಾಡುವಂಥ ಘೋರ ಅನ್ಯಾಯವನ್ನು ಕರ್ನಾಟಕದ ಜನ ಯಾವ ಕಾರಣಕ್ಕೂ ಸಹಿಸುವುದಿಲ್ಲ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು

• ಎಸ್.ಆರ್.ಹಿರೇಮಠ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಬಳ್ಳಾರಿಯಲ್ಲಿ ಜಿಂದಾಲ್ ಕಂಪನಿಗೆ 3,667 ಎಕರೆ ಜಮೀನನ್ನು ಕ್ರಯ ಪತ್ರ ಮಾಡಿಕೊಡಲು ಹೊರಟಿದೆ. ಸಂವಿಧಾನದ ಮೇಲೆ ಶಪಥ ಮಾಡಿ ಅಧಿಕಾರಕ್ಕೆ ಏರಿದವರಿಗೆ, ಸಾರ್ವಜನಿಕ ವಿಚಾರಗಳ ಬಗ್ಗೆ ಪ್ರಾಮಾಣಿಕ ಕಳಕಳಿ ಇರಬೇಕು. ಸಂಪುಟದಲ್ಲಿ ಎಲ್ಲರ ಅಭಿಪ್ರಾಯ ಪಡೆದು ನಿರ್ಧಾರ ಮಾಡಬೇಕು. ತಾವು ಸರಿಯಾದುದನ್ನೇ ಮಾಡುತ್ತಿದ್ದೇವೆ ಎನ್ನುವುದನ್ನು ಜನರಿಗೆ ಮನದಟ್ಟು ಮಾಡಿಸಬೇಕು. ಈ ವಿಚಾರದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಈ ಸರ್ಕಾರದಲ್ಲಿ ಕಾನೂನು ಸಚಿವರಾಗಿರುವ ಎಚ್.ಕೆ. ಪಾಟೀಲ ಅವರು ಜಿಂದಾಲ್‌ಗೆ ಭೂಮಿ ಮಾರಾಟ ಮಾಡುವ ಬಗ್ಗೆ ಗಂಭೀರ ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಪಾಟೀಲರು ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೂ ಇದನ್ನು ವಿರೋಧಿಸಿದ್ದರು. ಬಿಜೆಪಿ ಸರ್ಕಾರ ಇದ್ದಾಗ ಅವರದ್ದೇ ಪಕ್ಷದ ಅರವಿಂದ ಬೆಲ್ಲದ ಜಿಂದಾಲ್‌ಗೆ ಭೂಮಿ ಕ್ರಯ ಮಾಡಿಕೊಡುವ ಪ್ರಸ್ತಾವ ವಿರೋಧಿಸಿದ್ದರು. ವಿಪರ್ಯಾಸ ಅಂದರೆ, ವಿಪಕ್ಷದಲ್ಲಿದ್ದಾಗ ವಿರೋಧ ಮಾಡಿದ್ದವರೇ ಅಧಿಕಾರಕ್ಕೆ ಬಂದಾಗ ನಿರ್ಣಯದ ಪರ ಕೆಲಸ ಮಾಡುತ್ತಾರೆ. ಇದು ಅಪ್ರಾಮಾಣಿಕ ರಾಜಕಾರಣಿಗಳು ಮಾಡುವ ಕೆಲಸವೇ ವಿನಾ ಒಬ್ಬ ಮುತ್ಸದ್ದಿ ಮಾಡುವಂತಹದ್ದಲ್ಲ.

ಜಿಂದಾಲ್‌ನವರು ಸರ್ಕಾರದ ಹಣವನ್ನು ನೇರವಾಗಿ ದೊಡ್ಡ ಪ್ರಮಾಣದಲ್ಲಿ ಸುಲಿಗೆ ಮಾಡಿದ್ದಾರೆ. ಲೋಕಾಯುಕ್ತರಾಗಿದ್ದ ಸಂತೋಷ್ ಹೆಗ್ಡೆ, ಅಕ್ರಮ ಗಣಿಗಾರಿಕೆ ಬಗ್ಗೆ ಎರಡು ಉತ್ಕೃಷ್ಟ ವರದಿಗಳನ್ನು ಕೊಟ್ಟಿದ್ದಾರೆ. 2008ರಲ್ಲಿ ನೀಡಿದ ಮೊದಲ ವರದಿಯಲ್ಲಿ ಜಿಂದಾಲ್‌ನವರು ಮಾಡಿದ ಅನ್ಯಾಯದ ಬಗ್ಗೆ ಪೂರ್ಣ ವಿವರಗಳಿವೆ. ಸರ್ಕಾರಿ ಸ್ವಾಮ್ಯದ ಮೈಸೂರು ಮಿನರಲ್ಸ್ ಲಿಮಿಟೆಡ್ ಮತ್ತು ಜಿಂದಾಲ್‌ನವರು ಹಿಂದೆ ಜಂಟಿ ಕಂಪನಿ ಮೂಲಕ ವ್ಯವಹಾರ ಮಾಡಿದ್ದರು. ಆಗ ಜಿಂದಾಲ್‌ನವರು ಮೈಸೂರು ಮಿನರಲ್ಸ್ ಲಿಮಿಟೆಡ್‌ಗೆ ಅದಿರಿನ ಹಣವನ್ನೇ ಪಾವತಿಸಿರಲಿಲ್ಲ. ಈ ಬಗ್ಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯೂ ಉತ್ತಮ ವರದಿ ಕೊಟ್ಟಿದೆ. ಇಷ್ಟೆಲ್ಲ ಆದರೂ, ಇದುವರೆಗೂ ಯಾವ ಸರ್ಕಾರವೂ ಹಣ ವಸೂಲಿ ಮಾಡಿಲ್ಲ.

ಅಕ್ರಮ ಗಣಿಗಾರಿಕೆ ವಿರೋಧಿಸಿ ಸಿದ್ದರಾಮಯ್ಯ ಬಳ್ಳಾರಿಗೆ ಪಾದಯಾತ್ರೆ ಮಾಡಿದ್ದರು. ಎಲ್ಲ ರೀತಿಯ ಅಕ್ರಮ ಗಣಿಗಾರಿಕೆಗಳ ಬಗೆಗೂ ಕ್ರಮ ಜರುಗಿಸುವುದಾಗಿ ಆಗ ಸಿದ್ದರಾಮಯ್ಯ ಭರವಸೆ ನೀಡಿದ್ದರು. ಅವರು ಮೊದಲ ಬಾರಿಗೆ ಮುಖ್ಯಮಂತ್ರಿ ಆದಾಗ ನಾವು ಒಂದಷ್ಟು ಮಂದಿ ಅವರನ್ನು ಭೇಟಿ ಮಾಡಿ, 'ನಿಮ್ಮ ಸರ್ಕಾರಕ್ಕೆ ಕನಿಷ್ಠ ಅಂದರೂ ₹1 ಲಕ್ಷ ಕೋಟಿ ಗಣಿಗಾರಿಕೆಯಿಂದ ಬರುತ್ತದೆ. ಅಕ್ರಮ ಗಣಿಗಾರಿಕೆ ಕುರಿತ ಸಂತೋಷ್ ಹೆಗ್ಡೆ ಅವರ ಎರಡೂ ವರದಿಗಳನ್ನು ಜಾರಿ ಮಾಡಿ' ಎಂದು ಒತ್ತಾಯಿಸಿದ್ದೆವು. ಆದರೆ, ಇದುವರೆಗೂ ಅವರು ಕ್ರಮ ಜರುಗಿಸಿಲ್ಲ.

ಪಾದಯಾತ್ರೆ ಮಾಡಿ ಅಧಿಕಾರಕ್ಕೆ ಬಂದ ಇವರು ತಾವು ಹೇಳಿದಂತೆ ನಡೆದುಕೊಳ್ಳಲಿಲ್ಲ.

ಸರ್ಕಾರ ಜಿಂದಾಲ್‌ಗೆ ಕೊಡಲು ಹೊರಟಿರುವ ಜಮೀನಿನ ಮಾರುಕಟ್ಟೆ ಬೆಲೆ ಕೋಟಿಗಟ್ಟಲೆ ಇದೆ. 3,667 ಎಕರೆಯನ್ನು ಜಿಂದಾಲ್‌ಗೆ ಕ್ರಯ ಮಾಡಿಕೊಡಲು ಹೊರಟಿರುವುದು ಸಿದ್ದರಾಮಯ್ಯ ಸರ್ಕಾರವು ಕರ್ನಾಟಕದ ಜನರಿಗೆ ಮಾಡುತ್ತಿರುವ ಮಹಾದ್ರೋಹದ ಕೆಲಸ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಜನರು ಮಾಡಬೇಕು. ಅಂಬೇಡ್ಕರ್ ನೀಡಿದ ಸಂವಿಧಾನದ ಮೂಲಕ ಜನ ಆಳುವವರಿಗೆ ಅವರ ಜವಾಬ್ದಾರಿಯನ್ನು ನೆನಪಿಸಬೇಕಿದೆ. ಬಡವರು, ಎಸ್‌ಸಿ, ಎಸ್‌ಟಿ, ಮಹಿಳೆಯರಿಗೆ ಅನ್ಯಾಯ ಮಾಡಿ, ಅವರ ಸಂಪತ್ತನ್ನು ಅಂಬಾನಿ, ಅದಾನಿಗೆ ಸುರಿದ ನರೇಂದ್ರ ಮೋದಿ ಅವರು 'ಚಾರ್ ಸೌ ಪಾರ್' ಮುಟ್ಟದಂತೆ ಜನ ಬುದ್ಧಿ ಕಲಿಸಿದರು. ಅದು ಸಿದ್ದರಾಮಯ್ಯ ಅವರಿಗೆ ಪಾಠವಾಗಬೇಕು. ಜಿಂದಾಲ್‌ಗೆ ಜಮೀನು ಮಾರಾಟ ಮಾಡುವಂಥ ಅನ್ಯಾಯವನ್ನು ಕರ್ನಾಟಕದ ಜನ ಯಾವ ಕಾರಣಕ್ಕೂ ಸಹಿಸುವುದಿಲ್ಲ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಶಾ ಬಾನೊ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನಿರ್ಣಯವನ್ನು ಬದಲಿಸಿದ ಇತಿಹಾಸ ಕಾಂಗ್ರೆಸ್ ಪಕ್ಷಕ್ಕಿದೆ. ಅಂಥ ಪಕ್ಷದಿಂದ ಮುಖ್ಯಮಂತ್ರಿ ಆದ ಸಿದ್ದರಾಮಯ್ಯನವರು 'ಕೋರ್ಟ್ ಆಜ್ಞೆಗೆ ತಲೆಬಾಗಿ ಜಮೀನು ಕೊಡುತ್ತಿದ್ದೇವೆ' ಎಂದು ಸಮರ್ಥಿಸಿಕೊಳ್ಳುವುದು ಸರಿ ಅಲ್ಲ. ಅವರು ಶಾಸಕಾಂಗ ಮತ್ತು ಕಾರ್ಯಾಂಗದ ಅಧಿಕಾರ ಚಲಾಯಿಸಲಿ. ಅವರ ಸರ್ಕಾರವು ಸಂವಿಧಾನದತ್ತವಾದ ಅಧಿಕಾರ ಚಲಾಯಿಸುವಲ್ಲಿ, ಸಾಮಾಜಿಕ ಜವಾಬ್ದಾರಿ ನಿಭಾಯಿಸುವಲ್ಲಿ ಇದುವರೆಗೆ ದಯನೀಯವಾಗಿ ಸೋತಿದೆ. ಕೋರ್ಟ್ ಹೇಳಿದಂತೆ ಮಾಡುತ್ತೇವೆ ಎಂದರೆ, ಇವರನ್ನು ಜನ ಏಕೆ ಆರಿಸಿ ಕಳಿಸಿದ್ದಾರೆ? ಇವರು ತಮ್ಮ ಮೂಲಭೂತ ಕರ್ತವ್ಯ ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ.

ಜಿಂದಾಲ್ ಕಂಪನಿ ಹಣಕಾಸಿನ ದೃಷ್ಟಿಯಿಂದ ಸಾಕಷ್ಟು ಸದೃಢವಾಗಿದೆ. 'ನಾವು 13 ಪಟ್ಟು ಹೆಚ್ಚು ಬೆಲೆ ಕೊಡುತ್ತಿದ್ದೇವೆ' ಎನ್ನುತ್ತಿದ್ದಾರೆ. ಅವರು ಯಾರಿಗೇನೂ ಉಪಕಾರ ಮಾಡುತ್ತಿಲ್ಲ. ಅಲ್ಲಿ ಅದಿರು ಇದೆ. ಭೂಮಿ ಯಾರ ಮಾಲೀಕತ್ವದಲ್ಲಿದ್ದರೂ ಅದರೊಳಗಿನ ಅದಿರು ಯಾವಾಗಲೂ ಸರ್ಕಾರದ್ದೇ ಆಗಿರುತ್ತದೆ. ಸರ್ಕಾರ ಹಣವಂತರಿಗೆ ಮಣಿಯಬಾರದು. ನಮ್ಮ ಸಂವಿಧಾನದ ಆಶಯವೂ ಅದೇ ಆಗಿದೆ.

ಸಿದ್ದರಾಮಯ್ಯನವರು ಈ ಹಿಂದೆ ಲೋಕಾಯುಕ್ತ ಪೊಲೀಸ್ ಅಧಿಕಾರವನ್ನು ಕಬಳಿಸಿ, ಎಸಿಬಿ ಜಾರಿ ಮಾಡುವ ಮೂಲಕ, ತಮ್ಮ ಮತ್ತು ಮುಖ್ಯ ಕಾರ್ಯದರ್ಶಿ ಕೈಯಲ್ಲಿ ಭ್ರಷ್ಟ ನಿಗ್ರಹದ ಅಧಿಕಾರ ಇಟ್ಟುಕೊಂಡರು. ಹೈಕೋರ್ಟ್ ಲೋಕಾಯುಕ್ತವನ್ನು ಪುನಃ ಸ್ಥಾಪನೆ ಮಾಡಬೇಕಾಯಿತು. ಸಿದ್ದರಾಮಯ್ಯನವರಿಗೆ ನೈತಿಕತೆ, ಸಾರ್ವಜನಿಕ ಜವಾಬ್ದಾರಿ ಇದ್ದರೆ ಅವರು ಜಿಂದಾಲ್‌ಗೆ ಜಮೀನು ಮಾರುವ ವಿಚಾರದಲ್ಲಿ ಜನಪರವಾಗಿ ವರ್ತಿಸಬೇಕು. ಜಿಂದಾಲ್ ಪ್ರಕರಣವು ಸರ್ಕಾರಕ್ಕೆ ಒಂದು ಪರೀಕ್ಷೆ ಆಗಿದೆ.

ಇದೇ ಸಿದ್ದರಾಮಯ್ಯ ಕಳೆದ ಸಲ ಬಳ್ಳಾರಿಗೆ ಹೋದಾಗ ತುಂಗಭದ್ರಾ ಜಲಾಶಯದ ಬಳಿ ಇರುವ ಸರ್ಕಾರದ ಅತಿಥಿ ಗೃಹದಲ್ಲಿರದೆ, ಜಿಂದಾಲ್‌ನವರ ಅತಿಥಿ ಗೃಹದಲ್ಲಿ ತಂಗಿದ್ದರು. ಸಾಂವಿಧಾನಿಕವಾಗಿ ಮಹತ್ವದ ಸ್ಥಾನದಲ್ಲಿರುವ ಸಿಎಂ ಅಲ್ಲಿಗೆ ಹೋಗಬಾರದು ಎಂದು ನಾವು ಆಗ ಪ್ರತಿಭಟನೆ ಮಾಡಿದ್ದೆವು.


ನಾವು ಜೀವ ಪಣಕ್ಕಿಟ್ಟು ಬಳ್ಳಾರಿಯ ಅಕ್ರಮ ಗಣಿಗಾರಿಕೆ ವಿರುದ್ಧ ಹೋರಾಟ ನಡೆಸಿದ್ದೇವೆ. ಈಗ ವಿವಿಧ ಸಂಘಟನೆಗಳ ಜತೆ ಸೇರಿ ಜಿಂದಾಲ್‌ಗೆ ಭೂಮಿ ಮಾರಾಟ ಮಾಡುವುದರ ವಿರುದ್ಧ ಹೋರಾಡುತ್ತೇವೆ. ನಾನು ಈ ಸಂಬಂಧ ಈಗಾಗಲೇ ರೈತ ಸಂಘದವರ ಜತೆ ಮಾತುಕತೆ ನಡೆಸಿದ್ದೇನೆ. ಕುಮಾರಸ್ವಾಮಿ, ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಧರ್ಮಸಿಂಗ್, ಸಿದ್ದರಾಮಯ್ಯ ಎಲ್ಲರೂ ತಪ್ಪು ಮಾಡಿದ್ದಾರೆ. ಇದನ್ನು ಜನ ಕ್ಷಮಿಸಬಾರದು. ತಮ್ಮ ತಪ್ಪನ್ನು ಒಪ್ಪಿಕೊಂಡು ನಿರ್ಧಾರ ವಾಪಸ್ ಪಡೆದರೆ ಮಾತ್ರ ಸಿದ್ದರಾಮಯ್ಯ ಅಧಿಕಾರದಲ್ಲಿ ಮುಂದುವರಿಯಲು ಅರ್ಹರು.

ಲೇಖಕ: ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ
ನಿರೂಪಣೆ: ಬಿ.ವಿ.ಶ್ರೀನಾಥ್

ಕೃಷಿ ಕ್ಷೇತ್ರಕ್ಕಿರುವ ಆದ್ಯತೆ ಕೈಗಾರಿಕೆಗಳಿಗೆ ಏಕೆ ಇಲ್ಲ?



ಒಂದು ಬೃಹತ್ ಉದ್ಯಮ ಸಂಸ್ಥೆಯ ವಿಚಾರದಲ್ಲಿ ಆರೋಪ-ಪ್ರತ್ಯಾರೋಪಗಳ ಸದ್ದು ಜೋರಾಗಿರುವುದು ಒಳ್ಳೆಯ ಸೂಚನೆಯಲ್ಲ. ಈ ವಿಚಾರದಲ್ಲಿ ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳಬೇಕು. ಪಕ್ಷಗಳು ತಾವು ಆಡಳಿತ ನಡೆಸುತ್ತಿದ್ದರೆ ಜಿಂದಾಲ್ ಪರ ಮಾತನಾಡುವುದು ಮತ್ತು ವಿಪಕ್ಷಗಳ ಸಾಲಿನಲ್ಲಿದ್ದಾಗ ವಿರುದ್ಧವಾಗಿ ಮಾತನಾಡುವುದು ತಪ್ಪಬೇಕು. ಇಂತಹ ಪ್ರವೃತ್ತಿಯಿಂದ ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದಷ್ಟೆ



• ಪ್ರಶಾಂತ ಪ್ರಕಾಶ

ಭಾರತವೇ ಆಗಲಿ, ನಮ್ಮ ಕರ್ನಾಟಕವೇ ಆಗಲಿ... ಮೂಲಭೂತವಾಗಿ ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಗಳು ಎನ್ನುವ ಗ್ರಹಿಕೆಯನ್ನು ಸ್ವಾತಂತ್ರ್ಯ ಬಂದಾಗಿನಿಂದಲೂ ಬಿತ್ತಲಾಗಿದೆ. ಸಾರ್ವಜನಿಕ ಬದುಕಿನಲ್ಲಿರುವವರು ತಮಗೆ ಇಷ್ಟವಿದೆಯೋ ಇಲ್ಲವೋ, ಕೃಷಿಯ ಪರವಾಗಿ ರಮ್ಯವಾಗಿ ಮಾತನಾಡಬೇಕು, ರೈತಾಪಿ ವರ್ಗದ ಬಗ್ಗೆ ಸಹಾನುಭೂತಿ ಸೂಚಿಸುತ್ತಲೇ ಇರಬೇಕು ಎನ್ನುವುದು ಸಂಪ್ರದಾಯದಂತಾಗಿದೆ.

ನಾನು ಕೃಷಿ ಕ್ಷೇತ್ರದ ವಿರೋಧಿಯಲ್ಲ. 140 ಕೋಟಿ ಜನರಿರುವ ದೇಶದಲ್ಲಿ ಕೃಷಿಯ ಸ್ವಾವಲಂಬನೆ, ನಮ್ಮ ಆಹಾರ ಭದ್ರತೆ, ರೈತನಿಗೂ ಗರಿಷ್ಠ ಲಾಭ, ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆ, ಅವುಗಳ ರಫ್ತು, ನೀರಾವರಿ, ಕೃಷಿಗೆ ಪೂರಕವಾಗಿ ತೋಟಗಾರಿಕೆ, ಹೈನುಗಾರಿಕೆಗಳ ಬೆಳವಣಿಗೆ ಇವೆಲ್ಲವೂ ಇರಲೇಬೇಕು. ಆದರೆ, ಕೃಷಿಯೊಂದೇ ದೇಶದ ಜನರ ಅಗತ್ಯಗಳನ್ನೆಲ್ಲ ಪೂರೈಸಲಾರದು; ಕೃಷಿಯೊಂದಿಗೆ ಕೈಗಾರಿಕಾ ಬೆಳವಣಿಗೆಗೂ ನಾವು ಒತ್ತು ಕೊಡಬೇಕು.

ನಮ್ಮಲ್ಲಿ ರೈತಾಪಿ ಸಮುದಾಯವನ್ನು ಒಂದು 'ರಾಜಕೀಯ ಶಕ್ತಿ' ಎನ್ನುವಂತೆ ನೋಡಲಾಗುತ್ತಿದೆ. ಈ ಪರಿಕಲ್ಪನೆಯೇ ಸಮಸ್ಯಾತ್ಮಕವಾಗಿದೆ. ಈ ದೃಷ್ಟಿಯಿಂದಾಗಿ ಕೃಷಿಕರಿಗೆ ಇರುವ 'ತೂಕ'ವು ಸಾವಿರಾರು ಕೋಟಿ ಬಂಡವಾಳ ಹೂಡುವ ಮತ್ತು ಉದ್ಯೋಗ ಸೃಷ್ಟಿಸುವ ಕೈಗಾರಿಕೋದ್ಯಮಿಗಳಿಗೆ ಇಲ್ಲ. ಇಡೀ ವ್ಯವಸ್ಥೆಯಲ್ಲಿ ಕೃಷಿ ಮತ್ತು ಕೈಗಾರಿಕೆ ಎರಡೂ ಒಂದು ಗಾಡಿಯ ನೊಗಕ್ಕೆ ಹೆಗಲು ಕೊಟ್ಟಿರುವ ಎರಡು ಎತ್ತುಗಳಿದ್ದಂತೆ ಎಂದು ನಾವು ಕಾಣುವವರೆಗೂ ಈ ಸಮಸ್ಯೆ ಹಾಗೆಯೇ ಇರುತ್ತದೆ.

ಭಾರತದ ಜಿಡಿಪಿ ಬೆಳವಣಿಗೆಗೆ ಕೃಷಿರಂಗದ ಕೊಡುಗೆ ಈಗ ಶೇ 18ರ ಆಸುಪಾಸಿನಲ್ಲಿದೆ. 2021-22ರ ಅಂಕಿ ಅಂಶಗಳ ಪ್ರಕಾರ, ಕೈಗಾರಿಕಾ ರಂಗವು ನಮ್ಮ ಜಿಡಿಪಿಗೆ ವಾರ್ಷಿಕವಾಗಿ ಶೇ 28.3ರಷ್ಟು ಕೊಡುಗೆ ನೀಡುತ್ತಿದೆ. ಜಿಡಿಪಿಗೆ ಶೇ 53.3ರಷ್ಟು ಕೊಡುಗೆ ಸೇವಾವಲಯದಿಂದ ಬರುತ್ತಿದೆ. ಕರ್ನಾಟಕದಲ್ಲಿ ಈ ಕೊಡುಗೆಯು ಕ್ರಮವಾಗಿ ಶೇ 15, ಶೇ 19 ಮತ್ತು ಶೇ 66ರಷ್ಟಿದೆ. ವರ್ಷದಿಂದ ವರ್ಷಕ್ಕೆ ನಮ್ಮ ಜಿಡಿಪಿಗೆ ಕೃಷಿಕ್ಷೇತ್ರದ ಕೊಡುಗೆ ಕಡಿಮೆಯಾಗುತ್ತಿದೆ ಎನ್ನುವುದಂತೂ ವಾಸ್ತವ.

ಇದು ಸ್ಪರ್ಧಾತ್ಮಕ ಯುಗ. ನಾವು ಜಾಗತೀಕರಣಕ್ಕೆ ತೆರೆದುಕೊಂಡು 33 ವರ್ಷಗಳಾದವು. ನಮಗಿಂತ ಮೊದಲೇ, 1978ರಲ್ಲೇ ಆರ್ಥಿಕ ಉದಾರೀಕರಣಕ್ಕೆ ತೆರೆದುಕೊಂಡ ಚೀನಾ ಆರ್ಥಿಕವಾಗಿ ನಮಗಿಂತ ಎಂಟು ಪಟ್ಟು ಮುಂದಿದೆ. ಆದರೆ, ಇತ್ತ ಭಾರತ/ಕರ್ನಾಟಕ ಇನ್ನೂ ರಕ್ಷಣಾತ್ಮಕ ತಂತ್ರವನ್ನೇ ಅನುಸರಿಸುತ್ತಿವೆ. ಇಷ್ಟರ ಮಧ್ಯೆಯೂ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಅವಿಭಜಿತ ಆಂಧ್ರಪ್ರದೇಶ ಮುಂತಾದ ರಾಜ್ಯಗಳು ಗಮನಾರ್ಹವಾಗಿ ಕೈಗಾರಿಕಾ ಬೆಳವಣಿಗೆ ಸಾಧಿಸಿವೆ. ಉತ್ತರ ಭಾರತದ ರಾಜ್ಯಗಳು ಈ ಸತ್ಯವನ್ನು ತಡವಾಗಿ ಅರಿತುಕೊಂಡು, ಈಗ ಮೈ ಕೊಡವಿಕೊಂಡು ಎದ್ದೇಳುತ್ತಿವೆ. ಇವೆಲ್ಲ ಒಂದು ಮಟ್ಟದಲ್ಲಿ ಸಮಾಧಾನದ ಸಂಗತಿಗಳು, ನಿಜ. ಆದರೂ ದೊಡ್ಡದೊಡ್ಡ ನಗರಗಳಾಚೆಗೆ ಬಹಳ ಗಟ್ಟಿಯಾದ ಉದ್ಯಮಗಳನ್ನು ತೆಗೆದುಕೊಂಡು ಹೋಗಿ, ನೆಲೆಯೂರುವಂತೆ ಮಾಡುವುದು ತೃಪ್ತಿಕರವೆನ್ನುವಷ್ಟರ ಮಟ್ಟಿಗೆ ಸಾಧ್ಯವಾಗಿಲ್ಲ.

ಕರ್ನಾಟಕವು ಐಟಿ-ಬಿಟಿ, ಸೆಮಿಕಂಡಕ್ಟರ್, ಎಐ, ಬ್ಲಾಕ್-ಚೈನ್, ಐಒಟಿ, ಸಂಶೋಧನೆ ಮತ್ತು ಅಭಿವೃದ್ಧಿ, ಜಾಗತಿಕ ಉತ್ಕೃಷ್ಟತಾ ಕೇಂದ್ರಗಳು, ಬಂಡವಾಳ ಹೂಡಿಕೆ ಆಕರ್ಷಣೆ, ಇನೊವೇಶನ್, ಉದ್ಯಮಸ್ನೇಹಿ ಕಾರ್ಯಪರಿಸರ, ಸ್ಟಾರ್ಟ್ ಅಪ್... ಇವುಗಳಲ್ಲೆಲ್ಲ ಅಗ್ರಸ್ಥಾನದಲ್ಲೇ ಇದೆ ನಿಜ. ಆದರೆ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ತೆಲಂಗಾಣ ಮುಂತಾದ ರಾಜ್ಯಗಳಿಂದ ತೀವ್ರ ಸ್ಪರ್ಧೆ ಇದೆ. ಈಗ ಉತ್ತರಪ್ರದೇಶದಂತಹ ರಾಜ್ಯ ಕೂಡ ನಮಗೆ ಸ್ಪರ್ಧೆ ಒಡ್ಡುತ್ತಿದೆ. ಇದರ ಮಧ್ಯೆ ಉದ್ಯಮಿಗಳನ್ನು ನಮ್ಮಲ್ಲೇ ಉಳಿಸಿಕೊಳ್ಳಲು, ಸೆಳೆಯಲು ಪ್ರೋತ್ಸಾಹ, ಉತ್ತೇಜನ, ರಿಯಾಯಿತಿ, ಸಬ್ಸಿಡಿ, ವಿನಾಯಿತಿ ಇವುಗಳನ್ನು ಆಕರ್ಷಕವೆನ್ನುವಂತೆ ಕೊಡಲೇಬೇಕಾಗುತ್ತದೆ. ಇಲ್ಲದಿದ್ದರೆ, ಉದ್ಯಮಿಗಳು ಬೇರೆ ರಾಜ್ಯಗಳಿಗೆ ಹೋಗಲು ಶುರು ಮಾಡುತ್ತಾರೆ.

ಉದ್ಯಮ ಸ್ಥಾಪನೆ ಎಂದರೆ ಅದೊಂದು ದೊಡ್ಡ ರಿಸ್ಕ್! ಇದರಲ್ಲಿ ಜೀವನ್ಮರಣದ ಪ್ರಶ್ನೆ ಇರುತ್ತದೆ. ಏಕೆಂದರೆ, ಬಂಡವಾಳ ಕ್ರೋಡೀಕರಣ ಮತ್ತು ಹೂಡಿಕೆ-ಉದ್ಯೋಗ ಸೃಷ್ಟಿ-ಉತ್ಪಾದನೆ-ಮಾರುಕಟ್ಟೆ-ಆರ್ಥಿಕ ವರಮಾನ-ರಫ್ತು-ಸರ್ಕಾರದ ಪ್ರೋತ್ಸಾಹ-ಜಾಗತಿಕ ಏರಿಳಿತಗಳು ಇವೆಲ್ಲವೂ ಒಂದು ಸರಪಣಿ. ಇದರಲ್ಲಿ ಒಂದು ಕೊಂಡಿಯಲ್ಲಿ ಏನಾದರೂ ವ್ಯತ್ಯಾಸವಾದರೂ ಉದ್ಯಮಿ ಮುಳುಗುತ್ತಾನೆ. ನಮ್ಮಲ್ಲಿ ನಗರಪ್ರದೇಶಗಳತ್ತ ಹೆಚ್ಚುತ್ತಿರುವ ನಿರಂತರ ವಲಸೆ, ಜನಸಂಖ್ಯೆಯ ಅಗಾಧತೆ, ಸತತ ನಗರೀಕರಣ, ನಿರುದ್ಯೋಗ ನಿವಾರಣೆಯ ಜರೂರು ಇವನ್ನೆಲ್ಲ ಕಣ್ಣಮುಂದೆ ತಂದುಕೊಂಡರೆ, ಕೈಗಾರಿಕೆಗಳು ಯಾಕೆ ಅಗತ್ಯ ಎನ್ನುವ ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಹೀಗಾಗಿ ನಾವು ನಮ್ಮ ಚಿಂತನೆಗಳಲ್ಲಿ 'ಕಂಫರ್ಟ್ ಝೋನ್'ನಿಂದ ಆಚೆಗೆ ಬರಬೇಕಾದ ತುರ್ತು ಇದೆ.

ರಾಜ್ಯದಲ್ಲಿ ಈಗ ಸರ್ಕಾರ ಜಿಂದಾಲ್ ಕಂಪನಿಗೆ ನಿಯಮಾನುಸಾರವಾಗಿಯೇ 3,667 ಎಕರೆ ಜಮೀನು ಕೊಡಲು ಮುಂದಾಗಿರುವುದು ಅನಗತ್ಯ ಕಾರಣಗಳಿಗಾಗಿ ವಿವಾದದ ಸ್ವರೂಪ ಪಡೆದುಕೊಂಡಿದೆ. ಇದೊಂದು ಬೇಸರದ ವಿದ್ಯಮಾನ. ₹90 ಸಾವಿರ ಕೋಟಿ ಹೂಡಿಕೆ ಮಾಡಿ, 50 ಸಾವಿರ ಉದ್ಯೋಗ ಸೃಷ್ಟಿಸಿರುವ ಒಂದು ಬೃಹತ್ ಉದ್ಯಮ ಸಂಸ್ಥೆಯ ವಿಚಾರದಲ್ಲಿ ಆರೋಪ-ಪ್ರತ್ಯಾರೋಪಗಳ ಸದ್ದು ಜೋರಾಗಿರುವುದು ಒಳ್ಳೆಯ ಸೂಚನೆಯಲ್ಲ. ಈ ವಿಚಾರದಲ್ಲಿ ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳಬೇಕು. ಮುಖ್ಯವಾಗಿ, ರಾಜಕೀಯ ಪಕ್ಷಗಳು ತಾವು ಆಡಳಿತ ನಡೆಸುತ್ತಿದ್ದರೆ ಜಿಂದಾಲ್ ಪರ ಮಾತನಾಡುವುದು ಮತ್ತು ವಿರೋಧ ಪಕ್ಷಗಳ ಸಾಲಿನಲ್ಲಿದ್ದಾಗ ವಿರುದ್ಧವಾಗಿ ಮಾತನಾಡುವುದು ತಪ್ಪಬೇಕು. ಇಂತಹ ಪ್ರವೃತ್ತಿಯಿಂದ ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದಷ್ಟೆ.

ಮುಖ್ಯವಾಗಿ ಹೇಳಬೇಕೆಂದರೆ, ರಾಜ್ಯದ ಬೆಂಗಳೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ದಾವಣಗೆರೆ, ಶಿವಮೊಗ್ಗ, ಬೆಳಗಾವಿ, ಬೆಂಗಳೂರು ಹೊರವಲಯ ಮತ್ತು ಗ್ರಾಮಾಂತರ, ತುಮಕೂರು ಮುಂತಾದ ಕಡೆಗಳಲ್ಲೆಲ್ಲ ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಬೇಕೆಂದರೆ ಎಕರೆಗೆ ಕೋಟಿಗಟ್ಟಲೆ ಹಣ ನೀಡಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಉದ್ಯಮಿಗೆ ಲಾಭದ ಖಾತ್ರಿ ಎಲ್ಲಿದೆ? ಉದ್ಯಮಿಗಳು ಬೀದಿಗೆ ಬಿದ್ದರೆ ಅವನನ್ನೇ ನೆಚ್ಚಿಕೊಂಡಿರುವವರ ಗತಿ ಏನು? ಕಾಲ ಮಿಂಚಿ ಹೋಗುವ ಮೊದಲು, ನಮ್ಮ ಸರ್ಕಾರ ಮತ್ತು ರಾಜಕೀಯ ಪಕ್ಷಗಳು ಕೈಗಾರಿಕೆಗಳು ಮತ್ತು ಉದ್ಯಮಿಗಳ ಬಗ್ಗೆ ವಾಸ್ತವಿಕ ನೆಲೆಗಟ್ಟಿನಲ್ಲಿ ಪುರೋಗಾಮಿಯಾಗಿ ಯೋಚಿಸುವುದನ್ನು ಆರಂಭಿಸಬೇಕು. ಪ್ರತಿಗಾಮಿ ಆಲೋಚನೆಗಳ ಡಂಗುರ ಹೊಡೆಯುತ್ತಿದ್ದ ಕೆಲವು ರಾಜ್ಯಗಳು ಅನುಭವಿಸುತ್ತಿರುವ ದುರವಸ್ಥೆಯಿಂದ ಕರ್ನಾಟಕ ಪಾಠಗಳನ್ನು ಕಲಿಯಬೇಕು. ಇಲ್ಲದೆ ಹೋದರೆ, 'ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಮುಚ್ಚಿದ' ಎನ್ನುವಂತಾಗುತ್ತದಷ್ಟೆ.

ಲೇಖಕ: ಆ್ಯಕ್ಸಲ್ ಇಂಡಿಯಾದ ಸಂಸ್ಥಾಪಕ ಪಾಲುದಾರ

ತೆರೆಯಲ್ಲಿ ಕಾವ್ಯಾತ್ಮಕ ದೃಶ್ಯರೂಪ



ನಾವು ನೋಡಿದ ಸಿನಿಮಾ

ಕೆಲವು ಸಿನಿಮಾಗಳು ಹಾಗೆಯೇ. ಅಲ್ಲೊಂದು ಇಲ್ಲೊಂದು ತಿರುವುಗಳನ್ನು ಕಾಣುತ್ತಾ ನಿಶ್ಶಬ್ದ ನದಿಯಂತೆ ಹರಿಯುತ್ತವೆ. ಹರಿವಿನ ಮೌನವೇ ಹಲವು ದಿನ ಕಾಡುತ್ತದೆ. ಇತ್ತೀಚೆಗೆ ರಾಜ್ ಬಿ.ಶೆಟ್ಟಿ ಅವರ 'ಸ್ವಾತಿ ಮುತ್ತಿನ ಮಳೆ ಹನಿಯೇ' ಸಿನಿಮಾ ಈ ಅನುಭವ ನೀಡಿತ್ತು. ಇದೀಗ ಬಂದಿರುವ ಚಂದ್ರಜಿತ್ ಬೆಳ್ಳಪ್ಪ ನಿರ್ದೇಶನದ 'ಇಬ್ಬನಿ ತಬ್ಬಿದ ಇಳೆಯಲಿ' ಸಿನಿಮಾವೂ ಇದೇ ಧಾಟಿಯಲ್ಲಿದೆ. ಇಲ್ಲಿ ಯಾವುದಕ್ಕೂ ಧಾವಂತವಿಲ್ಲ. ಮೊನಚಾದ ಎಲೆಯ ಮೇಲೆ ಇಬ್ಬನಿ ಬಿದ್ದರಷ್ಟೇ ಅದಕ್ಕೊಂದು ಸೌಂದರ್ಯ. ಸೂರ್ಯನ ರಶ್ಮಿಗೆ ಹೊಳೆಯುವ, ಅದೇ ಶಾಖಕ್ಕೆ ಕರಗುವ ಇಬ್ಬನಿಯ ಕಥೆಯಿದು.

'ಸಿದ್ಧಾರ್ಥ್ ಅಶೋಕ್; ಸಿದ್'(ವಿಹಾನ್) ಖ್ಯಾತ ಉದ್ಯಮಿ ಅಶೋಕ್ ನಾಚಪ್ಪ ಪುತ್ರ. ಕಾಲೇಜಿನಲ್ಲಿದ್ದಾಗ ಕ್ರಿಕೆಟ್ ತಂಡದ ನಾಯಕ. ಕೋಪ ತುಸು ಜಾಸ್ತಿ. ಸದ್ಯ ತನ್ನದೇ ಸ್ವಂತ ಉದ್ಯಮ ಆರಂಭಿಸಲು ಕನಸು ಕಾಣುತ್ತಿರುವಾತ. ಕಾಲೇಜು ಓದುತ್ತಿರುವ 'ರಾಧೆ'(ಮಯೂರಿ ನಟರಾಜ್) ಜೊತೆಗೆ ಸಿದ್ ನಿಶ್ಚಿತಾರ್ಥದ ದೃಶ್ಯಾವಳಿಯೊಂದಿಗೆ ಕಥೆ ತೆರೆದುಕೊಳ್ಳುತ್ತದೆ. ಪ್ರೀತಿ ಇಲ್ಲದೇ ಕೃತಕವಾದ ಮದುವೆಯ ಬಂಧನದೊಳಗೆ ರಾಧೆಯನ್ನು ತರಬಾರದು ಎನ್ನುವ ಕಾರಣಕ್ಕೆ, ಮದುವೆಯ ಮಂಟಪದಲ್ಲೇ ಸಿದ್ ತಾಳಿ ಕಟ್ಟುವ ಮೊದಲು ತನ್ನ ಮನಸ್ಸಿನಲ್ಲಿರುವುದನ್ನು ರಾಧೆಯ ಬಳಿ ಹೇಳಿಕೊಳ್ಳುತ್ತಾನೆ. ಮದುವೆ ಮುರಿದು ಬೀಳುತ್ತದೆ. ರಾಧೆಯ ಕನಸೂ...ಇಲ್ಲಿಂದ ಸಿದ್ ತನ್ನ ಮೊದಲ ಪ್ರೀತಿಯನ್ನು ಹುಡುಕುತ್ತಾ 'ಅನಾಹಿತ'ಳತ್ತ(ಅಂಕಿತಾ ಅಮರ್) ಸಾಗುತ್ತಾನೆ. ಯಾರು ಈ ಅನಾಹಿತ, 'ಸಿದ್' ಎಂಬ ಮೊನಚಾದ ಎಲೆಯ ಮೇಲೆ 'ಅನಾಹಿತ'ಳೆಂಬ ಇಬ್ಬನಿಯ ಪರಿಣಾಮವೇ ಚಿತ್ರದ ಮುಂದಿನ ಕಥೆ.

ಇದು ಚಂದ್ರಜಿತ್ ಬೆಳ್ಳಪ್ಪ ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ಬ್ಲಾಗ್‌ನಲ್ಲಿ ಬರೆದ ಕಥೆಯೊಂದು ಇಲ್ಲಿ ಸಿನಿಮಾ ರೂಪ ಪಡೆದಿದೆ. ಈ ಕಾರಣದಿಂದಲೋ ಏನೋ ಕಾದಂಬರಿಯಂತೆ ಅಧ್ಯಾಯಗಳ ರೂಪದಲ್ಲಿ ಈ ಸಿನಿಮಾವನ್ನು ಅವರು ಕಟ್ಟಿಕೊಟ್ಟಿದ್ದಾರೆ. ಒಟ್ಟು ಆರು ಅಧ್ಯಾಯಗಳಲ್ಲಿ ಕಥೆಯನ್ನು ಪೋಣಿಸಿರುವ ಚಂದ್ರಜಿತ್ ನಾನ್ ಲೀನಿಯರ್ ಮಾದರಿಯಲ್ಲಿ ಅವುಗಳನ್ನು ಪ್ರಸ್ತುತಪಡಿಸಿದ್ದಾರೆ. ಕಾಲೇಜು ದಿನಗಳನ್ನು ಮತ್ತಷ್ಟು ಸೂಕ್ತವಾಗಿ ಹೆಣೆಯಬಹುದಿತ್ತು. ಒಂದೆರಡು ಹಾಸ್ಯದ ಸನ್ನಿವೇಷಗಳಿಗೆ ಇವುಗಳನ್ನು ಸದ್ಬಳಕೆ ಮಾಡಿಕೊಳ್ಳಬಹುದಿತ್ತು. ಇದೊಂದು ಕಾವ್ಯಾತ್ಮಕ ಪ್ರೇಮಕಥೆಯಾದ ಕಾರಣ ಇಲ್ಲಿ ಹಾಡುಗಳಿಗೆ, ಕಾವ್ಯಕ್ಕೆ ಪ್ರಾಶಸ್ತ್ಯ ದೊರಕಿದೆ. 'ಅನಾಹಿತ'ಳಿಗೆ ಜೀವ ತುಂಬುವುದು ಇವುಗಳೇ. 'ಸಿದ್' ಭಾವನೆಗಳು ಬದಲಾಗುತ್ತಿರುವುದು ಅರಿವಿಗೆ ಬರುವುದು ಈ ಕಾವ್ಯಗಳಿಂದಲೇ. ಅವುಗಳು ಕಥೆಯೊಳಗೆ ಸೂಕ್ತವಾಗಿ ಪೋಣಿಸಲ್ಪಟ್ಟಿದೆ. ಚಂದ್ರಜಿತ್ ಅವರ ಒಳಗಿನ ಒಬ್ಬ ತುಂಟ ಪ್ರೇಮಿಯನ್ನೂ, ಪ್ರಬುದ್ಧ ಕವಿಯನ್ನೂ ಇಲ್ಲಿ ಕಾಣಬಹುದು. ಕಥೆಯೊಳಗೊಂದು ಗಾಢ ಅರ್ಥದ ಪ್ರೇಮಕಥೆಯೊಂದನ್ನು ಸರಳವಾಗಿ ಹೆಣೆದಿರುವ ಅವರ ಬರವಣಿಗೆಯ ಸಾಮರ್ಥ್ಯ ಇಲ್ಲಿ ಉಲ್ಲೇಖಾರ್ಹ. ಇದೊಂದು ಸ್ವಚ್ಛವಾದ ಪ್ರೇಮಕಥೆಯ ಬರವಣಿಗೆ. ದೃಶ್ಯಗಳ ಕೊನೆಗೊಳ್ಳುವಿಕೆ ಕೊಂಚ ಸುದೀರ್ಘವೆನಿಸಿದರೂ ಮೌನಕ್ಕೂ ಅರ್ಥಕೊಡುವ ರೀತಿಯಲ್ಲಿದೆ. ಕಣ್ಣುಗಳಲ್ಲೇ ಕಥೆ ಕಟ್ಟಿಕೊಡುವ ಪ್ರಯತ್ನ ಇಲ್ಲಾಗಿದೆ.

'ಅನಾಹಿತ'ಳನ್ನು ಹೆಚ್ಚು ಪರಿಚಯಿಸಲು ಸಾಧ್ಯವಿಲ್ಲ. ಆಕೆಯ ಮಾತುಗಳನ್ನು, ಭಾವನೆಗಳನ್ನು ಪರದೆ ಮೇಲೆಯೇ ಅನುಭವಿಸಬೇಕು. ಈ ಪಾತ್ರದಲ್ಲಿ ಅಂಕಿತಾ ಅಮರ್ ಜೀವಿಸಿದ್ದಾರೆ. ಕ್ಲೈಮ್ಯಾಕ್ಸ್‌ನಲ್ಲಿ ಮಂಜುಗಡ್ಡೆಯಂಥ ಅನಾಹಿತಳ ಕಣ್ಗಳು ಕರಗುವ ದೃಶ್ಯವೊಂದು ಸಾಕು ಅಂಕಿತಾ ನಟನೆಯನ್ನು ವರ್ಣಿಸಲು. ವಿಹಾನ್ ಹೊಸ ರೂಪ ತಾಳಿದ್ದಾರೆ. ಅವರ ನಟನೆಯಲ್ಲಿನ ಪ್ರಬುದ್ಧತೆಯನ್ನು ಈ ಸಿನಿಮಾ ತೋರ್ಪಡಿಸಿದೆ. ಮಯೂರಿ ತಮ್ಮ ಧ್ವನಿ ಹಾಗೂ ನಟನೆಯಿಂದ ಸೆಳೆಯುತ್ತಾರೆ.

ತಾಂತ್ರಿಕವಾಗಿ ಗಗನ್ ಬಡೇರಿಯಾ ಸಂಗೀತ ಚಿತ್ರಕ್ಕೆ ಇಂಬು ನೀಡಿದೆ. ಶ್ರೀವತ್ಸನ್ ಸೆಲ್ವರಾಜನ್ ಅವರ ಛಾಯಾಚಿತ್ರಗ್ರಹಣ, ವಿಎಫ್‌ಎಕ್ಸ್ ತಂಡ ತೆರೆಯ ಮೇಲೆ ಹೊಸ ಲೋಕವನ್ನೇ ಸೃಷ್ಟಿಸಿದೆ. ಕೆಲವೆಡೆ ಡಬ್ಬಿಂಗ್ ಸೂಕ್ತವಾಗಿ ಆಗಿಲ್ಲ. ಪ್ರಸ್ತುತ ಇರುವಂತಹ ಧಾವಂತದ, ಮಾಸ್ ಸಿನಿಮಾಗಳ ಭರಾಟೆ ನಡುವೆ ಇದೊಂದು ಆಸ್ವಾದಿಸುವ ಚಿತ್ರವೆನ್ನಬಹುದು. ಹಲವರಿಗೆ ಇದು ಪ್ರತಿಬಿಂಬದಂತೆ ಕಾಣಬಹುದು, ಪ್ರೀತಿಗೊಂದು ಹೊಸ ಭಾಷ್ಯದಂತೆ ಕಾಣಬಹುದು, ಹಲವು ಪ್ರಶ್ನೆಗಳನ್ನೂ ಹುಟ್ಟುಹಾಕಬಹುದು. ಫೀಲ್ ಗುಡ್ ಚಿತ್ರ ಸರಪಳಿಗೆ ಇದನ್ನು ಸೇರಿಸಬಹುದು.


ಅಭಿಲಾಷ ಪಿ.ಎಸ್.

ಇಬ್ಬನಿ ತಬ್ಬಿದ ಇಳೆಯಲಿ

- **ನಿರ್ಮಾಣ:** ಜಿ.ಎಸ್.ಗುಪ್ತಾ, ರಕ್ಷಿತ್ ಶೆಟ್ಟಿ
- **ನಿರ್ದೇಶನ:** ಚಂದ್ರಜಿತ್ ಬೆಳ್ಳಪ್ಪ
- **ತಾರಾಗಣ:** ವಿಹಾನ್, ಅಂಕಿತಾ ಅಮರ್, ಮಯೂರಿ ನಟರಾಜ್, ಗಿರಿಜಾ ಶೆಟ್ಟರ್ ಮತ್ತಿತರರು

ಪದಬಂಧ 5796

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ನಸುಕಿನಲ್ಲಿ ಬಿದ್ದಿರುವ ಸ್ವಪ್ನ (3)
3.ಭಾವ ಕೊನೆಗಿದ್ದಾಗಲೇ ಈ ಲೋಪ! (3)
5.ಸ್ವಾಗತದಲ್ಲೇ ರುಚಿಯನ್ನು ಹುಡುಕಿ! (2)
6.ಗಮನ ಸೆಳೆದಿರುವ ಪುತ್ರ! (2)
8.ಚಾಂದ್ರಮಾನ ಪಕ್ಷದ ಒಂಬತ್ತನೆಯ ತಿಥಿ (3)
9.ಅಡುಗೆಯವನು ತಿರುಗಿ ನಿಂತಿದ್ದಾನೆ (3)
10.ಉದಾಹರಿಸುವಾಗ ದಾನಶೀಲ ಬಂದಿಹನಲ್ಲಾ! (3)
11.ಸೀತೆಯ ತಂದೆ (3)
12.ತಿರುವು ಮುರುವಾಗಿರುವ ಕಾಲ (3)
14.ತರುವಾಯ ಎಂದು ಹೀಗೆ ಹೇಳಿ (3)
15.ಹೊಸದಾದುದು ತಿರುಗಿಸಿದರೆ ಕಾಡಾದೀತು! (2)
17.ಮುನಿದವನಲ್ಲಿ ಆನಂದವನ್ನು ನೋಡಿ! (2)
18.ವಿಸ್ತಾರವಾದ ಹೇಳಿಕೆ (3)
19.ಇರುಳಿಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ

1.ಕಲಾವಿದನು ತೆರೆದ ಬಾಗಿಲು! (2)
2.ಸುಗಮವಾಗಿ ಕಿತ್ತಿರುವ ಪುಷ್ಪ (2)
3.ಸಡಿಲವಾದುದನ್ನು ಹೀಗೂ ಹೇಳುವರು (3)
4.ಈತ ಕಾಡನ್ನು ರಕ್ಷಿಸುವವನು (5)
5.ಈ ತತ್ವಜ್ಞಾನಿಯ ಜನ್ಮದಿನವನ್ನು ರಾಷ್ಟ್ರೀಯ ಯುವದಿನ ಎಂದು ಆಚರಿಸಲಾಗುತ್ತದೆ (7)
7.ದೊಡ್ಡ ಹಾರೆಯಿದು (3)
10.ಮೂಡುತ್ತಿರುವ ಸೂರ್ಯ (5)
11.ಜನದೊಳಗಿರುವ ಹುಟ್ಟು! (3)
13.ಮರದ ಹತ್ತಿರ ನಡೆದ ಕಾಳಗ (3)
16.ವಠಾರದಲ್ಲಿರುವ ಮದುವೆ ಗಂಡು! (2)
17.ಕೋಪಗೊಂಡಾಗ ತಪಸ್ವಿ ಬಂದನಲ್ಲಾ! (2)

5795ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಿಚಾದಾಪಾ 3.ಅಶ್ವಶಾಲೆ 4.ರುಧಿರ 5.ಅಪರೂಪ 7.ಮಗ್ರಾಸ್ವ 9.ಶವ 10.ಸೇರು 13.ಬಿಸಿಲು 14.ರಸಿಕತೆ 15.ಕೀಚಕ 16.ಗಡಿಪಾರು 17.ತಪಸೀಲು

ಮೇಲಿಂದ ಕೆಳಕ್ಕೆ:
2.ಪಾರುಪತ್ಯ 3.ಅರಮನೆ 6.ಪರಾವಲಂಬಿ 8.ಸ್ವಯಂಸೇವಕ 11.ಹಾಲುಕೀರು 12.ಮರಕತ

ಸುಡೊಕು 6181

		1	4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6180 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಶನಿವಾರ ಸೆಪ್ಟೆಂಬರ್ 7, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಚತುರ್ಥಿ ಗಂ. 17-38 ನಕ್ಷತ್ರ: ಚಿತ್ತಾ ಗಂ. 12-34 ಯೋಗ: ಬ್ರಹ್ಮ ಗಂ. 23-16 ಕರಣ: ವಿಷ್ಟಿ ಗಂ. 17-38, ಸಿಂಹ ಮಾಸದ 21 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 3.

ರಾಹುಕಾಲ : ಬೆಳಿಗ್ಗೆ 09-00 – 10-30

ಸೂರ್ಯೋದಯ : 06-23 **ಸೂರ್ಯಾಸ್ತ :** 06-34

ಮುಸ್ಲಿಂ ದಿನಾಂಕ : 03 ರಬಿಉಲ್ಲಾವಲ್

ದಿನ ವಿಶೇಷ : ಗಣೇಶ ಚತುರ್ಥಿ, ಅದೃಷ್ಟ ಸಂಖ್ಯೆ : 7, 1

ಮೇಷ: ಲೇಖನಗಳಿಂದ ಜನ ಸಂಪರ್ಕ ಅಭಿವೃದ್ಧಿಯಾಗಲಿದೆ. ಮದುವೆಯ ನಿಮಿತ್ತವಾಗಿ ಒಡವೆಗಳ ಖರೀದಿ ಮಾಡುವಿರಿ. ದೂರದ ಪ್ರಯಾಣದ ಮೊದಲು ಅಲ್ಲಿಯ ಸ್ಥಿತಿಗತಿಗಳನ್ನು ಬಲ್ಲವರಿಂದ ವಿಚಾರಿಸುವುದು ಸೂಕ್ತ.

ವೃಷಭ: ಸ್ಪರ್ಧಾತ್ಮಕ ಪರೀಕ್ಷೆಗಾಗಿ ತಯಾರಾಗುತ್ತಿರುವವರು ಯಾವುದೇ ಸಣ್ಣ ವಿಷಯಗಳನ್ನು ಸಹ ನಿರ್ಲಕ್ಷ್ಯ ಮಾಡುವಂತಿಲ್ಲ. ನಿಮ್ಮ ಕಠಿಣ ಪರಿಶ್ರಮದಿಂದಾಗಿ ಬೆಳೆಸಿದ ಸಂಸ್ಥೆ ಜನಮಾನಸವನ್ನು ಗೆಲ್ಲುವುದು. ವಿಶೇಷ ಖಾದ್ಯ ತಿನ್ನುವಿರಿ.

ಮಿಥುನ: ನಿಮ್ಮ ಜೀವನದಲ್ಲಿ ನೀವು ನಿರೀಕ್ಷಿಸಿದ ಫಲಿತಾಂಶದ ಬದಲು ಬಂದಂತಹಾ ಫಲಿತಾಂಶವು ಹೆಚ್ಚಿನ ಸಂತೋಷವನ್ನು ನೀಡುವುದು. ಮನೆಯಲ್ಲಿ ಸಂತೋಷದ ವಾತಾವರಣವು ಇರಲಿದೆ.

ಕರ್ಕಾಟಕ: ನಿಮ್ಮ ವಿಷಯಗಳನ್ನು ಸೋರಿಕೆ ಮಾಡುತ್ತಿರುವವರು ಕುಟುಂಬದವರೇ ಇರಬಹುದು ಎಂಬ ಅನುಮಾನದಿಂದ ಪರೀಕ್ಷಿಸುವಿರಿ. ಕೋರ್ಟಿನ ಮೆಟ್ಟಿಲು ಹತ್ತಿಳಿಯಬೇಕಾಗುವುದು, ಜಯ ನಿಮ್ಮದೆ ಆಗಿರುತ್ತದೆ.

ಸಿಂಹ: ವೃತ್ತಿಯಲ್ಲಿ ಸ್ಥಾನಪಲ್ಲಟ ಬಯಸಿದ ನಿಮಗೆ ಹೊಸ ಕಾರ್ಯಸ್ಥಾನವು ಹಳೆಯದಕ್ಕಿಂತ ಕಳಪೆ ಮಟ್ಟದಲ್ಲಿ ತೋರಬಹುದು. ನಿಮ್ಮ ಕೆಲಸಗಳಲ್ಲಿ ಯಾವುದೇ ವಿಘ್ನಗಳು ಎದುರಾದರು ಸಹ ಅದು ಕ್ಷಣ ಮಾತ್ರದ್ದಾಗಿರುತ್ತದೆ.

ಕನ್ಯಾ: ಅನಿವಾರ್ಯ ಕಾರಣದಿಂದ ಬಹುಮುಖ್ಯವಾದ ಒಂದು ಕೆಲಸವನ್ನು ತಪ್ಪಿಸಿಕೊಳ್ಳಬೇಕಾಗುತ್ತದೆ. ನೀವು ನಡೆಸುತ್ತಿರುವ ಶುಭ ಕಾರ್ಯಕ್ರಮಗಳಿಗೆ ಅಶೌಚದ ಆತಂಕ ಎದುರಾಗುವುದು. ಆರೋಗ್ಯವನ್ನು ನಿರ್ಲಕ್ಷಿಸಬೇಡಿ.

ತುಲಾ: ಮಧ್ಯಮವರ್ಗದ ಕುಟುಂಬದಲ್ಲಿ ಸಂಬಂಧಿಕರ ಎದುರು ಕೆಲವು ಇರಿಸು ಮುರಿಸುಗಳು ಆಗಬಹುದು. ಬೇಸರ ಪಡುವುದು ಬೇಡ. ಮಾತಿಗಿಂತ ಕೃತಿ ಮುಖ್ಯ ಎನ್ನುವ ರೀತಿಯಲ್ಲಿ ನಿಮ್ಮ ಸಾಮರ್ಥ್ಯ ತೋರಿಬರಲಿದೆ.

ವೃಶ್ಚಿಕ: ಉತ್ತಮವಾಗಿ ಅಂಕಗಳನ್ನು ಪಡೆಯುತ್ತಿದ್ದ ಮಕ್ಕಳು ಏಕಾಗ್ರತೆಯನ್ನು ಕಡಿಮೆ ಮಾಡಿದ ಕಾರಣ ನೀವು ಗಮನ ಹರಿಸಬೇಕಾಗುತ್ತದೆ. ನಿಮ್ಮ ವೃತ್ತಿ ಜೀವನವು ಅಭಿವೃದ್ಧಿಯ ಪಥದಲ್ಲಿ ಸಾಗಲು ಬದಲಾವಣೆಗಳು ಬರುವವು.

ಧನು: ಗೃಹ ವಸ್ತುಗಳ ಖರೀದಿ ಮಾಡಿ ಬಂದ ನಂತರ ನೀವು ಕೊಟ್ಟ ಹಣ ದುಬಾರಿಯಾಯಿತೆಂಬ ಪಶ್ಚಾತಾಪವಾಗಬಹುದು. ಸಣ್ಣಪುಟ್ಟ ವಿಷಯಗಳಿಗೆ ತಾಳ್ಮೆ ಕಳೆದುಕೊಂಡು ಸಹೋದರರ ಜೊತೆ ಕಲಹಗಳನ್ನು ಮಾಡುವಿರಿ.

ಮಕರ: ವ್ಯವಹಾರದಲ್ಲಿ ನಿಮಗೆ ಬೇಕಾದ ರೀತಿಯಲ್ಲಿ ಲಾಭ ಮಾಡಿಕೊಳ್ಳಲು ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳುವಿರಿ. ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ನಿಗಾ ಕೊಡುವಂತೆ ಅಧಿಕಾರಿಗಳಿಂದ ಆದೇಶವಾಗುವುದು.

ಕುಂಭ: ಆದಾಯ ಎಲ್ಲರ ಕಣ್ಣಿಗೂ ಅಧಿಕವಾಗಿ ಕಂಡರೂ ಅಧಿಕವಾದ ಖರ್ಚೂ ಸಹ ಇರುವುದರಿಂದ ಯಾವುದೇ ರೀತಿಯ ಉಳಿತಾಯ ಸಾಧ್ಯವಾಗುವುದಿಲ್ಲ. ಕ್ಷುಲ್ಲಕ ಕಾರಣಕ್ಕೆ ಉಂಟಾದ ಮನಸ್ತಾಪಗಳು ಬಗೆಹರಿದು ನೆಮ್ಮದಿ ಕಾಣುವಿರಿ.

ಮೀನ: ಅನುಕೂಲಕರ ವಾತಾವರಣವಿದ್ದಲ್ಲಿ ಇಂದು ನಿಮ್ಮ ವಿಶೇಷ ದಿನಗಳಿಗೆ ಬೇಕಾದ ವಸ್ತು ಖರೀದಿ ಮಾಡಿ. ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿ ಮುಖ್ಯವಾದ ವ್ಯಕ್ತಿಗಳ ಭೇಟಿಗೆ ವಿಘ್ನ ಇರಲಿದೆ.

ಶನಿವಾರ ● ಸೆಪ್ಟೆಂಬರ್ 7, 2024 ಪ್ರಜಾವಾಣಿ

ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರ್ದೇಶನ

ಭದ್ರಾ ಅಭಯಾರಣ್ಯ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೇಂದ್ರ ಸಚಿವರ ನೇತೃತ್ವದಲ್ಲಿ ನಡೆದ ಮಂಡಳಿಯ ಸ್ಥಾಯಿ ಸಮಿತಿಯ 79ನೇ ಸಭೆ
- ಅಭಯಾರಣ್ಯದ ಗಡಿ ಬದಲಾವಣೆ ಬಗ್ಗೆ ವಿಸ್ತೃತ ಚರ್ಚೆ
- ಸಹಮತಕ್ಕೆ ಬಂದ ರಾಜ್ಯ ಸರ್ಕಾರ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ



ನವದೆಹಲಿ: ಭದ್ರಾ ಹುಲಿ ಅಭಯಾರಣ್ಯದ ಮೀಸಲು ಪ್ರದೇಶಕ್ಕೆ ಚೊರ್ಡನಹಳ್ಳಿ ರಾಜ್ಯ ಅರಣ್ಯ ಹಾಗೂ ಕೈತೊಟ್ಲು ಕಿರು ಅರಣ್ಯಗಳನ್ನು ಸೇರಿಸಲು ಕರ್ನಾಟಕ ಸರ್ಕಾರ ಅಗತ್ಯ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ವನ್ಯಜೀವಿ ಮಂಡಳಿ ನಿರ್ದೇಶನ ನೀಡಿದೆ.

ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವ ಭೂಪೇಂದರ್ ಯಾದವ್ ಅಧ್ಯಕ್ಷತೆಯಲ್ಲಿ ನಡೆದ ಮಂಡಳಿಯ ಸ್ಥಾಯಿ ಸಮಿತಿಯ 79ನೇ ಸಭೆಯಲ್ಲಿ ಶೆಟ್ಟಿಹಳ್ಳಿ ವನ್ಯಜೀವಿ ಧಾಮ ಹಾಗೂ ಭದ್ರಾ ಹುಲಿ ಅಭಯಾರಣ್ಯದ ಗಡಿ ಬದಲಾವಣೆ ಬಗ್ಗೆ ವಿಸ್ತೃತ ಚರ್ಚೆ ನಡೆಯಿತು. ಶೆಟ್ಟಿಹಳ್ಳಿ ವನ್ಯಜೀವಿಧಾಮದ ವ್ಯಾಪ್ತಿಯನ್ನು 700 ಚದರ ಕಿ.ಮೀ.ಯಿಂದ 395 ಚದರ ಕಿ.ಮೀ.ಗೆ ಇಳಿಸಲು ರಾಜ್ಯ ಸರ್ಕಾರ ಪ್ರಸ್ತಾವ ಸಲ್ಲಿಸಿದೆ.

ಸಭೆಯಲ್ಲಿ ಕರ್ನಾಟಕದ ಮುಖ್ಯ ವನ್ಯಜೀವಿ ವಾರ್ಡನ್ (ಪಿಸಿಸಿಎಫ್) ಮಾತನಾಡಿ, 'ರಾಜ್ಯದಲ್ಲಿ ವನ್ಯಜೀವಿ ಮಂಡಳಿ ಕೆಲವೇ ದಿನಗಳ ಹಿಂದೆಯಷ್ಟೇ ರಚನೆಯಾಗಿದೆ. ಭದ್ರಾ ಹುಲಿ ಅಭಯಾರಣ್ಯದ ಮೀಸಲು ಪ್ರದೇಶ ವಿಸ್ತರಣೆ ಬಗ್ಗೆ ರಾಜ್ಯ ವನ್ಯಜೀವಿ ಮಂಡಳಿಗೆ ಕೂಡಲೇ ಪ್ರಸ್ತಾವ ಸಲ್ಲಿಸಲಾಗುವುದು. ಅಲ್ಲಿ ಒಪ್ಪಿಗೆ ಸಿಕ್ಕ ಬಳಿಕ ಕೇಂದ್ರಕ್ಕೆ ಕಳುಹಿಸಲಾಗುತ್ತದೆ' ಎಂದರು.

ಭದ್ರಾ ಹುಲಿ ಸಂರಕ್ಷಿತ ಪ್ರದೇಶ ಮತ್ತು ಶೆಟ್ಟಿಹಳ್ಳಿ ಅಭಯಾರಣ್ಯ ಪಶ್ಚಿಮ ಘಟ್ಟದ ಪೂರ್ವ ದಿಕ್ಕಿನಲ್ಲಿವೆ. ಇವು ಹೆಚ್ಚಿನ ಸಂಖ್ಯೆಯ ಹುಲಿಗಳು ಅಥವಾ ಯಾವುದೇ ದೊಡ್ಡ ಸಸ್ತನಿಗಳನ್ನು ದೀರ್ಘಾವಧಿಯಲ್ಲಿ ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿಲ್ಲ. ಶೆಟ್ಟಿಹಳ್ಳಿ ಅಭಯಾರಣ್ಯವು ತುಂಗಾ ನದಿಯ ಉತ್ತರಕ್ಕೆ ಮತ್ತು ಭದ್ರಾ ಹುಲಿ ಸಂರಕ್ಷಿತ ಪ್ರದೇಶವು ದಕ್ಷಿಣಕ್ಕೆ ಇದೆ. ಶೆಟ್ಟಿಹಳ್ಳಿ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ನದಿಯುದ್ದಕ್ಕೂ ಸೇರಿಸಬಹುದಾದ ಯಾವುದೇ ಪ್ರದೇಶಗಳಿಲ್ಲ.

ಆದರೆ, ಭದ್ರಾ ಹುಲಿ ಸಂರಕ್ಷಿತ ಪ್ರದೇಶಕ್ಕೆ ಹೊಂದಿಕೊಂಡಂತೆ ಸಣ್ಣ ಸಣ್ಣ ಅರಣ್ಯ ಪ್ರದೇಶಗಳಿದ್ದು, ಅಭಯಾರಣ್ಯ ಮತ್ತು ಹುಲಿ ಸಂರಕ್ಷಿತ ಪ್ರದೇಶಗಳ ನಡುವೆ ಪ್ರಮುಖ ಸಂಪರ್ಕ ಒದಗಿಸಲು ಮೀಸಲು ವಲಯಕ್ಕೆ ಸೇರಿಸಬಹುದು. ಆಡಳಿತಾತ್ಮಕ ದೃಷ್ಟಿಯಿಂದ ಭದ್ರಾ ಹುಲಿ ಸಂರಕ್ಷಿತ ಪ್ರದೇಶಕ್ಕೆ ಚೊರ್ಡನಹಳ್ಳಿ ಹಾಗೂ ಕೈತೊಟ್ಲು ಅರಣ್ಯಗಳನ್ನು ಸೇರಿಸಲು ರಾಜ್ಯ ಸರ್ಕಾರ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಸಹಮತ ವ್ಯಕ್ತಪಡಿಸಿದ್ದವು.

ವನ್ಯಜೀವಿ ಮಂಡಳಿಗೆ ಜುಲೈ 8ರಂದು ಪತ್ರ ಬರೆದಿದ್ದ ಮುಖ್ಯ ವನ್ಯಜೀವಿ ವಾರ್ಡನ್, 'ಈ ಎರಡೂ ಅರಣ್ಯಗಳನ್ನು ಭದ್ರಾ ಮೀಸಲು ಪ್ರದೇಶಕ್ಕೆ ಸೇರಿಸಲು ರಾಜ್ಯ ಸರ್ಕಾರ ಪ್ರಕ್ರಿಯೆ ಆರಂಭಿಸಿದೆ. ಆದರೆ, ಭದ್ರಾ ಮೀಸಲು ಪ್ರದೇಶ ವಿಸ್ತರಣೆಗೆ ಅನೇಕ ಗ್ರಾಮ ಪಂಚಾಯಿತಿಗಳು ವಿರೋಧ ವ್ಯಕ್ತಪಡಿಸಿವೆ. ಈ ಸಂಬಂಧ ಗ್ರಾಮಸಭೆಗಳಲ್ಲಿ ನಿರ್ಣಯ ತೆಗೆದುಕೊಂಡಿವೆ. ಸ್ಥಳೀಯ ಜನರ ಮನವೊಲಿಸುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ತಿಳಿಸಿದ್ದರು.

ನೀಟ್, ಸಿಇಟಿ ನಾಳೆಯಿಂದ ಎರಡನೇ ಸುತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆ ಸೆ. 8 ರಿಂದ ಆರಂಭವಾಗುತ್ತಿದೆ.

ಅಂದು ಬೆಳಿಗ್ಗೆ 11ಕ್ಕೆ ಸೀಟುಗಳ ವಿವರವನ್ನು ಪ್ರಕಟಿಸಲಾಗುತ್ತದೆ. ಮಧ್ಯಾಹ್ನ 2ರಿಂದ ಸೆ.11ರವರೆಗೆ 'ಆಯ್ಕೆ'ಗಳನ್ನು ಬದಲಿಸಿ ಕೊಳ್ಳಲು ಅವಕಾಶ ಇರುತ್ತದೆ.

'ನೀಟ್ ವಿದ್ಯಾರ್ಥಿಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಣೆ ನಂತರ 'ಚಾಯ್ಸ್' ಆಯ್ಕೆಗೆ ಅವಕಾಶ ಇರುವುದಿಲ್ಲ. ಈ ಹಂತದಲ್ಲಿ ಹಂಚಿಕೆಯಾದ ಕಾಲೇಜುಗಳಿಗೆ ಪ್ರವೇಶ ಪಡೆಯುವುದು ಕಡ್ಡಾಯ. ಶುಲ್ಕ ಪಾವತಿಸಿ, ಕಾಲೇಜಿಗೆ ಪ್ರವೇಶ ಪಡೆಯದವರು ಕಾನೂನು ಕ್ರಮ ಎದುರಿಸಬೇಕಾಗುತ್ತದೆ' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಸಿಇಟಿ ವಿದ್ಯಾರ್ಥಿಗಳು ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದ ನಂತರ ತಮಗೆ ಇಷ್ಟ ಇರುವ 'ಚಾಯ್ಸ್' ಆಯ್ಕೆ ಮಾಡಿಕೊಳ್ಳಬಹುದು. ಖಾಸಗಿ ಕಾಲೇಜುಗಳಲ್ಲಿ ಸೀಟು ಪಡೆದವರು ಮೂಲ ದಾಖಲೆಗಳನ್ನು ಸೆ.9ರಿಂದ 12ರವರೆಗೆ ಕೆಇಎಗೆ ಸಲ್ಲಿಸಬೇಕು ಎಂದು ಪ್ರಾಧಿಕಾರ ಸೂಚಿಸಿದೆ.

'ಮಹದಾಯಿ: ವನ್ಯಜೀವಿ ಮಂಡಳಿ ಅನುಮತಿ ತಿರಸ್ಕರಿಸಿಲ್ಲ'

ಪ್ರಜಾವಾಣಿ ವಾರ್ತೆ



ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ರಾಜ್ಯ ಸರ್ಕಾರ ಸಲ್ಲಿಸಿದ ಮಹದಾಯಿ ಯೋಜನೆಯ ಪ್ರಸ್ತಾವವನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿ ತಿರಸ್ಕರಿಸಿಲ್ಲ. ಈ ವಿಷಯ ಸುಪ್ರೀಂ ಕೋರ್ಟ್‌ನಲ್ಲಿ ಇರುವ ಕಾರಣ ಯಾವುದೇ ತೀರ್ಮಾನ ಕೈಗೊಳ್ಳದೇ ಮುಂದೂಡಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.


'ಕರ್ನಾಟಕ ಹಾಗೂ ಗೋವಾ ಸರ್ಕಾರ ನ್ಯಾಯಾಲಯದ ಮೊರೆ ಹೋಗಿದ್ದು, ಅದು ಇನ್ನೂ ಇತ್ಯರ್ಥವಾಗದ ಹಿನ್ನೆಲೆಯಲ್ಲಿ ಸಭೆಯಲ್ಲಿ ಚರ್ಚಿಸುವುದು ಬೇಡ ಎಂದು ಅಧಿಕಾರಿಗಳು ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಮನವರಿಕೆ ಮಾಡಿದ್ದಾರೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಯನ್ನು ಪ್ರಸ್ತಾಪಿಸಿದ ಅವರು, 'ವರದಿ ನೋಡಿದ ತಕ್ಷಣ ಕೇಂದ್ರ ಅರಣ್ಯ ಸಚಿವ ಭೂಪೇಂದ್ರ ಯಾದವ್ ಅವರೊಂದಿಗೆ ಚರ್ಚಿಸಿದ್ದೇನೆ. ತಮ್ಮ ರಾಜ್ಯದ ಚುನಾವಣೆಯಲ್ಲಿ ನಿರತರಾಗಿರುವ ಕಾರಣ ಅವರು ಮುಂದಿನ ದಿನಗಳಲ್ಲಿ ಚರ್ಚಿಸಿ, ಎಲ್ಲವನ್ನೂ ಸಮರ್ಪಕವಾಗಿ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ' ಎಂದರು.

'ಈ ಸಭೆಯು ಜುಲೈ 31ರಂದು ನಡೆದಿತ್ತು. ಇದನ್ನು ರಾಜ್ಯ ಸರ್ಕಾರ ನಮ್ಮ ಗಮನಕ್ಕೆ ತಂದಿರಲಿಲ್ಲ. ತಂದಿದ್ದರೆ ನಾವು ಒತ್ತಡ ಹೇರಬಹುದಿತ್ತು. ಮಹದಾಯಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಏನೂ ಮಾಡಿಲ್ಲ. ಈವರೆಗೆ ಕೇವಲ ಬಂಡೂರಾ ಪ್ರಸ್ತಾವನೆ ಮಾತ್ರ ಕಳಿಸಿದೆ. ಕಳಸಾ ಪ್ರಸ್ತಾವನೆ ಕಳಿಸಿಲ್ಲ. ಈ ಯೋಜನೆಗೆ ಪರಿಸರ ಅನುಮೋದನೆ ನಾವೇ (ಬಿಜೆಪಿ) ಕೊಡಿಸಿದ್ದೇವೆ. ನ್ಯಾಯಮಂಡಳಿಗೆ ನ್ಯಾಯಾಧೀಶರನ್ನು ನೇಮಿಸಿದ್ದಲ್ಲದೇ, ವರದಿ ನೀಡಲು ಸಮಯ ನಿಗದಿ ಮಾಡಿದ್ದೆವು. ಅಧಿಸೂಚನೆ ಹೊರಡಿಸಿದೆವು. ವಿಸ್ತ್ರತಾ ಯೋಜನಾ ವರದಿಗೆ (ಡಿಪಿಆರ್) ಅನುಮೋದನೆ ಕೂಡ ನೀಡಿದ್ದೇವೆ' ಎಂದರು.

'ದೆಹಲಿಗೆ ನಿಯೋಗ ಕರೆದೊಯ್ಯುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದ್ದಾರೆ. ಬಂದರೆ, ನಾವು ಸ್ವಾಗತಿಸುತ್ತೇವೆ. ಈವರೆಗೆ ಮಹದಾಯಿ ಕುರಿತು ಒಮ್ಮೆಯೂ ಚರ್ಚಿಸಿಲ್ಲ. ನಮಗೆ ಬದ್ಧತೆ ಇದೆ. ನಾವು ಇದನ್ನು ಬಗೆಹರಿಸುತ್ತೇವೆ. ಇದು ನ್ಯಾಯಾಲಯದಲ್ಲಿ ಇರುವುದರಿಂದ ಮುಂದೆ ಏನು ಮಾಡಬೇಕು ಎನ್ನುವ ಬಗ್ಗೆ ಚರ್ಚಿಸಿ, ತೀರ್ಮಾನಿಸಬೇಕಿದೆ' ಎಂದರು.

ದೆಹಲಿಗೆ ನಿಯೋಗ: ಎಚ್.ಕೆ.ಪಾಟೀಲ



ಎಚ್‌.ಕೆ.ಪಾಟೀಲ

ಗದಗ: 'ಮಹದಾಯಿ ಯೋಜನೆ ಜಾರಿಗೆ ಕೇಂದ್ರ ಸರ್ಕಾರ ವನ್ಯಜೀವಿ ಮಂಡಳಿಯಿಂದ ಅಡ್ಡಿ ಆಗುತ್ತಿದೆ. ಇದರ ಬಗ್ಗೆ ಸರ್ವಪಕ್ಷಗಳ ಸಭೆ ಕರೆದು, ಪ್ರಧಾನಿ ಬಳಿಗೆ ನಿಯೋಗ ಒಯ್ಯಲು ಮುಖ್ಯಮಂತ್ರಿ ತೀರ್ಮಾನಿಸಿದ್ದಾರೆ' ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದರು.

'ಮಹದಾಯಿ ವಿಚಾರವಾಗಿ ಕಾನೂನು ತಜ್ಞರನ್ನು ಸಂಪರ್ಕಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಚಿಂತನೆ ನಡೆದಿದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಕಲಬುರಗಿಯಲ್ಲಿ ಸಂಪುಟ ಸಭೆ 17ಕ್ಕೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇದೇ 17 ರಂದು ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಯಲಿದೆ.

ಕಲಬುರಗಿ ಮಿನಿ ವಿಧಾನಸೌಧದಲ್ಲಿರುವ ಪ್ರಾದೇಶಿಕ ಆಯುಕ್ತರ ಕಾರ್ಯಾಲಯದ ಸಭಾಂಗಣದಲ್ಲಿ ಸಂಜೆ 4 ಕ್ಕೆ ಸಂಪುಟ ಸಭೆ ನಡೆಯಲಿದೆ. ಇತ್ತೀಚಿನ ವರ್ಷಗಳಲ್ಲಿ ಸಿದ್ದರಾಮಯ್ಯ ಅಲ್ಲದೇ, ಬಿ.ಎಸ್.ಯಡಿಯೂರಪ್ಪ, ಜಗದೀಶ ಶೆಟ್ಟರ್ ಅವರು ಮುಖ್ಯಮಂತ್ರಿ ಆಗಿದ್ದಾಗ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆಗಳನ್ನು ನಡೆಸಿದ್ದರು.

ಪ್ರತ್ಯೇಕ ಅಪಘಾತ; 11 ಸಾವು

ಪ್ರಜಾವಾಣಿ ವಾರ್ತೆ

ಬಾಗಲಕೋಟೆ/ಮುದ್ದೇಬಿಹಾಳ/ರಾಮನಗರ: ಪ್ರತ್ಯೇಕ ಬೈಕ್ ಅಪಘಾತಗಳಲ್ಲಿ ಇಬ್ಬರು ಮಹಿಳೆಯರು ಸೇರಿ 11 ಮಂದಿ ಮೃತಪಟ್ಟಿದ್ದಾರೆ.

ರಾಮನಗರ ತಾಲ್ಲೂಕಿನ ಮಾಯಗಾನಹಳ್ಳಿ ಬಳಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆಯಲ್ಲಿರುವ ಪೆಟ್ರೋಲ್ ಬಂಕ್ ಬಳಿ ಶುಕ್ರವಾರ ಟಿಪ್ಪರ್ ಲಾರಿಯೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದರಿಂದ ಮೂವರು ಕಾರ್ಮಿಕರು ಮೃತಪಟ್ಟು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ಕಟ್ಟಡ ನಿರ್ಮಾಣ ಕಾರ್ಮಿಕರಾದ ರಾಮನಗರದ ಶೇಕ್ ಹಫೀಜ್ (45), ಗುರುಮೂರ್ತಿ (39) ಹಾಗೂ ಚನ್ನಪಟ್ಟಣ ತಾಲ್ಲೂಕಿನ ಚಕ್ಕೆರೆಯ ವೆಂಕಟಪ್ಪ (50) ಮೃತರು. ಗಾಯಗೊಂಡಿರುವ ಹನುಮಂತ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಬಾಗಲಕೋಟೆಯ ನವನಗರದ ಪರಿಸರ ಮಾಲಿನ್ಯ ಮಂಡಳಿ ಕಚೇರಿ ಬಳಿ ದ್ವಿಚಕ್ರ ವಾಹನಕ್ಕೆ ಗುರುವಾರ ರಾತ್ರಿ ರಸ್ತೆ ದಾಟುವಾಗ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಮಹಿಳೆಯರು ಮತ್ತು ಬೈಕ್ ಸವಾರ ಮೃತಪಟ್ಟಿದ್ದಾರೆ.

ಬೆಂಗಳೂರಿನ ಸಾಫ್ಟ್‌ವೇರ್ ಕಂಪನಿಯಲ್ಲಿ ಎಂಜಿನಿಯರ್ ರಜನಿ ಒಂದಕುದರಿ (34), ಬಾಗಲಕೋಟೆಯ ಬಿ.ವಿ.ವಿ. ಸಂಘದ ದಂತ ವೈದ್ಯಕೀಯ ಕಾಲೇಜಿನ ಡಾ. ಶ್ರುತಿ ಒಂದಕುದರಿ (32), ಕಟ್ಟಡ ಕಾರ್ಮಿಕ ಅಭಿಷೇಕ (20) ಮೃತರು.

'ರಜನಿ ಒಂದಕುದರಿ ಪಾಲಕರು ಸೂಡಾನ್‌ನಲ್ಲಿದ್ದು, ಶನಿವಾರ ಬಾಗಲಕೋಟೆಗೆ ಬರಬಹುದು' ಎಂದು ನವನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಕುಂಟೋಜಿ ಗ್ರಾಮದ ಬಳಿ ರಸ್ತೆ ದಾಟುತ್ತಿದ್ದವರಿಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಸ್ಥಳದಲ್ಲೇ ಮೂವರು ಮೃತಪಟ್ಟಿದ್ದಾರೆ.

'ಬೈಕ್ ಮೇಲಿದ್ದ ತಾಳಿಕೋಟೆ ತಾಲ್ಲೂಕಿನ ಗೋಟಖಂಡಕಿಯ ನಿಂಗರಾಜ ದೇವೇಂದ್ರಪ್ಪ ಚೌಧರಿ (22), ದೇವರಹಿಪ್ಪರಗಿ ತಾಲ್ಲೂಕು ಹಂಚಲಿಯ ಅನಿಲ ಮಲ್ಲಪ್ಪ ಕೈನೂರ (27) ಮತ್ತು ಮುದ್ದೇಬಿಹಾಳ ತಾಲ್ಲೂಕಿನ ಮಲಗಲದಿನ್ನಿಯ ಉದಯಕುಮಾರ ರಮೇಶ ಪ್ಯಾಟಿ (19) ಮೃತರು' ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳಗಾವಿ–ರಾಯಚೂರು ಹೆದ್ದಾರಿಯ ಕಬ್ಬಿಣ ಕಣಿವೆ ಬಳಿ ಶುಕ್ರವಾರ ಟ್ರ್ಯಾಕ್ಟರ್ ಹಿಂಬದಿಗೆ ಹೊಡೆದ ಪರಿಣಾಮ ಬೈಕ್ ಸವಾರರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಇರಕಲ್ಲ ಪಟ್ಟಣದ ನಿವಾಸಿಗಳಾದ ಅಮರೇಶ ಬಸಯ್ಯ ಬೆನಕನಾಳಮಠ (21) ಮತ್ತು ಶರಣಯ್ಯ ಬಸಯ್ಯ ಬೆನಕನಾಳಮಠ (16) ಮೃತರು' ಎಂದು ಅಮೀನಗಡ ಠಾಣೆ ಪೊಲೀಸರು ತಿಳಿಸಿದ್ದಾರೆ.

ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಹಣಕಾಸು ಅಕ್ರಮ ಪ್ರಕರಣ; 7 ತಾಸು ಶೋಧ

ಘೋಷ್ ಆಪ್ತ ಇ.ಡಿ ವಶಕ್ಕೆ

ಕೋಲ್ಕತ್ತ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್ ಅವರ ಆಪ್ತನನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಶುಕ್ರವಾರ ವಶಕ್ಕೆ ಪಡೆದುಕೊಂಡಿದ್ದಾರೆ.

ಕಲ್ಕತ್ತಾ ನ್ಯಾಷನಲ್ ವೈದ್ಯಕೀಯ ಕಾಲೇಜಿನಲ್ಲಿ (ಸಿಎನ್ಎಂಸಿ) ಡಾಟಾ ಎಂಟ್ರಿ ಆಪರೇಟರ್ ಆಗಿರುವ ಪ್ರಸೂನ್ ಚಟ್ಟೋಪಾಧ್ಯಾಯ ಅವರನ್ನು ವಿಚಾರಣೆ ಬಳಿಕ ವಶಕ್ಕೆ ಪಡೆಯಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಇ.ಡಿ ಅಧಿಕಾರಿಗಳ ತಂಡವೊಂದು ದಕ್ಷಿಣ 24 ಪರಗಣ ಜಿಲ್ಲೆಯ ಸುಭಾಷ್‌ಗ್ರಾಮದಲ್ಲಿರುವ ಪ್ರಸೂನ್ ಅವರ ಮನೆಯಲ್ಲಿ ಶುಕ್ರವಾರ ಬೆಳಿಗ್ಗೆ ಶೋಧ ಕಾರ್ಯ ಆರಂಭಿಸಿತು. ಸುಮಾರು ಏಳು ಗಂಟೆಗಳ ಶೋಧದ ಬಳಿಕ ಮಧ್ಯಾಹ್ನ 2ರ ವೇಳೆಗೆ ಅಧಿಕಾರಿಗಳು ಪ್ರಸೂನ್ ಅವರನ್ನು ತಮ್ಮ ಜತೆ ಕರೆದೊಯ್ದರು.

ಇದೇ ಜಿಲ್ಲೆಯ ಮಧ್ಯ ನಾರಾಯಣಪುರ ಎಂಬಲ್ಲಿ ಘೋಷ್ ಮೂರು ವರ್ಷಗಳ ಹಿಂದೆ ನಿರ್ಮಿಸಿರುವ ಫಾರ್ಮ್ ಹೌಸ್‌ಗೂ ಪ್ರಸೂನ್ ಅವರನ್ನು ಕರೆದೊಯ್ದ ತನಿಖಾ ತಂಡ, ಮಾಹಿತಿಗಳನ್ನು ಕಲೆಹಾಕಿದೆ.

ಸಿಎನ್ಎಂಸಿನಲ್ಲಿ ಕೆಲಸ ಮಾಡುತ್ತಿದರೂ ಪ್ರಸೂನ್ ಅವರು ತಮ್ಮನ್ನು ಘೋಷ್ ಅವರ ಆಪ್ತ ಸಹಾಯಕ ಎಂದು ಗುರುತಿಸಿಕೊಳ್ಳುತ್ತಿದ್ದರು. ಸಿಎನ್ಎಂಸಿನಲ್ಲಿರುವ ಕಚೇರಿಯ ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕಿದ ಬಳಿಕ ಅವರು ಆರ್.ಜಿ. ಕರ್ ಆಸ್ಪತ್ರೆಗೆ ಬಂದು ಘೋಷ್ ಜತೆ ಇರುತ್ತಿದ್ದರು ಎಂದು ಮೂಲಗಳು ಹೇಳಿವೆ.

ಪೂರ್ವ ಕೋಲ್ಕತ್ತದ ಬೆಲಿಯಾಘಾಟಾದಲ್ಲಿರುವ ಘೋಷ್ ಅವರ ನಿವಾಸ ಮತ್ತು ಮಿಲನ್ ಪಲ್ಲಿ ಪ್ರದೇಶದಲ್ಲಿರುವ ಅವರ ಸಂಬಂಧಿಕರ ಅಪಾರ್ಟ್‌ಮೆಂಟ್‌ಗಳಲ್ಲೂ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳು ಘೋಷ್ ಹಾಗೂ ಇತರ ಮೂವರನ್ನು ಸೆಪ್ಟೆಂಬರ್ 3ರಂದು ಬಂಧಿಸಿತ್ತು. ಆರ್.ಜಿ.ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಹತ್ಯೆ ಘಟನೆ ಬೆನ್ನಲ್ಲೇ ಘೋಷ್ ಅವರು ಪ್ರಾಂಶುಪಾಲರ ಹುದ್ದೆಗೆ ರಾಜೀನಾಮೆ ನೀಡಿದ್ದರು.



ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನಕಾರರು ಹೌರಾದಲ್ಲಿ ನಡೆಸಿದ ಮೆರವಣಿಗೆಯನ್ನು ಪೊಲೀಸರು ತಡೆದರು ಪಿಟಿಐ ಚಿತ್ರ

ಬಿಜೆಪಿಯಿಂದ ರಸ್ತೆ ತಡೆ ಚಳವಳಿ

ಕೋಲ್ಕತ್ತ: ಸಂತ್ರಸ್ತೆಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಆಗ್ರಹಿಸಿ ಬಿಜೆಪಿ ವತಿಯಿಂದ ಶುಕ್ರವಾರ ಪಶ್ಚಿಮ ಬಂಗಾಳದಾದ್ಯಂತ ರಸ್ತೆ ತಡೆ ಚಳವಳಿ ಹಮ್ಮಿಕೊಳ್ಳಲಾಯಿತು.

ಪಕ್ಷದ ಕಾರ್ಯಕರ್ತರು ಕೋಲ್ಕತ್ತದ ಶ್ಯಾಮ್‌ಬಜಾರ್, ಲೇಕ್ ಟೌನ್, ವಿಐಪಿ ರಸ್ತೆ, ಸಾಲ್ಟ್ ಲೇಕ್ ಮತ್ತು ರಾಜ್‌ಪುರ ಒಳಗೊಂಡಂತೆ ಹಲವೆಡೆ ಮಧ್ಯಾಹ್ನ 1ರಿಂದ 2ರವರೆಗೆ ರಸ್ತೆ ತಡೆ ನಡೆಸಿದರು. ಇತರ ಜಿಲ್ಲೆಗಳ ಕೇಂದ್ರಗಳಲ್ಲೂ ಇದೇ ರೀತಿಯ ಪ್ರತಿಭಟನೆ ನಡೆಯಿತು.

ಮನವಿ ತಿರಸ್ಕರಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅಕ್ರಮ ಪ್ರಕರಣದಲ್ಲಿ ತಮ್ಮನ್ನು ಕಕ್ಷಿದಾರರನ್ನಾಗಿ ಪರಿಗಣಿಸಬೇಕೆಂದು ಕೋರಿ ಸಂದೀಪ್ ಘೋಷ್ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ತಮ್ಮ ಅರ್ಜಿಯನ್ನು ವಜಾಗೊಳಿಸಿರುವ ಕಲ್ಕತ್ತ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

‘ಈ ಪ್ರಕರಣದಲ್ಲಿ ಆರೋಪಿಯಾಗಿರುವ ಘೋಷ್ ಅವರಿಗೆ ನ್ಯಾಯಾಲಯದಲ್ಲಿ ಇಂತಹ ಮನವಿ ಮಾಡಲು ಕಾನೂನಿನಡಿ ಅವಕಾಶ ಇಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠ ಹೇಳಿತು.

‘ಅಪರಾಜಿತ ಮಸೂದೆ’: ರಾಷ್ಟ್ರಪತಿಗೆ ಸಲ್ಲಿಕೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ.ಆನಂದ ಬೋಸ್ ಅವರು, ವಿಧಾನಸಭೆಯಲ್ಲಿ ಇತ್ತೀಚೆಗೆ ಅಂಗೀಕರಿಸಲಾದ ಅತ್ಯಾಚಾರ ವಿರೋಧಿ ಮಸೂದೆ (ಅಪರಾಜಿತ ಮಸೂದೆ)ಯನ್ನು ಪರಿಶೀಲನೆಗಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಶುಕ್ರವಾರ ಕಳುಹಿಸಿದ್ದಾರೆ ಎಂದು ರಾಜಭವನದ ಅಧಿಕಾರಿ ತಿಳಿಸಿದ್ದಾರೆ.



ಬೋಸ್

ಸರ್ಕಾರದ ಮುಖ್ಯ ಕಾರ್ಯದರ್ಶಿ ಮನೋಜ್ ಪಂತ್ ಅವರು ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ತಾಂತ್ರಿಕ ವರದಿಯನ್ನು ತಮಗೆ ಹಸ್ತಾಂತರಿಸಿದ ನಂತರ, ರಾಜ್ಯಪಾಲ ಬೋಸ್ ಅವರು ಅದನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದ್ದಾರೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ ಅಲ್ಲ: ಸಿಬಿಐ

ನವದೆಹಲಿ: ‘ಕೋಲ್ಕತ್ತದ ಆರ್.ಜಿ.ಕರ್ ವೈದ್ಯಕೀಯ ವಿಜ್ಞಾನ ಆಸ್ಪತ್ರೆಯಲ್ಲಿ ಆಗಸ್ಟ್‌ನಲ್ಲಿ ವೈದ್ಯ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿಲ್ಲ. ಲಭ್ಯ ಸಾಕ್ಷ್ಯಗಳ ಪ್ರಕಾರ, ಸಂಜಯ್ ರಾಯ್ ಏಕೈಕ ಆರೋಪಿಯಾಗಿದ್ದಾನೆ’ ಎಂದು ಸಿಬಿಐ ನಡೆಸಿದ ತನಿಖೆಯಲ್ಲಿ ಗೊತ್ತಾಗಿದೆ.

ಸಿಬಿಐನ ಮೂಲಗಳನ್ನು ಆಧರಿಸಿ ಎನ್‌ಡಿಟಿವಿ ಈ ಕುರಿತು ವರದಿ ಮಾಡಿದೆ. ‘ಪ್ರಕರಣದ ತನಿಖೆಯು ಅಂತಿಮ ಹಂತದಲ್ಲಿದೆ.ಆದಷ್ಟುಶೀಘ್ರದಲ್ಲಿಯೇಆರೋಪ ಪಟ್ಟಿ ದಾಖಲಿಸಲಾಗುತ್ತದೆ’ ಎಂದು ವರದಿ ತಿಳಿಸಿದೆ. ಕೃತ್ಯದ ತನಿಖೆಯನ್ನು ಕೋಲ್ಕತ್ತ ಹೈಕೋರ್ಟ್, ಸಿಬಿಐಗೆ ಒಪ್ಪಿಸಿತ್ತು.

ಸಿಬಿಐ ತನಿಖೆಗೆ ಮುಖ್ಯಮಂತ್ರಿ ಮಮತಾ ವಿರೋಧ ವ್ಯಕ್ತಪಡಿಸಿದ್ದರು. ಇದೇ ಕಾರಣಕ್ಕಾಗಿ ರಾಜಕೀಯ ವಿರೋಧಿಗಳು ಹಾಗೂ ನಾಗರಿಕ ಸಮಾಜದ ಟೀಕೆಗೂ ಗುರಿಯಾಗಿದ್ದರು.

ತನಿಖೆಗೆ ಸಂಬಂಧಿಸಿ ಸಿಬಿಐ ಸುಮಾರು 100 ಹೇಳಿಕೆಗಳನ್ನು ದಾಖಲಿಸಿದೆ. ಆಸ್ಪತ್ರೆಯ ಮಾಜಿ ಮುಖ್ಯಸ್ಥ ಡಾ.ಸಂದೀಪ್ ಘೋಷ್ ಸೇರಿದಂತೆ 10 ಜನರನ್ನು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಿದೆ. ಮೂವರನ್ನು ಬಂಧಿಸಿದೆ. ಘೋಷ್ ಅವರನ್ನು ಹಣಕಾಸು ಅಕ್ರಮ ಆರೋಪದಡಿ ಬಂಧಿಸಲಾಗಿದೆ ಎಂದು ಎನ್‌ಡಿಟಿವಿ ವರದಿ ಉಲ್ಲೇಖಿಸಿದೆ.

ಮಣಿಪುರ: ಬಾಂಬ್ ದಾಳಿ– ವೃದ್ಧ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ: ಮಾಜಿ ಮುಖ್ಯಮಂತ್ರಿ ಎಂ. ಕೊಯಿರೆಂಗ್ ಅವರ ನಿವಾಸದ ಕಾಂಪೌಂಡ್ ಒಳಗೆ ಬಾಂಬ್ ದಾಳಿ ನಡೆದಿದೆ. ಶುಕ್ರವಾರ ಒಂದೇ ದಿನದಲ್ಲಿ ಮಣಿಪುರದಲ್ಲಿ ಎರಡು ಸ್ಥಳಗಳಲ್ಲಿ ಈ ರೀತಿಯ ದಾಳಿಗಳು ನಡೆದಿವೆ.

ಮೈತೇಯಿ ಸಮುದಾಯದವರು ಹೆಚ್ಚಿರುವ ವಿಷ್ಣುಪುರ ಜಿಲ್ಲೆಯ ಮೊಯಿರಾಂಗ್ ಪ್ರದೇಶದಲ್ಲಿ ಕೊಯಿರೆಂಗ್ ಅವರ ಮನೆ ಇದೆ. ಇವರ ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಸಲು ಬಂದಿದ್ದ 70 ವರ್ಷದ ವೃದ್ಧರೊಬ್ಬರ ಮೇಲೆ ಬಾಂಬ್ ಸಿಡಿದಿದ್ದು, ಅವರು ಮೃತಪಟ್ಟಿದ್ದಾರೆ. ಅವರ ಜೊತೆಗಿದ್ದ 13 ವರ್ಷ ಬಾಲಕಿಯೂ ಸೇರಿ ಐವರಿಗೆ ಗಾಯಗಳಾಗಿವೆ.

ಈ ದಾಳಿಯನ್ನು ಕುಕಿ ಬುಡಕಟ್ಟು ಸಮುದಾಯದ ಭಯೋತ್ಪಾದಕರೇ ನಡೆಸಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಕೊರ್ಯಾಂಗ್ ಅವರ ನಿವಾಸ ಮೇಲೆ ಅತ್ಯಾಧುನಿಕ ಬಾಂಬ್ ದಾಳಿ ನಡೆಸಲಾಗಿದೆ ಎನ್ನಲಾಗಿದೆ.

ಇಂಡಿಯನ್ ನ್ಯಾಷನಲ್ ಆರ್ಮಿ (ಐಎನ್‌ಎ) ಕೇಂದ್ರ ಕಚೇರಿ ಬಳಿಯೂ ಶುಕ್ರವಾರ ಬಾಂಬ್ ದಾಳಿ ನಡೆದಿದೆ.

ಪ್ರತಿಭಟನೆ: ‘ರಾಜ್ಯದಲ್ಲಿ ಕೆಲವು ದಿನಗಳಿಂದ ಡ್ರೋನ್ ಹಾಗೂ ಗುಂಡಿನ ದಾಳಿಗಳು ನಡೆಯುತ್ತಿದ್ದು, ಇಬ್ಬರು ಮೃತಪಟ್ಟು 12 ಮಂದಿ ಗಾಯಗೊಂಡಿದ್ದಾರೆ. ದೇಶದ ಬೇರೆಡೆ ಇಂಥ ಘಟನೆಗಳು ನಡೆದರೆ ಅದನ್ನು ಖಂಡಿಸಲಾಗುತ್ತದೆ. ಆದರೆ, ನಮ್ಮಲ್ಲಿ ಏಕೆ ಹೀಗಾಗುತ್ತಿಲ್ಲ’ ಎಂದು ಆರೋಪಿಸಿ, ಮೈತೇಯಿ ಸಮುದಾಯದ ಸಾವಿರಾರು ಜನರು ಮಾನವ ಸರಪಳಿ ನಿರ್ಮಿಸಿ ಶುಕ್ರವಾರ ಪ್ರತಿಭಟಿಸಿದರು.



ಬಾಂಬ್ ದಾಳಿಗಳನ್ನು ಖಂಡಿಸಿ, ವಿದ್ಯಾರ್ಥಿನಿಯರು ಇಂಫಾಲ್‌ನಲ್ಲಿ ಮಾನವ ಸರಪಳಿ ನಿರ್ಮಿಸಿ ಶುಕ್ರವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಪ್ರಥಮ ಬಾರಿಗೆ ತ್ರಿವರ್ಣ ಧ್ವಜ ಹಾರಾಡಿದ ಜಾಗದ ಮೇಲೆ ದಾಳಿ

ಇಂಡಿಯನ್ ನ್ಯಾಷನಲ್ ಆರ್ಮಿಯ ಲೆಫ್ಟಿನೆಂಟ್ ಕರ್ನಲ್ ಶೌಕತ್ ಅಲಿ ಅವರು 1944ರ ಏಪ್ರಿಲ್ 14ರಂದು ಮೌರ್ಯಾಂಗ್‌ನಲ್ಲಿ ಭಾರತದ ನೆಲದಲ್ಲಿ ಪ್ರಥಮ ಬಾರಿಗೆ ತ್ರಿವರ್ಣ ಧ್ವಜವನ್ನು ಹಾರಿಸಿದ್ದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ನಿರ್ದೇಶನದಲ್ಲಿ ತ್ರಿವರ್ಣ ಧ್ವಜ ಹಾರಿಸಲಾಗಿತ್ತು. ಶುಕ್ರವಾರ ಬೆಳಿಗ್ಗೆ ಈ ಜಾಗಕ್ಕೆ ಎರಡು ಕೀ.ಮೀ ದೂರದಿಂದ ಬಾಂಬ್ ಎಸೆಯಲಾಗಿದೆ.

ಮಾಂಸಾಹಾರ: ವಿದ್ಯಾರ್ಥಿ ಉಚ್ಚಾಟನೆ

ಅಮರೋಹಾ ಜಿಲ್ಲೆ ಶಾಲೆಯಲ್ಲಿ ಘಟನೆ; ಕ್ರಮಕ್ಕೆ ಮುಸ್ಲಿಂ ಮುಖಂಡರ ಆಗ್ರಹ

ಪ್ರಜಾವಾಣಿ ವಾರ್ತೆ

ಲಖನೌ: ಊಟದ ಡಬ್ಬಿಯಲ್ಲಿ ಮಾಂಸಾಹಾರವನ್ನು ತಂದಿದ್ದ ಮೂರನೇ ತರಗತಿ ವಿದ್ಯಾರ್ಥಿಯೊಬ್ಬನನ್ನು ಶಾಲೆಯಿಂದ ಹೊರಹಾಕಿರುವ ಘಟನೆ ಉತ್ತರ ಪ್ರದೇಶದ ಅಮರೋಹಾ ಜಿಲ್ಲೆಯಲ್ಲಿ ನಡೆದಿದೆ.

ಖಾಸಗಿ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ಗುರುವಾರ ಊಟದ ಡಬ್ಬಿಯಲ್ಲಿ ಬಿರಿಯಾನಿ ತಂದಿದ್ದ. ಈ ಕಾರಣಕ್ಕೆ ಶಾಲಾ ಪ್ರಾಂಶುಪಾಲರು ವಿದ್ಯಾರ್ಥಿಗೆ ತರಗತಿಯಲ್ಲಿ ಕುಳಿತುಕೊಳ್ಳಲು ಅವಕಾಶ ನೀಡಲಿಲ್ಲ ಎಂದು ವರದಿಯಾಗಿದೆ.

ಈ ಪ್ರಕರಣ ಸಂಬಂಧ ಪ್ರಾಂಶುಪಾಲ ಮತ್ತು ವಿದ್ಯಾರ್ಥಿಯ ತಾಯಿಯ ನಡುವೆ ನಡೆದಿರುವ ವಾಗ್ವಾದದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ಮಾಂಸಾಹಾರವನ್ನು ಶಾಲೆಗೆ ತರದಂತೆ ಹಲವು ಬಾರಿ ಹೇಳಿದ್ದರೂ, ವಿದ್ಯಾರ್ಥಿಯು ಹಲವು ತಿಂಗಳುಗಳಿಂದ ಊಟದ ಡಬ್ಬಿಯಲ್ಲಿ ಮಾಂಸಾಹಾರವನ್ನು ತರುತ್ತಿದ್ದಾನೆ’ ಎಂದು ಪ್ರಾಂಶುಪಾಲ ಹೇಳುತ್ತಿರುವ ದೃಶ್ಯ ವಿಡಿಯೊ ತುಣುಕಿನಲ್ಲಿದೆ.

‘ಎಲ್ಲ ಮಕ್ಕಳೂ ಮಾಂಸಾಹಾರ ತಿನ್ನುವಂತೆ ಮಾಡಿ, ಅವರೆಲ್ಲರನ್ನೂ ಇಸ್ಲಾಂಗೆ ಮತಾಂತರ ಮಾಡಲು ನಿಮ್ಮ ಮಗ ಬಯಸಿದ್ದಾನೆ’ ಎಂದು ಬಾಲಕನ ತಾಯಿಗೆ ಪ್ರಾಂಶುಪಾಲರು ಹೇಳುತ್ತಿರುವುದೂ ವಿಡಿಯೊದಲ್ಲಿದೆ.

ಆದರೆ, ವಿದ್ಯಾರ್ಥಿಯ ತಾಯಿ ಈ ಆರೋಪ ನಿರಾಕರಿಸಿದ್ದು, ‘ತರಗತಿಯಲ್ಲಿ ಮಕ್ಕಳು ಹಿಂದೂ–ಮುಸ್ಲಿಂ ಎಂದೆಲ್ಲ ಮಾತನಾಡುತ್ತಾರೆ ಎಂಬುದಾಗಿ ಮಗ ನನ್ನೊಂದಿಗೆ ಹೇಳುತ್ತಿದ್ದ. ಇಲ್ಲಿ ಅವನಿಗೆ ಅದನ್ನೇ ಕಲಿಸಲಾಗುತ್ತಿದೆ’ ಎಂದು ಆಕೆ ಹೇಳುತ್ತಿರುವ ದೃಶ್ಯವೂ ತುಣುಕಿನಲ್ಲಿದೆ.

ತನ್ನ ಮಗನನ್ನು ಒತ್ತೆಯಾಳಾಗಿ ಇರಿಸಿಕೊಂಡು ಶಾಲೆಯ ಕೊಠಡಿಯೊಂದರಲ್ಲಿ ಕೂಡಿಹಾಕಲಾಗಿತ್ತು ಎಂಬ ಆರೋಪವನ್ನೂ ತಾಯಿ ಮಾಡಿದ್ದಾರೆ. ಇದನ್ನು ಶಾಲಾ ಆಡಳಿತ ನಿರಾಕರಿಸಿದೆ.

ಘಟನೆಯ ಬಳಿಕ ಶಾಲಾ ಆಡಳಿತ ಮಂಡಳಿ ಮತ್ತೊಂದು ವಿಡಿಯೊವನ್ನು ಬಿಡುಗಡೆ ಮಾಡಿದ್ದು, 'ಶಾಲೆಯಿಂದ ಹೊರಕ್ಕೆ ಹಾಕಲಾದ ವಿದ್ಯಾರ್ಥಿಯು ಧಾರ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದ’ ಎಂದು ತರಗತಿಯ ಇತರೆ ಕೆಲವು ವಿದ್ಯಾರ್ಥಿಗಳು ಅದರಲ್ಲಿ ಹೇಳಿಕೊಂಡಿದ್ದಾರೆ.

ಮುಖ್ಯಾಂಶಗಳು

- ಹಲವು ತಿಂಗಳಿಂದ ಮಾಂಸಾಹಾರ ತರುತ್ತಿದ್ದ ಆರೋಪ
- ಶಾಲೆ ವಿರುದ್ಧ ಹರಿಹಾಯ್ದ ಬಾಲಕನ ತಾಯಿ
- ಮಗನನ್ನು ಶಾಲೆಯಲ್ಲಿ ಕೂಡಿಹಾಕಿದ್ದಾಗಿ ದೂರು

ತನಿಖೆಗೆ ಸಮಿತಿ

ಪ್ರಕರಣದ ಬಗ್ಗೆ ತನಿಖೆ ನಡೆಸಲು ಮೂವರು ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದೆ ಎಂದು ಜಿಲ್ಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

‘ಸಮಿತಿ ನೀಡುವ ವರದಿಯ ಅನ್ವಯ ನಾವು ಕ್ರಮ ಕೈಗೊಳ್ಳುತ್ತೇವೆ’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಮಧ್ಯೆ, ಮುಸ್ಲಿಂ ಸಮುದಾಯದ ಪ್ರಮುಖ ಮುಖಂಡರ ನಿಯೋಗ ಜಿಲ್ಲಾ ಅಧಿಕಾರಿಗಳನ್ನು ಭೇಟಿ ಮಾಡಿ ಶಾಲೆಯ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.



ಗಣೇಶೋತ್ಸವದ ಅಂಗವಾಗಿ ಪ್ರತಿಷ್ಠಾಪಿಸಲು ನಾಗ್ಪುರದಲ್ಲಿ ಶುಕ್ರವಾರ ಗಣೇಶನ ಭವ್ಯ ಮೂರ್ತಿಯನ್ನು ಮೆರವಣಿಗೆ ಮೂಲಕ ಕೊಂಡೊಯ್ಯಲಾಯಿತು ಪಿಟಿಐ ಚಿತ್ರ

ಮುಷರಫ್ ಪೂರ್ವಜರ ಭೂಮಿ ಹರಾಜು

ಲಖನೌ: ಪಾಕಿಸ್ತಾನದ ಮಾಜಿ ಅಧ್ಯಕ್ಷ ಪರ್ವೇಜ್ ಮುಷರಫ್ ಅವರ ಪೂರ್ವಜರು ಉತ್ತರ ಪ್ರದೇಶದ ಬಾಗಪತ್ ಜಿಲ್ಲೆಯಲ್ಲಿ ಹೊಂದಿದ್ದ ಜಮೀನು ₹1.38 ಕೋಟಿಗೆ ಹರಾಜಾಗಿದೆ.

ಜಿಲ್ಲೆಯ ಕೋತನಾ ಗ್ರಾಮದ ಬಳಿ ಸುಮಾರು 13 ‘ಬಿಗಾಸ್’ (ಎಂಟು ಎಕರೆಗೂ ಹೆಚ್ಚು) ಜಮೀನು ಗುರುವಾರ ಆನ್‌ಲೈನ್‌ನಲ್ಲಿ ಹರಾಜು ಆಗಿದೆ ಎಂದು ಬಾಗಪತ್‌ನ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

ನಿಯಂತ್ರಕ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಪಿಎಸಿ ನಿರ್ಧಾರ

ಸೆಬಿ ಅಧ್ಯಕ್ಷೆ ಬುಚ್‌ಗೆ ಸಮನ್ಸ್ ಸಾಧ್ಯತೆ

ನವದೆಹಲಿ (ಪಿಟಿಐ): ಸಂಸತ್ತಿನ ಕಾಯ್ದೆಯಡಿ ಸ್ಥಾಪಿಸಲಾಗಿರುವ ವಿವಿಧ ನಿಯಂತ್ರಕ ಸಂಸ್ಥೆಗಳ ಕಾರ್ಯನಿರ್ವಹಣೆ ಕುರಿತು ಪರಾಮರ್ಶೆ ನಡೆಸಲು ಸಂಸತ್‌ನ ಸಾರ್ವಜನಿಕ ಲೆಕ್ಕಪತ್ರ ಸಮಿತಿ (ಪಿಎಸಿ) ನಿರ್ಧರಿಸಿದೆ.



ಕೆ.ಸಿ. ವೇಣು ಗೋಪಾಲ್

ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ಹಿತಾಸಕ್ತಿ ಸಂಘರ್ಷ ಆರೋಪಗಳು ಕೇಳಿಬಂದಿರುವ ಸಂದರ್ಭದಲ್ಲಿಯೇ ಪಿಎಸಿ ಈ ನಿರ್ಧಾರ ಕೈಗೊಂಡಿದೆ.

ಈ ಕುರಿತು ಮಾಹಿತಿ ನೀಡಿದ ಪಿಎಸಿ ಅಧ್ಯಕ್ಷ ಕೆ.ಸಿ.ವೇಣುಗೋಪಾಲ್, ವಿವಿಧ ನಿಯಂತ್ರಕ ಸಂಸ್ಥೆಗಳ ಸಾಧನೆ ಕುರಿತು ಪರಾಮರ್ಶೆ ನಡೆಸುವುದು ಸೇರಿದಂತೆ ಹಲವು ವಿಷಯದ ಬಗ್ಗೆ ಪರಿಶೀಲನೆ ನಡೆಸುವಂತೆ ಸಮಿತಿ ಸದಸ್ಯರು ಸಲಹೆ ನೀಡಿದ್ದಾರೆ ಎಂದರು.

‘ತಮ್ಮ ವಿರುದ್ಧದ ಆರೋಪಗಳಿಗೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರಿಗೆ ಸಮನ್ಸ್ ಜಾರಿ ಮಾಡುವ ಕುರಿತಂತೆ ಸಮಿತಿ ನಿರ್ಧರಿಸಲಿದೆ’ ಎಂದು ಪ್ರಶ್ನೆಯೊಂದಕ್ಕೆ ವೇಣುಗೋಪಾಲ್ ಉತ್ತರಿಸಿದ್ದಾರೆ.

ಬ್ಯಾಂಕಿಂಗ್ ಮತ್ತು ವಿಮೆ ಕ್ಷೇತ್ರದಲ್ಲಿ ಸುಧಾರಣೆಗಳು, ಕೇಂದ್ರ ಪುರಸ್ಕೃತ ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಪರಿಶೀಲನೆ, ಇಂಧನ ಕ್ಷೇತ್ರಕ್ಕೆ ಸಂಬಂಧಿಸಿದ ನೀತಿ ನಿರೂಪಣೆ, ಸಾರ್ವಜನಿಕ ಮೂಲಸೌಕರ್ಯ ಹಾಗೂ ಸೌಲಭ್ಯಗಳಿಗೆ ಶುಲ್ಕ ವಿಧಿಸುವ ಕುರಿತಂತೆಯೂ ಪರಾಮರ್ಶೆ ನಡೆಸಲು ಸಮಿತಿ ತೀರ್ಮಾನಿಸಿದೆ ಎಂದು ಹೇಳಿದ್ದಾರೆ.

ಸೆಬಿ ಅಧ್ಯಕ್ಷೆ ವಿರುದ್ಧ ಕಾಂಗ್ರೆಸ್ ಮತ್ತೊಂದು ಆರೋಪ

ನವದೆಹಲಿ (ಪಿಟಿಐ): ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ವಿರುದ್ಧ ಕಾಂಗ್ರೆಸ್, ‘ಹಿತಾಸಕ್ತಿ ಸಂಘರ್ಷ’ದ ಮತ್ತೊಂದು ಆರೋಪ ಮಾಡಿದೆ.

ಮಾಧವಿ ಅವರು ಸೆಬಿಯ ಪೂರ್ಣಾವಧಿ ಸದಸ್ಯರಾಗಿ ಆಯ್ಕೆಯಾದ ಬಳಿಕವೂ ಕಂಪನಿಯೊಂದರಿಂದ ಬಾಡಿಗೆ ರೂಪದಲ್ಲಿ ಆದಾಯ ಪಡೆದುಕೊಂಡಿದ್ದಾರೆ ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಶುಕ್ರವಾರ ಹೇಳಿದ್ದಾರೆ.

‘2018 ರಿಂದ 2024ರವರೆಗೆ ಮಾಧವಿ ಅವರು ‘ಕರೋಲ್ ಇನ್ಫೊ ಸರ್ವಿಸಸ್ ಲಿಮಿಟೆಡ್’ ಎಂಬ ಕಂಪನಿಯಿಂದ ಬಾಡಿಗೆ ಆದಾಯದ ರೂಪದಲ್ಲಿ ₹2.16 ಕೋಟಿ ಪಡೆದುಕೊಂಡಿದ್ದಾರೆ. ಈ ಕಂಪನಿಯು ವೋಕ್‌ಹಾಟ್ ಲಿಮಿಟೆಡ್‌ನ ಅಂಗಸಂಸ್ಥೆ ಆಗಿದೆ. ವೋಕ್‌ಹಾಟ್ ಲಿಮಿಟೆಡ್ ವಿರುದ್ಧ ಇನ್‌ಸೈಡರ್ ಟ್ರೇಡಿಂಗ್ ಸೇರಿದಂತೆ ವಿವಿಧ ಪ್ರಕರಣಗಳ ಕುರಿತು ಸೆಬಿ ತನಿಖೆ ನಡೆಸುತ್ತಿದೆ’ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸೆಬಿಯಿಂದ ತನಿಖೆ ಎದುರಿಸುತ್ತಿರುವ ಕಂಪನಿಯಿಂದ ಮಾಧವಿ ಅವರು ಬಾಡಿಗೆ ಪಡೆದಿರುವುದು ‘ಹಿತಾಸಕ್ತಿ ಸಂಘರ್ಷ’ಕ್ಕೆ ಕಾರಣವಾಗಿರುವ ಭ್ರಷ್ಟಾಚಾರ ಪ್ರಕರಣ ಆಗಿದೆ. ಮಾತ್ರವಲ್ಲ, ಸೆಬಿ ನಿಯಮಗಳ ಉಲ್ಲಂಘನೆಯೂ ಹೌದು ಎಂದರು.




ಮಾಧವಿ ಪುರಿ ಬುಚ್

> ತಮ್ಮ ವಿರುದ್ಧ ಕೇಳಿಬಂದಿರುವ ಆರೋಪಗಳನ್ನು ಸುಳ್ಳು ಎಂದು ಸಾಬೀತುಪಡಿಸುವಂತೆ ಸೆಬಿ ಅಧ್ಯಕ್ಷರಿಗೆ ಸವಾಲು ಹಾಕುತ್ತೇನೆ
>
> **ಪವನ್ ಖೇರಾ**
> ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ

ಪ್ರಧಾನಿ ಮೌನ ಏಕೆ?: ಸೆಬಿ ಅಧ್ಯಕ್ಷೆ ವಿರುದ್ಧ ಹಲವು ಆರೋಪಗಳು ಕೇಳಿಬಂದ ಬಳಿಕವೂ ಪ್ರಧಾನಿ ಅವರು ಮೌನ ವಹಿಸಿರುವುದು ಏಕೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಪ್ರಶ್ನಿಸಿದ್ದಾರೆ.

‘ಸೆಬಿಯ ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಕುಸಿದಿರುವುದನ್ನು ತೋರಿಸಲು ಇನ್ನೆಷ್ಟು ಪುರಾವೆಗಳು ಬೇಕು ಎಂಬ ಪ್ರಶ್ನೆಯನ್ನು ಪ್ರಧಾನಿ ಅವರಿಗೆ ಕೇಳಬೇಕಾಗಿದೆ’ ಎಂದಿದ್ದಾರೆ.

ಷೇರುಪೇಟೆ ವಹಿವಾಟು 1,017



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,145
ಇಂದಿನ ಅಂತ್ಯ	24,852
▼	293
ದಿನದ ಕನಿಷ್ಠ	24,801

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹226
ಆರ್‌ಎಸ್‌ಎಸ್-5	₹220
ಗುಡ್ ಲಾಟ್	₹206

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹522

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹301-525
ದ್ವಿತಳಿ (ಬಿ.ವಿ)	₹347-672

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1580)
ಸೋಯಾ (ರಿಫೈನ್ಡ್)	₹990 (990)
ಸೂರ್ಯಕಾಂತಿ (ರಿಫೈನ್ಡ್)	₹995 (995)
ಪಾಮೋಲಿನ್	₹985 (985)

ಸೆನ್ಸೆಕ್ಸ್ 1,017 ಅಂಶ ಇಳಿಕೆ

ಮುಂಬೈ (ಪಿಟಿಐ/ಎಎಫ್‌ಪಿ): ವಿದೇಶಿ ಬಂಡವಾಳ ಹೊರಹರಿವು, ಐ.ಟಿ, ತೈಲ ಮತ್ತು ಅನಿಲ ಹಾಗೂ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1ಕ್ಕಿಂತ ಹೆಚ್ಚು ಕುಸಿತ ಕಂಡಿವೆ.

ಷೇರು ಸೂಚ್ಯಂಕದ ಇಳಿಕೆಯಿಂದ ಹೂಡಿಕೆದಾರರು ಸಂಪತ್ತು ಒಂದೇ ದಿನ ₹5.49 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹460 ಲಕ್ಷ ಕೋಟಿಯಾಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 1,017 ಅಂಶ (ಶೇ 1.24) ಇಳಿಕೆಯಾಗಿ, 81,183ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 1,219 ಅಂಶ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 292 ಅಂಶ (ಶೇ 1.17) ಕಡಿಮೆಯಾಗಿ, 24,852ಕ್ಕೆ ಕೊನೆಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿ ಎಸ್‌ಬಿಐ ಶೇ 4ರಷ್ಟು ಷೇರಿನ ಮೌಲ್ಯ ಇಳಿದಿದೆ. ಎನ್‌ಟಿಪಿಸಿ, ಐಸಿಐಸಿಐ ಬ್ಯಾಂಕ್, ಎಚ್‌ಸಿಎಲ್ ಟೆಕ್ನಾಲಜೀಸ್, ರಿಲಯನ್ಸ್ ಇಂಡಸ್ಟ್ರೀಸ್, ಎಕ್ಸಿಸ್ ಬ್ಯಾಂಕ್ ಮತ್ತು ಐಟಿಸಿ ಷೇರಿನ ಮೌಲ್ಯ ಇಳಿಕೆಯಾಗಿದೆ. ಬಜಾಜ್ ಫೈನಾನ್ಸ್, ಏಷ್ಯನ್ ಪೇಂಟ್ಸ್, ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡವು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರ ನಡೆದ ವಹಿವಾಟಿನಲ್ಲಿ ₹688 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಜಾಗತಿಕ ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರೆಲ್‌ಗೆ ಶೇ 0.14ರಷ್ಟು ಏರಿಕೆಯಾಗಿ, 72.99 ಡಾಲರ್‌ಗೆ (₹6,110) ತಲುಪಿದೆ.

ಅಮೆರಿಕದ ಉದ್ಯೋಗ ದತ್ತಾಂಶದ ಕುರಿತು ಹೂಡಿಕೆದಾರರಲ್ಲಿ ಉಂಟಾದ ಚಂಚಲತೆಯಿಂದ ಲಾಭ ಗಳಿಕೆಗಾಗಿ ಷೇರುಗಳ ಮಾರಾಟಕ್ಕೆ ಮುಂದಾದರು. ಇದರಿಂದ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ. ಇದು ದೇಶದ ಷೇರುಪೇಟೆಯ ಮೇಲೂ ಪರಿಣಾಮ ಬೀರಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ನಿರುದ್ಯೋಗ ದರ ಇಳಿಕೆ: ಅಮೆರಿಕದಲ್ಲಿ ನಿರುದ್ಯೋಗ ದರ ಶೇ 4.3 ರಿಂದ ಶೇ 4.2ಕ್ಕೆ ಇಳಿದಿದೆ. ಆಗಸ್ಟ್ ತಿಂಗಳಲ್ಲಿ 1.42 ಲಕ್ಷ ಉದ್ಯೋಗ ಸೇರ್ಪಡೆಯಾಗಿವೆ. ಇದು ಜುಲೈನಲ್ಲಿ 89 ಸಾವಿರದಷ್ಟಿತ್ತು ಎಂದು ಅಮೆರಿಕದ ಕಾರ್ಮಿಕ ಇಲಾಖೆ ತಿಳಿಸಿದೆ. ಆರ್ಥಿಕ ತಜ್ಞರು ಉದ್ಯೋಗ ಪ್ರಮಾಣವು 1.65 ಲಕ್ಷಕ್ಕೆ ಏರಿಕೆಯಾಗಬಹುದು ಎಂದು ನಿರೀಕ್ಷಿಸಿದ್ದರು. ಆದರೆ ಇದು ಅದಕ್ಕಿಂತ ಇದು ಕಡಿಮೆಯಾಗಿದೆ.

ಗಳಿಕೆ ಕಂಡ ಕಂಪನಿಗಳು

1.13%	ಏಷ್ಯನ್ ಪೇಂಟ್ಸ್
1.03%	ಬಜಾಜ್ ಫೈನಾನ್ಸ್
0.79%	ಜೆಎಸ್‌ಡಬ್ಲ್ಯು ಸ್ಟೀಲ್
0.08%	ಹಿಂದುಸ್ತಾನ್ ಯೂನಿಲಿವರ್

ಇಳಿಕೆ ಕಂಡ ಕಂಪನಿಗಳು

4.40%	ಎಸ್‌ಬಿಐಎನ್
2.09%	ಐಸಿಐಸಿಐ ಬ್ಯಾಂಕ್
2.08%	ಎನ್‌ಟಿಪಿಸಿ
1.95%	ಎಚ್‌ಸಿಎಲ್ ಟೆಕ್

₹5.49 ಲಕ್ಷ ಕೋಟಿ ಹೂಡಿಕೆದಾರರ ಸಂಪತ್ತು ಇಳಿಕೆ

ವಿನಿಮಯ ದರ

$ ಡಾಲರ್	83.95
£ ಪೌಂಡ್	110.58
€ ಯುರೊ	93.28
¥ ಯೆನ್ (100ಕ್ಕೆ)	59

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹16900
ಎಸಿ	₹10665
ಆರ್‌ಪಿ	₹20000
ಆರ್‌ಸಿ	₹10240

ಕೆ.ಜಿ ದಾಳಿಂಬೆ ಬೆಲೆ ₹220 • ನಾಲ್ಕೈದು ವರ್ಷದಲ್ಲೇ ಗರಿಷ್ಠ ಬೆಲೆ

ದಾಳಿಂಬೆಗೆ ಬಂಪರ್ ಬೆಲೆ

• ಎಂ.ಮುನಿನಾರಾಯಣ

ವಿಜಯಪುರ (ದೇವನಹಳ್ಳಿ): ಅಂತರ್ಜಲ ಮಟ್ಟ ಕುಸಿತ, ನೀರಿನ ಅಭಾವದ ನಡುವೆಯೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬೆಳೆಗಾರರು ಬೆಳೆದಿರುವ ದಾಳಿಂಬೆಗೆ ಉತ್ತಮ ಬೆಲೆ ಕುದುರಿದೆ.

15 ದಿನದ ಹಿಂದೆ ₹120ರಿಂದ ₹150 ಇದ್ದ ಒಂದು ಕೆ.ಜಿ ದಾಳಿಂಬೆ ಬೆಲೆ ಈಗ ₹220ಕ್ಕೆ ಏರಿಕೆಯಾಗಿದೆ. ನಾಲ್ಕೈದು ವರ್ಷಗಳಲ್ಲಿ ದಾಳಿಂಬೆಗೆ ದೊರೆತ ಉತ್ತಮ ಬೆಲೆ ಇದಾಗಿದೆ.

ಕೋಲ್ಕತ್ತದ ಸಗಟು ವ್ಯಾಪಾರಿಗಳು ನೇರವಾಗಿ ರೈತರ ತೋಟಗಳಿಗೆ ಬಂದು ಮುಂಗಡ ಹಣ ಕೊಟ್ಟು ಇಡೀ ತೋಟದ ದಾಳಿಂಬೆ ಖರೀದಿಸುತ್ತಿದ್ದಾರೆ. ಕೋಲ್ಕತ್ತ ಸಗಟು ವರ್ತಕರು ₹200ಕ್ಕೆ ಕೆ.ಜಿಯಂತೆ ದಾಳಿಂಬೆ ಖರೀದಿಸುತ್ತಿದ್ದಾರೆ. ನಾಲ್ಕೈದು ವರ್ಷಗಳಲ್ಲಿ ಅನುಭವಿಸಿದ್ದ ನಷ್ಟ ಸರಿದೂಗಿಸಿಕೊಳ್ಳಲು ಈ ಬಾರಿ ಕಾಲ ಕೂಡಿ ಬಂದಿದೆ ಎನ್ನುತ್ತಾರೆ ದಾಳಿಂಬೆ ಬೆಳೆಗಾರರು.

ನೀರಿಗಾಗಿ ಕೊಳವೆಬಾವಿ ಅವಲಂಬಿಸಿರುವ ರೈತರು ತರಕಾರಿ, ಹೂವು, ದ್ರಾಕ್ಷಿ ಮುಂತಾದ ತೋಟಗಾರಿಕಾ ಬೆಳೆ ಬೆಳೆಯುತ್ತಿದ್ದರು. ಇತ್ತೀಚೆಗೆ ದಾಳಿಂಬೆ ಮತ್ತು ಸೇಬು ಬೆಳೆಯಲು ಶುರು ಮಾಡಿದ್ದಾರೆ. ದೇವನಹಳ್ಳಿ ತಾಲ್ಲೂಕಿನಲ್ಲಿ ಒಟ್ಟು 488 ಹೆಕ್ಟೇರ್ ಪ್ರದೇಶದಲ್ಲಿ ರೈತರು ದಾಳಿಂಬೆ ಬೆಳೆದಿದ್ದಾರೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಕೆ.ಜಿ ದಾಳಿಂಬೆ ₹230 ರಿಂದ ₹250ಗೆ ಮಾರಾಟವಾಗುತ್ತಿದೆ. ಸಾಲು ಸಾಲು ಹಬ್ಬದ ಹಿನ್ನೆಲೆಯಲ್ಲಿ ದಾಳಿಂಬೆ ಇನ್ನಷ್ಟು ದುಬಾರಿಯಾಗುವ ಸಾಧ್ಯತೆ ಇದೆ ಎನ್ನುತ್ತಾರೆ ವರ್ತಕರು.

ಕಳೆದ ನಾಲ್ಕು ವರ್ಷದಿಂದ ದಾಳಿಂಬೆ ಬೆಳೆಗಾರರು ಕೈ ಸುಟ್ಟುಕೊಂಡಿದ್ದರು. ಈ ಬಾರಿ ಕಟಾವಿಗೆ ಬಂದಿರುವ ತೋಟಗಳ ಮಾಲೀಕರಿಗೆ ಕೈತುಂಬಾ ಹಣ ಸಿಗುತ್ತಿದೆ. ಸಗಟು ವರ್ತಕರು ನೇರವಾಗಿ ತೋಟಗಳಿಗೆ ಬಂದು ಮುಂಗಡ ನೀಡಿ ಕಟಾವು ಮಾಡಿಕೊಂಡು ಹೋಗುತ್ತಿದ್ದಾರೆ. ಮಧ್ಯವರ್ತಿಗಳ ಹಂಗಿಲ್ಲದೆ ನೇರವಾಗಿ ವರ್ತಕರಿಗೆ ದಾಳಿಂಬೆ ಮಾರಾಟ ಮಾಡುತ್ತಿದ್ದೇವೆ ಎನ್ನುತ್ತಾರೆ ದಾಳಿಂಬೆ ಬೆಳೆಗಾರರಾದ ವೆಂಕಟರಮಣಪ್ಪ, ದೇವರಾಜಪ್ಪ ಮತ್ತು ನಂಜೇಗೌಡ.

ನಮ್ಮ ಭಾಗದಲ್ಲಿ ಬೆಳೆಯುವ ದಾಳಿಂಬೆಗೆ ಕೋಲ್ಕತ್ತ, ಮಹಾರಾಷ್ಟ್ರ, ನವದೆಹಲಿ ಸೇರಿದಂತೆ ದೇಶದ ಹಲವಾರು ಭಾಗಗಳಲ್ಲಿ ಮತ್ತು ಬಾಂಗ್ಲಾದೇಶದಲ್ಲಿ ಹೆಚ್ಚು ಬೇಡಿಕೆಯಿದೆ. ಪ್ರಸ್ತುತ ಕಟಾವಿಗೆ ಬಂದಿರುವ ಬೆಳೆಯ ಪ್ರಮಾಣ ಕಡಿಮೆ ಆಗಿರುವ ಕಾರಣ ಬೇಡಿಕೆ ಜಾಸ್ತಿಯಾಗಿದೆ. ಇದೇ ಬೆಲೆ ಇದ್ದರೆ ರೈತರಿಗೆ ತುಂಬಾ ಅನುಕೂಲವಾಗಲಿದೆ ಎಂದು ರೈತ ಆಂಜಿನಪ್ಪ ಹೇಳುತ್ತಾರೆ.


ವಿಜಯಪುರ ಹೋಬಳಿ ಹಾರೋಹಳ್ಳಿ ತೋಟವೊಂದರಲ್ಲಿ ಬೆಳೆದಿರುವ ದಾಳಿಂಬೆ

ದೇವನಹಳ್ಳಿ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿನ ರೈತರಿಗೆ ದಾಳಿಂಬೆ ಬೆಳೆ ನಾಟಿಗೆ ನರೇಗಾ ಯೋಜನೆ ಅಡಿ ಸಹಾಯಧನ ಒದಗಿಸಲಾಗಿದೆ

ಆದರ್ಶ್, ತೋಟಗಾರಿಕೆ ಇಲಾಖೆಯ ಅಧಿಕಾರಿ

ಅಡಿಕೆಗೆ ಎಲೆಚುಕ್ಕಿ ರೋಗ: ಪ್ರಸ್ತಾವ ಸಲ್ಲಿಸಿ ವರ್ಷವಾಯಿತು

ಇನ್ನೂ ನಿರ್ಧಾರವಾಗದ ನಿರ್ವಹಣಾ ನಿಧಿ 'ಪಾಲು'

• ರಾಜೇಂದ್ರ ಹೆಗಡೆ

ಶಿರಸಿ: ಎಲೆಚುಕ್ಕಿ ಬಾಧೆಯಿಂದ ಕಂಗೆಟ್ಟ ಅಡಿಕೆ ಬೆಳೆಗಾರರಿಗೆ ನಿರ್ವಹಣಾ ಸಹಾಯಧನ ಒದಗಿಸಲು ತಜ್ಞರ ಸಮಿತಿ ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರದ ಅನುಮೋದನೆ ಸಿಕ್ಕಿದೆ. ಆದರೆ, ರಾಜ್ಯ ಸರ್ಕಾರದ 'ಕೊಡುಗೆ' ಇನ್ನೂ ನಿರ್ಧಾರದ ಹಂತದಲ್ಲೇ ಇರುವುದರಿಂದ ಬೆಳೆಗಾರರು ಆರ್ಥಿಕ ನೆರವಿಗೆ ಕಾಯುವಂತಾಗಿದೆ.

ರಾಜ್ಯದ ಅಡಿಕೆ ಬೆಳೆಯುವ ಪ್ರಮುಖ ಏಳು ಜಿಲ್ಲೆಗಳಲ್ಲಿ 2023-24ನೇ ಸಾಲಿನಲ್ಲಿ 53,977.04 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಎಲೆಚುಕ್ಕಿ ರೋಗ ಬಾಧೆಯಿಂದ ಹಾನಿಯಾಗಿತ್ತು. ರೋಗದ ತೀವ್ರತೆ ಅರಿತ ಬೆಳೆಗಾರರು ಸೂಕ್ತ ಪರಿಹಾರ ಒದಗಿಸಲು ಸರ್ಕಾರಕ್ಕೆ ಕೋರಿದ್ದರು.

ತೋಟಗಾರಿಕಾ ಇಲಾಖೆ ಅಧಿಕಾರಿಗಳು ಮತ್ತು ಸರ್ಕಾರ ನೇಮಿಸಿದ್ದ ತಜ್ಞರ ಸಮಿತಿ ಜಂಟಿಯಾಗಿ ಎಲೆಚುಕ್ಕಿ ಬಾಧಿತ ತೋಟಗಳಿಗೆ ಭೇಟಿ ನೀಡಿ ಅಧ್ಯಯನ ವರದಿ ಸಿದ್ಧಪಡಿಸಿತ್ತು. ರೋಗ ಬಾಧಿತ ಅಡಿಕೆ ಮರಗಳಿಗೆ ರಾಸಾಯನಿಕ ಸಿಂಪಡಣೆ, ನಿಯಂತ್ರಣ ಕುರಿತು ಪ್ರಚಾರ ಕಾರ್ಯಾಗಾರ, ಪೋಷಕಾಂಶ ನಿರ್ವಹಣೆ ಹಾಗೂ ಮತ್ತಿತರ ಉದ್ದೇಶಕ್ಕೆ ₹225 ಕೋಟಿಗೂ ಅಧಿಕ ಮೊತ್ತ ಬಿಡುಗಡೆ ಮಾಡುವಂತೆ 2023ರ ಸೆಪ್ಟೆಂಬರ್‌ನಲ್ಲಿ ಕೇಂದ್ರ ಕೃಷಿ ಸಚಿವಾಲಯ ಮತ್ತು ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಆದರೆ, ಈ ಪ್ರಕ್ರಿಯೆ ನಡೆದು ವರ್ಷವಾದರೂ ನಿರ್ವಹಣಾ ಪ್ಯಾಕೇಜ್ ಘೋಷಣೆ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ.

'ಕೇಂದ್ರ ಸರ್ಕಾರದ ಯಾವುದೇ ಯೋಜನೆ ರಾಜ್ಯದಲ್ಲಿ ಅನುಷ್ಠಾನ ಆಗಬೇಕಿದ್ದರೆ, ರಾಜ್ಯ ಸರ್ಕಾರದ ಸಹಭಾಗಿತ್ವ ಕಡ್ಡಾಯ. ಪ್ರಸ್ತುತ ಅಡಿಕೆ ಎಲೆಚುಕ್ಕಿ ನಿರ್ವಹಣಾ ಸಹಾಯಧನದ ಪ್ರಸ್ತಾವಕ್ಕೂ ಈ ನಿಯಮ ಅನ್ವಯ. ಕೇಂದ್ರವು ಶೇ 60ರಷ್ಟು ಸಹಾಯಧನದ ಮೊತ್ತ ನೀಡಲು ಈ ವರ್ಷದ ಜೂನ್ ತಿಂಗಳಲ್ಲೇ ಹಸಿರು ನಿಶಾನೆ ನೀಡಿದೆ. ಆದರೆ ಉಳಿದ ಶೇ 40ರಷ್ಟು ಮೊತ್ತ ರಾಜ್ಯ ಸರ್ಕಾರ ಭರಿಸಲು ಇನ್ನೂ ಅನುಮೋದನೆ ನೀಡಿಲ್ಲ. ಇದು ಪ್ಯಾಕೇಜ್ ಬಿಡುಗಡೆ ವಿಳಂಬವಾಗಲು ಕಾರಣವಾಗುತ್ತಿದೆ' ಎಂದು ತಜ್ಞರ ಸಮಿತಿ ಸದಸ್ಯರೊಬ್ಬರು ತಿಳಿಸಿದರು.


ಎಲೆಚುಕ್ಕೆ ರೋಗ ಬಾಧಿಸಿರುವ ಅಡಿಕೆ ಮರಗಳ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿರುವುದು

ಎಲೆಚುಕ್ಕಿ ಬಾಧಿತ ಜಿಲ್ಲೆ ಹಾಗೂ ವಿಸ್ತೀರ್ಣ

ಜಿಲ್ಲೆ	ಹಾನಿಯಾದ ಪ್ರದೇಶ (ಹೆಕ್ಟೇರ್‌ಗಳಲ್ಲಿ)
ಚಿಕ್ಕಮಗಳೂರು	28,788
ಶಿವಮೊಗ್ಗ	11,950
ಉತ್ತರ ಕನ್ನಡ	8,604
ಕೊಡಗು	529
ಉಡುಪಿ	123

ನಿರ್ವಹಣಾ ಧನ ಲಭಿಸಿದರೆ ರೋಗಪೀಡಿತ ಎಲೆ ಕತ್ತರಿಸಿ ಸುಡಲು, ರೋಗನಾಶಕ ಖರೀದಿಸಿ, ಸಿಂಪಡಿಸಲು ಅನುಕೂಲ ಆಗುತಿತ್ತು. ಗೊಬ್ಬರ ಖರೀದಿಗೂ ಸಹಾಯ ಆಗುತಿತ್ತು

ನಾಗರಾಜ ನಾಯ್ಕ, ಅಡಿಕೆ ಬೆಳೆಗಾರ

₹ 36 ಕೋಟಿ ನಿರ್ವಹಣಾ ನಿಧಿ ನೀಡಲು ಉತ್ತರ ಕನ್ನಡ ಜಿಲ್ಲೆಯಿಂದ ವರದಿ ನೀಡಲಾಗಿದೆ. ಸರ್ಕಾರದಿಂದ ಅಧಿಕೃತ ಆದೇಶ ಬರುವವರೆಗೆ ಬೆಳೆಗಾರರು ಕಾಯುವುದು ಅನಿವಾರ್ಯ

ಬಿ.ಪಿ.ಸತೀಶ, ಉಪನಿರ್ದೇಶಕ, ತೋಟಗಾರಿಕಾ ಇಲಾಖೆ

ರಾಜ್ಯದ 2 ಯೋಜನೆಗಳ ಮೌಲ್ಯಮಾಪನ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಮಂತ್ರಿ ಗತಿಶಕ್ತಿ ಉಪಕ್ರಮದ ಅಡಿಯಲ್ಲಿ ನೆಟ್‌ವರ್ಕ್ ಪ್ಲಾನಿಂಗ್ ಗ್ರೂಪ್‌ನ (ಎನ್‌ಪಿಜಿ) 78ನೇ ಸಭೆ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜಿಸುವ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ರಾಜೀವ್ ಸಿಂಗ್ ಠಾಕೂರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆಯಿತು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಪ್ರಸ್ತಾಪಿಸಿದ ರಸ್ತೆ ಮೂಲಸೌಕರ್ಯದ 18 ಯೋಜನೆಗಳ ಮೌಲ್ಯಮಾಪನ ನಡೆಸಿತು. ಇದರಲ್ಲಿ ಬೆಳಗಾವಿ ರಿಂಗ್ ರಸ್ತೆ (75.39 ಕಿ.ಮೀ) ಹಾಗೂ ತುಮಕೂರು ಬೈಪಾಸ್ ರಸ್ತೆ ಯೋಜನೆಗಳು ಸೇರಿವೆ.

ಈ ಯೋಜನೆಗಳು ವಿವಿಧ ಸಾರಿಗೆ ವಿಧಾನಗಳನ್ನು ಸಂಯೋಜಿಸುವ ಮೂಲಕ ಮತ್ತು ಗಣನೀಯ ಸಾಮಾಜಿಕ-ಆರ್ಥಿಕ ಪ್ರಯೋಜನಗಳನ್ನು ಒದಗಿಸುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 06-09-2024

ಜಾವಾ 70/80(ಹೊಸ)	11900-12000
ಜಾವಾ 80/90(ಹೊಸ)	11300-11400
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1590)
ಒಂದು ವಾರದ ಡೆಲಿವರಿ	1595 (1585)
ಪಾಮ್ ವಾರದ ಡೆಲಿವರಿ	983 (983)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (935)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹71,450 (71,500)

ಬೆಳ್ಳಿ ಕೆ.ಜಿ ₹83,200 (83,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುಧಾ, ಮಯೂರ ಓದಿರಿ

ನೇಪಾಳ: ಟಿಕ್‌ಟಾಕ್ ನಿಷೇಧ ತೆರವು

ಕಠ್ಮಂಡು (ಪಿಟಿಐ): ಟಿಕ್‌ಟಾಕ್ ಮೇಲೆ ಹೇರಿದ್ದ ನಿಷೇಧವನ್ನು ನೇಪಾಳ ಸರ್ಕಾರ ಶುಕ್ರವಾರ ಹಿಂಪಡೆದಿದೆ. ಸಮಾಜದಲ್ಲಿನ ಸೌಹಾರ್ದವನ್ನು ಹಾಳುಗೆಡುವುತ್ತದೆ ಎನ್ನುವ ಕಾರಣ ನೀಡಿ ಸರ್ಕಾರವು ಕಳೆದ ವರ್ಷದ ನವೆಂಬರ್ 12ರಂದು ಟಿಕ್‌ಟಾಕ್‌ಗೆ ನಿಷೇಧ ಹೇರಿತ್ತು.

ಸರ್ಕಾರದ ಈ ಕ್ರಮಕ್ಕೆ ಸಾರ್ವಜನಿಕರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು. ಆಗಸ್ಟ್ 22ರಂದು ನಡೆದಿದ್ದ ಸಂಪುಟ ಸಭೆಯಲ್ಲಿ ನಿಷೇಧವನ್ನು ಹಿಂಪಡೆಯಬೇಕು ಎಂದು ನಿರ್ಧರಿಸಲಾಗಿತ್ತು. ಅದರಿಂತೆ ದೂರಸಂಪರ್ಕ ಸಚಿವಾಲಯವು ಶುಕ್ರವಾರ ನಿಷೇಧ ತೆರವು ಮಾಡಿ ಅಧಿಕೃತ ಸೂಚನೆ ಹೊರಹಾಕಿದೆ.

ಸುದ್ದಿ 2 ನಿಮಿಷ

ಎ.ಐ ಪ್ರಭಾವಿಗಳ ಪಟ್ಟಿಯಲ್ಲಿ ಅಶ್ವಿನಿ ವೈಷ್ಣವ್, ನಿಲೇಕಣಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಜನಪ್ರಿಯ ನಿಯತಕಾಲಿಕ ಟೈಮ್ ಬಿಡುಗಡೆ ಮಾಡಿರುವ 'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಭವಿಷ್ಯದ ಮೇಲೆ ಪ್ರಭಾವ ಬೀರಿದ ಜಗತ್ತಿನ 100 ವ್ಯಕ್ತಿಗಳು- 2024ರ ಪಟ್ಟಿ'ಯಲ್ಲಿ ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, ಇನ್ಫೊಸಿಸ್‌ನ ಸಹ ಸಂಸ್ಥಾಪಕ ನಂದನ್ ನಿಲೇಕಣಿ ಮತ್ತು ನಟ ಅನಿಲ್ ಕಪೂರ್ ಸ್ಥಾನ ಪಡೆದಿದ್ದಾರೆ.

ಗುರುವಾರ ಬಿಡುಗಡೆಯಾದ ಈ ಪಟ್ಟಿಯಲ್ಲಿ 15 ಭಾರತೀಯ ಮೂಲದವರಿದ್ದಾರೆ. ಗೂಗಲ್‌ನ ಸುಂದರ್ ಪಿಚೈ, ಮೈಕ್ರೊಸಾಫ್ಟ್‌ನ ಸತ್ಯ ನಾದೆಲ್ಲ ಅದರಲ್ಲಿ ಸೇರಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಎ.ಐ ವ್ಯವಸ್ಥೆಗೆ ಅಗತ್ಯವಿರುವ ಸೆಮಿಕಂಡಕ್ಟರ್‌ಗಳ ತಯಾರಿಕಾ ಕ್ಷೇತ್ರದಲ್ಲಿ ಭಾರತ ಕೂಡ ಅಗ್ರ ಐದು ಮುಂಚೂಣಿ ರಾಷ್ಟ್ರಗಳಲ್ಲಿ ಒಂದಾಗಲಿದೆ. ದೇಶ ಆ ನಿಟ್ಟಿನಲ್ಲಿ ದಾಪುಗಾಲು ಹಾಕುವಲ್ಲಿ ಅಶ್ವಿನಿ ವೈಷ್ಣವ್ ಅವರ ಪಾತ್ರ ಮಹತ್ವದ್ದಾಗಿದೆ ಎಂದು ಪತ್ರಿಕೆ ಅಭಿಪ್ರಾಯಪಟ್ಟಿದೆ.

ಎ.ಐ.ನ ಅನಧಿಕೃತ ಬಳಕೆ ವಿರುದ್ಧದ ಕಾನೂನು ಪ್ರಕರಣದಲ್ಲಿ ಗೆಲುವು ಪಡೆದಿದ್ದಕ್ಕಾಗಿ ಅನಿಲ್ ಕಪೂರ್, ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿದ್ದಕ್ಕಾಗಿ ನಿಲೇಕಣಿ ಅವರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಪರ್ಪ್ಲೆಕ್ಸಿಟಿಯ ಅರವಿಂದ್ ಶ್ರೀನಿವಾಸ್, 'ಎ.ಐ ನೌ' ಕಂಪನಿಯ ಅಂಬಾ ಕಾಕ್, ಅಮೆರಿಕ ವಿಜ್ಞಾನ ಮತ್ತು ತಂತ್ರಜ್ಞಾನ ನೀತಿ ವಿಭಾಗದ ನಿರ್ದೇಶಕಿ ಆರತಿ ಪ್ರಭಾಕರ್, ಕಲೆಕ್ಟಿವ್ ಇಂಟೆಲಿಜೆನ್ಸ್‌ನ ದಿವ್ಯಾ ಸಿದ್ಧಾರ್ಥ್ ಅವರ ಹೆಸರೂ ಪಟ್ಟಿಯಲ್ಲಿದೆ.



ವಿದೇಶಿ ವಿನಿಮಯ ಸಂಗ್ರಹ ಏರಿಕೆ

ಮುಂಬೈ (ಪಿಟಿಐ): ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಆಗಸ್ಟ್‌ಗೆ 30ಕ್ಕೆ ಕೊನೆಗೊಂಡ ವಾರದಲ್ಲಿ ₹19,300 ಕೋಟಿಯಷ್ಟು ಹೆಚ್ಚಳವಾಗಿದೆ.

ಒಟ್ಟು ಮೀಸಲು ಸಂಗ್ರಹವು ₹57.42 ಲಕ್ಷ ಕೋಟಿಗೆ ತಲುಪಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಶುಕ್ರವಾರ ತಿಳಿಸಿದೆ.

ವಿದೇಶಿ ಕರೆನ್ಸಿಗಳ ಸಂಗ್ರಹವು ₹12,466 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹50.28 ಲಕ್ಷ ಕೋಟಿ ಆಗಿದೆ.

ಚಿನ್ನದ ಮೀಸಲು ಸಂಗ್ರಹವು ₹7,236 ಕೋಟಿ ಏರಿಕೆಯಾಗಿದೆ. ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಮೀಸಲು ₹75 ಕೋಟಿ ಏರಿಕೆಯಾಗಿ ₹1.55 ಲಕ್ಷ ಕೋಟಿಗೆ ತಲುಪಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಗ್ರಹವು ₹486 ಕೋಟಿ ಹೆಚ್ಚಳವಾಗಿದ್ದು, ಒಟ್ಟು ಸಂಗ್ರಹ ಮೊತ್ತ ₹38,801 ಕೋಟಿಗೆ ಮುಟ್ಟಿದೆ ಎಂದು ತಿಳಿಸಿದೆ.

ಬೆಳ್ಳಿ ದರ ಕೆ.ಜಿಗೆ ₹1,200 ಏರಿಕೆ

ನವದೆಹಲಿ/ಬೆಂಗಳೂರು (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆಯಾಗಿದೆ.



ಬೆಳ್ಳಿ ಧಾರಣೆಯು ಕೆ.ಜಿಗೆ ₹1,200 ಏರಿಕೆಯಾಗಿದ್ದು, ₹85,800ಕ್ಕೆ ಮುಟ್ಟಿದೆ. 10 ಗ್ರಾಂ ಚಿನ್ನಕ್ಕೆ ₹100 ಹೆಚ್ಚಳವಾಗಿದ್ದು, ₹74,200ರಂತೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಲ್ಲಿ 10 ಗ್ರಾಂ ಚಿನ್ನವು ₹74,150 ಮತ್ತು ಕೆ.ಜಿ ಬೆಳ್ಳಿ ₹85,500ರಂತೆ ಮಾರಾಟವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,5468 ಡಾಲರ್ (ಅಂದಾಜು ₹2.13 ಲಕ್ಷ) ಮತ್ತು 29 ಡಾಲರ್‌ನಂತೆ (ಅಂದಾಜು ₹2,449) ಮಾರಾಟವಾಗಿದೆ.

ಏರಿಕೆಗೆ ಕಾರಣವೇನು?: ಸಾಗರೋತ್ತರ ಮಾರುಕಟ್ಟೆಯಲ್ಲಿ ಹಳದಿ ಲೋಹದ ಬೆಲೆ ಏರಿಕೆಯಾಗಿರುವುದು, ದೇಶೀಯ ಆಭರಣ ತಯಾರಕರು ಮತ್ತು ಮಾರಾಟಗಾರರಿಂದ ಬೇಡಿಕೆ ಹೆಚ್ಚಾಗಿರುವುದರಿಂದ ಚಿನ್ನದ ಧಾರಣೆಯು ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-47500
ಚಿತ್ರದುರ್ಗ	
ಅಪಿ	46600-47000
ಬೆಟ್ಟೆ	33100-33500
ಕೆಂಪುಗೋಟು	27100-27500
ರಾಶಿ	46100-46500
ಶಿವಮೊಗ್ಗ	
ಬೆಟ್ಟೆ	40019-54989
ಗೊರಬಲು	13338-32159
ರಾಶಿ	26638-48509
ಸರಕು	56299-84740
ಶಿರಸಿ	
ಬೆಟ್ಟೆ	25009-39208
ಬಿಳಿಗೋಟು	23066-29250
ಚಾಲಿ	33199-36299
ಕೆಂಪುಗೋಟು	9405-13899
ರಾಶಿ	39509-44299

ಭ್ರಷ್ಟಾಚಾರ ವಿರೋಧಿ ಕಾನೂನು ತಿದ್ದುಪಡಿ ಸರ್ಕಾರದ ಪರ ಪಾಕ್ 'ಸುಪ್ರೀಂ' ತೀರ್ಪು

ಇಸ್ಲಾಮಾಬಾದ್ (ಪಿಟಿಐ): ಭ್ರಷ್ಟಾಚಾರ ವಿರೋಧಿ ಕಾನೂನುಗಳಿಗೆ ತಂದಿರುವ ತಿದ್ದುಪಡಿಗಳನ್ನು ಮರುಸ್ಥಾಪಿಸಲು ಪಾಕಿಸ್ತಾನದ ಸುಪ್ರೀಂ ಕೋರ್ಟ್, ಸರ್ಕಾರದ ಪರವಾಗಿ ಶುಕ್ರವಾರ ಸರ್ವಾನುಮತದ ತೀರ್ಪು ನೀಡಿದೆ. ಈ ತೀರ್ಪು ಶೆಹಬಾಜ್ ಷರೀಫ್ ನೇತೃತ್ವದ ಸರ್ಕಾರಕ್ಕೆ ಪ್ರಮುಖ ಪರಿಹಾರ ಒದಗಿಸಿದೆ.

ಭ್ರಷ್ಟಾಚಾರ ವಿರೋಧಿ ಕಾನೂನುಗಳ ತಿದ್ದುಪಡಿಗಳನ್ನು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ತಿದ್ದುಪಡಿಗ ಳನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ, ಸರ್ಕಾರ ಮತ್ತು ಇತರ ಪಕ್ಷಗಳು ಸಲ್ಲಿಸಿದ್ದ ಮೇಲ್ಮನವಿಗಳನ್ನು ಆಲಿಸಿದ ಐವರು ನ್ಯಾಯಮೂರ್ತಿಗಳಿದ್ದ ಪೀಠವು ಜೂನ್ 6ರಂದು ತೀರ್ಪನ್ನು ಕಾಯ್ದಿರಿಸಿತ್ತು. ಈ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ (ಸಿಜೆಪಿ) ಖಾಜಿ ಫಯೇಜ್ ಇಸಾ ಅವರು ಶುಕ್ರವಾರ ಪ್ರಕಟಿಸಿದರು.

ಈ ತೀರ್ಪಿನಿಂದ ಪ್ರಧಾನಿ ಶೆಹಬಾಜ್ ಮತ್ತು ಅವರ ಹಿರಿಯ ಸಹೋದರ ನವಾಜ್ ಷರೀಫ್ ಹಾಗೂ ದೇಶದ ಹಲವಾರು ಪ್ರಮುಖ ರಾಜಕಾರಣಿಗಳಿಗೆ ಅನುಕೂಲ ಆಗಲಿದೆ.

'ಸಾರ್ಕ್ ಪುನಶ್ಚೇತನ ಅಗತ್ಯ'

ಢಾಕಾ (ಪಿಟಿಐ): ಪ್ರಾದೇಶಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ದಕ್ಷಿಣ ಏಷ್ಯಾದ ಪ್ರಾದೇಶಿಕ ಸಹಕಾರ ಸಂಘದ (ಸಾರ್ಕ್) ಪುನಶ್ಚೇತನ ಅಗತ್ಯ ಎಂದು ಬಾಂಗ್ಲಾದೇಶದ ಮಧ್ಯಂತರ ಸರ್ಕಾರದ ಮುಖ್ಯಸ್ಥ ಮೊಹಮ್ಮದ್ ಯೂನಸ್ ಪ್ರತಿಪಾದಿಸಿದ್ದಾರೆ.

ಎಂಟು ರಾಷ್ಟ್ರಗಳನ್ನು ಒಳಗೊಂಡಿರುವ ಸಾರ್ಕ್‌ಅನ್ನು ದೊಡ್ಡ ಉದ್ದೇಶಕ್ಕಾಗಿ ರಚಿಸಲಾಗಿತ್ತು. ಆದರೆ ಈಗ ಅದು ಕಾಗದದ ಮೇಲೆ ಮಾತ್ರ ಉಳಿದುಕೊಂಡಿದ್ದು, ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಶುಕ್ರವಾರ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

'ಹಲವು ಪ್ರಾದೇಶಿಕ ಸಮಸ್ಯೆಗಳನ್ನು ಪರಿಹರಿಸುವ ಶಕ್ತಿ ಸಾರ್ಕ್‌ಗೆ ಇದೆ. ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಮಹಾ ಅಧಿವೇಶನದ ವೇಳೆ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ, ಸಾರ್ಕ್ ಪುನರುಜ್ಜೀವನದ ಕುರಿತು ಮಾತನಾಡಲು ಬಯಸಿದ್ದೇನೆ' ಎಂದು ತಿಳಿಸಿದರು.

'ಬಹು ದಿನಗಳಿಂದ ಸಾರ್ಕ್ ಶೃಂಗಸಭೆ ನಡೆಯುತ್ತಿಲ್ಲ. ನಾವು ಮತ್ತೆ ಒಗ್ಗಟ್ಟು ಪ್ರದರ್ಶಿಸಬೇಕು. ಸಾರ್ಕ್‌ನ ಎಲ್ಲ ಸದಸ್ಯ ರಾಷ್ಟ್ರಗಳ ಮುಖ್ಯಸ್ಥರನ್ನು ಜತೆಯಲ್ಲಿ ನಿಲ್ಲಿಸಿ ಫೋಟೊ ಶೂಟ್ ಮಾಡಲು ಪ್ರಯತ್ನಿಸುತ್ತೇನೆ' ಎಂದರು.

ಸಾರ್ಕ್ ಬಣವು ಅಫ್ಗಾನಿಸ್ತಾನ, ಬಾಂಗ್ಲಾದೇಶ, ಭೂತಾನ್, ಭಾರತ, ಮಾಲ್ದೀವ್ಸ್, ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾವನ್ನು ಒಳಗೊಂಡಿದೆ.

2014ರಲ್ಲಿ ಕಾಠ್ಮಂಡುವಿನಲ್ಲಿ ನಡೆದ ಸಭೆಯ ಬಳಿಕ ಸಾರ್ಕ್ ದ್ವೈವಾರ್ಷಿಕ ಶೃಂಗಸಭೆ ನಡೆದೇ ಇಲ್ಲ. 2016ರ ಶೃಂಗಸಭೆ ಇಸ್ಲಾಮಾಬಾದ್‌ನಲ್ಲಿ ನಡೆಯಬೇಕಿತ್ತು. ಆದರೆ ಅದೇ ಸಮಯದಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರರ ದಾಳಿ ನಡೆದ ಕಾರಣ ಭಾರತವು ಶೃಂಗಸಭೆಯಲ್ಲಿ ಪಾಲ್ಗೊಳ್ಳದಿರಲು ನಿರ್ಧರಿಸಿತ್ತು. ಅದರ ಬೆನ್ನಲ್ಲೇ ಬಾಂಗ್ಲಾದೇಶ, ಭೂತಾನ್ ಮತ್ತು ಅಫ್ಗಾನಿಸ್ತಾನ ಕೂಡಾ ಹಿಂದೆ ಸರಿದಿದ್ದವು.


ಮೊಹಮ್ಮದ್ ಯೂನಸ್

ರಸ್ತೆಯಲ್ಲಿ ನಮ್ಮನ್ನು ಎಳೆಯುತ್ತಿದ್ದಾಗ ಬ್ರಿಜ್‌ಭೂಷಣ್ ಪರ ಬಿಜೆಪಿ ನಿಂತಿತ್ತು: ವಿನೇಶ್ ವಾಗ್ದಾಳಿ

ಫೋಗಟ್, ಪೂನಿಯಾ ಕಾಂಗ್ರೆಸ್‌ಗೆ ಸೇರ್ಪಡೆ

ಪ್ರಜಾವಾಣಿ ವಾರ್ತೆ/ಪಿಟಿಐ/ ರಾಯಿಟರ್ಸ್

ನವದೆಹಲಿ: ಮಾಜಿ ಕುಸ್ತಿಪಟುಗಳಾದ ವಿನೇಶ್ ಫೋಗಟ್ ಹಾಗೂ ಬಜರಂಗ ಪೂನಿಯಾ ಅವರು ಕಾಂಗ್ರೆಸ್ ಪಕ್ಷಕ್ಕೆ ಶುಕ್ರವಾರ ಸೇರ್ಪಡೆಯಾಗಿದ್ದಾರೆ.

ಈ ಮೂಲಕ ಈ ಇಬ್ಬರು ಮಾಜಿ ಕುಸ್ತಿಪಟುಗಳು ರಾಜಕೀಯವೆಂಬ ಹೊಸ ಅಖಾಡ ಪ್ರವೇಶಿಸಿದ್ದಾರೆ. ಹರಿಯಾಣ ವಿಧಾನಸಭೆಗೆ ಚುನಾವಣೆ ನಡೆಯುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಸೇರುವ ಕುರಿತು ಎದ್ದಿದ್ದ ಊಹಾಪೋಹಗಳಿಗೂ ಇವರು ತೆರೆ ಎಳೆದಿದ್ದಾರೆ.

ರಾಜಾಜಿ ಮಾರ್ಗದಲ್ಲಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ, ಅವರನ್ನು ಭೇಟಿ ಮಾಡಿದ ಫೋಗಟ್ ಹಾಗೂ ಪೂನಿಯಾ, ನಂತರ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು.

ವಾಗ್ದಾಳಿ: ಪಕ್ಷಕ್ಕೆ ಸೇರಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿನೇಶ್ ಫೋಗಟ್,'ಭಾರತೀಯ ಕುಸ್ತಿ ಫೆಡರೇಶನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ವಿರುದ್ಧ ಕುಸ್ತಿಪಟುಗಳುಪ್ರತಿಭಟಿಸುತ್ತಿದ್ದರೆ,ಬಿಜೆಪಿಬ್ರಿಜ್‌ಭೂಷಣ್ ಸಿಂಗ್‌ಗೆ ಬೆಂಬಲ ನೀಡುತ್ತಿತ್ತು. ಕುಸ್ತಿಪಟುಗಳನ್ನು ದೆಹಲಿಯ ರಸ್ತೆಗಳಲ್ಲಿ ಎಳೆದೊಯ್ಯುತ್ತಿದ್ದ ವೇಳೆ ಕಾಂಗ್ರೆಸ್ ಪ್ರತಿಭಟನಕಾರರ ಪರ ನಿಂತಿತ್ತು' ಎಂದರು.

'ನಿಮ್ಮ ಜೊತೆ ಯಾರು ನಿಲ್ಲುತ್ತಾರೆ ಎಂಬುದನ್ನು ಕಠಿಣ ಪರಿಸ್ಥಿತಿಗಳು ಹೇಳುತ್ತವೆ. ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ನಾವು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿದ್ದ ವೇಳೆ, ಬಿಜೆಪಿ ಹೊರತುಪಡಿಸಿ ಇತರ ಎಲ್ಲ ಪಕ್ಷಗಳು ನಮ್ಮ ಬೆಂಬಲಕ್ಕೆ ನಿಂತಿದ್ದವು' ಎಂದು ಹೇಳಿದರು.

'ನಾವು ರಾಜಕೀಯ ಮಾಡಿದ್ದೆವು ಎಂದು ಬಿಜೆಪಿ ಐಟಿ ವಿಭಾಗ ಟೀಕಿಸಿದೆ. ನಾವು ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಬಿಜೆಪಿಯ ಮಹಿಳಾ ಸಂಸದರಿಗೂ ಆಹ್ವಾನ ನೀಡಿದ್ದೆವು. ಆದರೆ, ನಮ್ಮ ಆಹ್ವಾನ ನಿರ್ಲಕ್ಷಿಸಿದರು' ಎಂದು ಫೋಗಟ್ ಹೇಳಿದರು.

ಸ್ಪರ್ಧೆ ಕುರಿತು ಶೀಘ್ರ ನಿರ್ಧಾರ: 'ಫೋಗಟ್ ಮತ್ತು ಪೂನಿಯಾ ವಿಧಾನ ಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುವರೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಪಕ್ಷದ ಕೇಂದ್ರೀಯ ಚುನಾವಣಾ ಸಮಿತಿ ಈ ಕುರಿತು ನಿರ್ಧರಿಸಲಿದೆ' ಎಂದರು.

ಪೂನಿಯಾ ಅವರಿಗೆ ಪಕ್ಷ ಸಂಘಟನೆ ಜವಾಬ್ದಾರಿ ನೀಡಲಾಗುತ್ತದೆ ಎಂಬ ಸುಳಿವು ನೀಡಿದ ಅವರು, 'ರೈತರ ಹಕ್ಕುಗಳಿಗಾಗಿ ಹೋರಾಡುವುದಕ್ಕಾಗಿ ವೇದಿಕೆಯೊಂದನ್ನು ಒದಗಿಸುವಂತೆ ಪೂನಿಯಾ ಕೇಳಿದ್ದಾರೆ. ಇದು ಪಕ್ಷಕ್ಕೂ ಸಂತಸ ತಂದಿದೆ' ಎಂದು ಹೇಳಿದರು.

'ಈ ಹಿಂದೆ ಕುಸ್ತಿಪಟುಗಳು ಪ್ರತಿಭಟಿಸಿದ್ದುಹಾಗೂ ಈಗ ಇವರಿಬ್ಬರು ಕಾಂಗ್ರೆಸ್ ಸೇರಿರುವುದು ಪಿತೂರಿಯ ಭಾಗ' ಎಂಬ ಆರೋಪಗಳನ್ನು ತಳ್ಳಿಹಾಕಿದ ವೇಣುಗೋಪಾಲ್, 'ಅನೇಕ ಅಥ್ಲೀಟ್‌ಗಳು ಮತ್ತು ಒಲಂಪಿಯನ್ನರು ಬೇರೆ ಬೇರೆ ಪಕ್ಷಗಳಲ್ಲಿ ಇದ್ದಾರೆ. ಅದು ಕೂಡ ಪಿತೂರಿಯೇ' ಎಂದು ಪ್ರಶ್ನಿಸಿದರು.



ನವದೆಹಲಿಯಲ್ಲಿರುವ ಎಐಸಿಸಿ ಕೇಂದ್ರ ಕಚೇರಿಯಲ್ಲಿ ಕುಸ್ತಿಪಟುಗಳಾದ ಬಜರಂಗ ಪೂನಿಯಾ ಹಾಗೂ ವಿನೇಶ್ ಫೋಗಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಮ್ಮುಖದಲ್ಲಿ ಶುಕ್ರವಾರ ಕಾಂಗ್ರೆಸ್ ಸೇರಿದರು –ಪಿಟಿಐ ಚಿತ್ರ

ರೈಲ್ವೆ ನೌಕರಿಗೆ ಫೋಗಟ್ ರಾಜೀನಾಮೆ

ನವದೆಹಲಿ: ಮಾಜಿ ಕುಸ್ತಿಪಟು ವಿನೇಶ್ ಫೋಗಟ್ ಅವರು ರೈಲ್ವೆಯಲ್ಲಿನ ನೌಕರಿಗೆ ಶುಕ್ರವಾರ ರಾಜೀನಾಮೆ ನೀಡಿದರು. ತಮ್ಮ ರಾಜೀನಾಮೆಗೆ ವೈಯಕ್ತಿಕ ಕಾರಣಗಳನ್ನು ನೀಡಿದ್ದಾರೆ. ಅವರು ಉತ್ತರ ರೈಲ್ವೆಯಲ್ಲಿ ವಿಶೇಷ ಕರ್ತವ್ಯಾಧಿಕಾರಿ (ಒಎಸ್‌ಡಿ) ಆಗಿ ಸೇವೆ ಸಲ್ಲಿಸುತ್ತಿದ್ದರು.

'ಭಾರತೀಯ ರೈಲ್ವೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ದಿನಗಳು ಸ್ಮರಣೀಯ ಹಾಗೂ ನನ್ನ ಜೀವನದ ಹೆಮ್ಮೆಯ ಕ್ಷಣಗಳಾಗಿದ್ದವು' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನಾನು ಹೊಸ ಇನ್ನಿಂಗ್ಸ್ ಶುರು ಮಾಡುತ್ತಿರುವೆ. ನಾವು ಎದುರಿಸಿದಂಥ ಪರಿಸ್ಥಿತಿಯನ್ನು ಇತರ ಕ್ರೀಡಾಪಟುಗಳು ಎದುರಿಸಬಾರದು ನಾನು ಬಯಸುವೆ
ವಿನೇಶ್ ಫೋಗಟ್, ಮಾಜಿ ಕುಸ್ತಿಪಟು

ತಮ್ಮ ರಾಜೀನಾಮೆ ಪತ್ರವನ್ನೂ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ. ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಅವರು ಕಾಂಗ್ರೆಸ್ ಸೇರ್ಪಡೆಯಾದರು.

ಸೆ.4ರಂದೇ ಫೋಗಟ್‌ಗೆ ನೋಟಿಸ್: ರೈಲ್ವೆ

ನವದೆಹಲಿ: 'ರಾಜಕೀಯ ಪಕ್ಷವೊಂದನ್ನು ಸೇರುವುದಕ್ಕೆ ಮುಂದಾಗಿರುವ ಕುರಿತು ತನ್ನ ನಿಲುವು ಸ್ಪಷ್ಟಪಡಿಸುವಂತೆ' ಸೂಚಿಸಿ ಮಾಜಿ ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ಉತ್ತರ ರೈಲ್ವೆ ಸೆ.4ರಂದೇ ನೋಟಿಸ್ ಜಾರಿ ಮಾಡಿತ್ತು.

'ತನ್ನ ಹುದ್ದೆಗೆ ರಾಜೀನಾಮೆ ನೀಡಿದ ನಂತರ ಫೋಗಟ್ ಅವರಿಗೆ ನೋಟಿಸ್ ನೀಡಲಾಗಿಲ್ಲ' ಎಂದು ಉತ್ತರ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಹಿಮಾಂಶು ಉಪಾಧ್ಯಾಯ ಹೇಳಿದ್ದಾರೆ.

ಈ ಸಂಬಂಧ ಕಾಂಗ್ರೆಸ್ ನಾಯಕ ವೇಣುಗೋಪಾಲ್ ಮಾಡಿದ್ದ ಆರೋಪವನ್ನು ತಳ್ಳಿಹಾಕಿದ್ದಾರೆ.

'ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿರುವ ಫೋಗಟ್ ಕಾಂಗ್ರೆಸ್ ಪಕ್ಷ ಸೇರಲಿದ್ದಾರೆ ಎಂಬುದಾಗಿ ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾದ ಹಿನ್ನೆಲೆಯಲ್ಲಿ ಸೆ. 4ರಂದು ಅವರಿಗೆ ನೋಟಿಸ್ ನೀಡಲಾಗಿತ್ತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸರ್ಕಾರಿ ಉದ್ಯೋಗಿಯಾಗಿ ರಾಜಕೀಯ ಪಕ್ಷವೊಂದನ್ನು ಸೇರುವುದು ಸೇವಾ ನಿಯಮಗಳ ಉಲ್ಲಂಘನೆಯಾಗುವುದು. ಹೀಗಾಗಿ, ಈ ಬಗ್ಗೆ ತನ್ನ ನಿಲುವು ಸ್ಪಷ್ಟಪಡಿಸುವಂತೆ ಸೂಚಿಸಿ ನೋಟಿಸ್ ನೀಡಲಾಗಿತ್ತು' ಎಂದು ಹೇಳಿದ್ದಾರೆ.

ಟೀಕೆ: ಫೋಗಟ್ ಅವರು ಪಕ್ಷ ಸೇರಿದ ನಂತರ ಸುದ್ದಿಗೋಷ್ಠಿ ನಡೆಸಿದ್ದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, 'ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಬುಧವಾರ ಭೇಟಿ ಮಾಡಿದ್ದಕ್ಕಾಗಿ ವಿನೇಶ್ ಫೋಗಟ್ ಅವರಿಗೆ ರೈಲ್ವೆಯು ಶೋಕಾಸ್ ನೋಟಿಸ್ ನೀಡಿತ್ತು' ಎಂದು ಹೇಳಿದ್ದರು.

'ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನನ್ನು ಭೇಟಿ ಮಾಡುವುದು ಅಪರಾಧವೇ ಆಗಿದ್ದಲ್ಲಿ, ರೈಲ್ವೆ ಅಧಿಕಾರಿಗಳು ಫೋಗಟ್ ಅವರನ್ನು ಸೇವೆಯಿಂದ ಬಿಡುಗಡೆ ಮಾಡಬೇಕಿತ್ತೇ ವಿನಾ ಈ ವಿಚಾರವಾಗಿ ರಾಜಕೀಯ ಮಾಡಬಾರದು' ಎಂದಿದ್ದರು.

ನಾವೇಕೆ ಆಕ್ಷೇಪಿಸೋಣ: ಬಿಜೆಪಿ

ಚಂಡೀಗಡ: 'ದೇಶದ ಪುತ್ರಿಯಾಗಿದ್ದ ವಿನೇಶ್ ಕಾಂಗ್ರೆಸ್ ಪುತ್ರಿಯಾಗಲು ಬಯಸಿದಾಗ ನಾವು ಯಾವ ರೀತಿ ಆಕ್ಷೇಪಿಸಲು ಸಾಧ್ಯ' ಎಂದು ಹರಿಯಾಣದ ಬಿಜೆಪಿಯ ಹಿರಿಯ ನಾಯಕ ಅನಿಲ್ ವಿಜ್ ಶುಕ್ರವಾರ ಪ್ರಶ್ನಿಸಿದ್ದಾರೆ.

'ಮೊದಲ ದಿನದಿಂದಲೂ ಈ ಇಬ್ಬರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಕಾಂಗ್ರೆಸ್ ಪ್ರಯತ್ನಿಸುತ್ತಿತ್ತು. ಕಾಂಗ್ರೆಸ್‌ನ ಪ್ರಚೋದನೆಯಿಂದಾಗಿಯೇ ದೆಹಲಿಯಲ್ಲಿ ಕುಸ್ತಿಪಟುಗಳು ಪ್ರತಿಭಟನೆ ಆರಂಭಿಸಿದರು' ಎಂದು ವಿಜ್ ಆರೋಪಿಸಿದರು.

'ಕಾಂಗ್ರೆಸ್ ಚಿತಾವಣೆ ಇರದಿದ್ದಲ್ಲಿ, ಕುಸ್ತಿಪಟುಗಳ ಸಮಸ್ಯೆ ಈಗಾಗಲೇ ಬಗೆಹರಿದಿರುತ್ತಿತ್ತು' ಎಂದೂ ಹೇಳಿದರು.

ರಾಜ್ಯಸಭೆ; ಬಿಜೆಡಿ ಮತ್ತೊಬ್ಬ ಸಂಸದ ರಾಜೀನಾಮೆ, ಬಿಜೆಪಿಗೆ ಸೇರ್ಪಡೆ



ಬಿಜೆಪಿಗೆ ಸೇರ್ಪಡೆಗೊಂಡ ಬಿಜೆಡಿಯ ಮಾಜಿ ರಾಜ್ಯಸಭಾ ಸದಸ್ಯ ಸುಜೀತ್ ಕುಮಾರ್ ಅವರನ್ನು ಕೇಂದ್ರ ಸಚಿವ ಧರ್ಮೇಂದ್ರ ಕುಮಾರ್ ಪ್ರಧಾನ್ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬಿಜು ಜನತಾ ದಳದ (ಬಿಜೆಡಿ) ಮತ್ತೊಬ್ಬ ಸಂಸದ ಸುಜೀತ್ ಕುಮಾರ್ ಅವರು ತಮ್ಮ ರಾಜ್ಯಸಭಾ ಸದಸ್ಯತ್ವಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದು, ನಂತರ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ.

ಇದಕ್ಕೂ ಮೊದಲು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದಕ್ಕಾಗಿ ಬಿಜೆಡಿಯು ಅವರನ್ನು ಪಕ್ಷದಿಂದ ಉಚ್ಚಾಟಿಸಿತ್ತು. ಆ ಬಳಿಕ ಅವರು ರಾಜೀನಾಮೆ ನೀಡಿದ್ದಾರೆ.

ದೆಹಲಿಯಲ್ಲಿರುವ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್, ಪಕ್ಷದ ಒಡಿಶಾ ಉಸ್ತುವಾರಿ ವಿಜಯಪಾಲ್ ಸಿಂಗ್ ತೋಮರ್, ಸಂಸದ ಭರ್ತೃಹರಿ ಮಹ್ತಾಬ್ ಹಾಗೂ ಇತರ ನಾಯಕರ ಸಮ್ಮುಖದಲ್ಲಿ ಅವರು ಬಿಜೆಪಿಗೆ ಸೇರ್ಪಡೆಗೊಂಡರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಪ್ರಧಾನಿ ಅವರ ಕಾರ್ಯ ವೈಖರಿ ಮತ್ತು 2047ರ ವೇಳೆಗೆ ಭಾರತವನ್ನು ಅಭಿವೃದ್ಧಿಹೊಂದಿದ ರಾಷ್ಟ್ರವನ್ನಾಗಿ ಮತ್ತು 2036ರ ವೇಳೆಗೆ ಒಡಿಶಾವನ್ನು ಅಭಿವೃದ್ಧಿಹೊಂದಿದ ರಾಜ್ಯವನ್ನಾಗಿ ಮಾಡುವ ಅವರ ದೂರದೃಷ್ಟಿಯಿಂದ ಪ್ರಭಾವಿತನಾಗಿ ಬಿಜೆಪಿಗೆ ಸೇರಿದ್ದೇನೆ' ಎಂದು ಹೇಳಿದ್ದಾರೆ.

ಬಿಜೆಡಿಯ ರಾಜ್ಯಸಭಾ ಸದಸ್ಯೆಯಾಗಿದ್ದ ಮಮತಾ ಮೊಹಂತಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಗೊಂಡ 37 ದಿನಗಳ ಬಳಿಕ ಸುಜೀತ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದಾರೆ. ಮಮತಾ ಅವರು ಬಿಜೆಪಿ ಟಿಕೆಟ್‌ನಿಂದ ರಾಜ್ಯಸಭೆಗೆ ಮರು ಆಯ್ಕೆಯಾಗಿದ್ದಾರೆ.

ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಿಕ್ ಅವರಿಗೆ ನಿಷ್ಠರಾಗಿದ್ದ 49 ವರ್ಷ ವಯಸ್ಸಿನ ಸುಜೀತ್ ಕುಮಾರ್ ಕೂಡ ಬಿಜೆಪಿ ಟಿಕೆಟ್‌ನಿಂದ ರಾಜ್ಯಸಭೆಗೆ ಆಯ್ಕೆಯಾಗುವ ಸಾಧ್ಯತೆ ಇದೆ.

ಕ್ರಿಕೆಟಿಗ ರವೀಂದ್ರ ಜಡೇಜ ಬಿಜೆಪಿಗೆ

ಜಾಮ್‌ನಗರ (ಪಿಟಿಐ): ಕ್ರಿಕೆಟಿಗ ರವೀಂದ್ರ ಜಡೇಜಾ ಬಿಜೆಪಿ ಸೇರಿದ್ದಾರೆ ಎಂದು ಅವರ ಪತ್ನಿ ಮತ್ತು ಪಕ್ಷದ ಶಾಸಕಿ ರಿವಾಬಾ ಜಡೇಜಾ ತಿಳಿಸಿದ್ದಾರೆ.



ರವೀಂದ್ರ ಜಡೇಜ

'ಎಕ್ಸ್'ನ ತಮ್ಮ ಖಾತೆಯಲ್ಲಿ ರಿವಾಬಾ ಅವರು 'ಸದಸ್ಯತ್ವ ಅಭಿಯಾನ–2024' ಹ್ಯಾಶ್‌ಟ್ಯಾಗ್‌ನೊಂದಿಗೆ ರವೀಂದ್ರ ಜಡೇಜಾ ಅವರ ಸದಸ್ಯತ್ವದ ಫೋಟೊಗಳನ್ನು ಹಂಚಿಕೊಂಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಸೆ. 2ರಂದು ತಮ್ಮ ಸದಸ್ಯತ್ವವನ್ನು ನವೀಕರಿಸುವ ಮೂಲಕ ಬಿಜೆಪಿಯ ಸದಸ್ಯತ್ವ ಅಭಿಯಾನಕ್ಕೆ ರಾಷ್ಟ್ರವ್ಯಾಪಿ ಚಾಲನೆ ನೀಡಿದ ಸಂದರ್ಭ, ಜಡೇಜಾ ಸಹ ಪಕ್ಷದ ಸದಸ್ಯತ್ವ ಪಡೆದರು ಎಂದು ಶಾಸಕರು ಸುದ್ದಿಗಾರರಿಗೆ ತಿಳಿಸಿದರು.

'ಬಿಜೆಪಿಯ ಸದಸ್ಯರಾಗುವಂತೆ ಇತರರನ್ನು ಕೇಳುವುದಕ್ಕೂ ಮೊದಲು, ನಮ್ಮ ಕುಟುಂಬದ ಸದಸ್ಯರನ್ನು ಪಕ್ಷದ ಸದಸ್ಯರನ್ನಾಗಿಸುವುದು ಉತ್ತಮ. ಇತರರು ಅನುಸರಿಸಲು ಇದು ಪ್ರೇರಣೆಯಾಗಲಿದೆ.ಆದ್ದರಿಂದಜಾಮ್‌ನಗರದಲ್ಲಿನನ್ನಪತಿಯನ್ನು ಸದಸ್ಯರನ್ನಾಗಿಸುವ ಮೂಲಕ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದ್ದೇನೆ' ಎಂದು ರಿವಾಬ್ ಹೇಳಿದರು.

'ಜೈಲಲ್ಲಿರುವ ವ್ಯಕ್ತಿಗಳನ್ನೇ ನನ್ನ ಎದುರಾಳಿ ಮಾಡಲಾಗುತ್ತಿದೆ'

ಶ್ರೀನಗರ(ಪಿಟಿಐ): 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ನನ್ನ ದನಿ ಅಡಗಿಸಲು ಯತ್ನಿಸುತ್ತಿದೆ. ಸೆರೆವಾಸದಲ್ಲಿರುವ ವ್ಯಕ್ತಿಯನ್ನು ಲೋಕಸಭಾ ಚುನಾವಣೆ ವೇಳೆ ನನ್ನ ವಿರುದ್ಧ ಕಣಕ್ಕಿಳಿಸಲಾಗಿತ್ತು. ಈಗ, ವಿಧಾನಸಭಾ ಚುನಾವಣೆಯಲ್ಲಿಯೂ ಅಂಥದೇ ತಂತ್ರಗಾರಿಕೆ ನಡೆಸುತ್ತಿದೆ' ಎಂದು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಒಮರ್ ಅಬ್ದುಲ್ಲಾ ಶುಕ್ರವಾರ ಆರೋಪಿಸಿದ್ದಾರೆ.

'ಒಂದಲ್ಲ ಒಂದು ರೀತಿಯ ತಂತ್ರ ಬಳಸಿ, ಕೇಂದ್ರ ಸರ್ಕಾರ ನನ್ನನ್ನು ತುಳಿಯಲು ಯತ್ನಿಸುತ್ತಿರುವ ಕುರಿತು ನನಗೆ ಗೊತ್ತಿತ್ತು. ಆದರೆ, ದೆಹಲಿಯಲ್ಲಿ ಆಡಳಿತ ನಡೆಸುವವರು ಈ ಮಟ್ಟಕ್ಕೆ ಹೋಗುತ್ತಾರೆ ಎಂಬುದಾಗಿ ಅಂದಾಜಿಸಿರಲಿಲ್ಲ' ಎಂದು ಹೇಳಿದ್ದಾರೆ.

ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ, ತಾವು ಸ್ಪರ್ಧಿಸುತ್ತಿರುವ ಗಾಂದರಬಲ್ ಕ್ಷೇತ್ರದಲ್ಲಿ ನಡೆದ ಚುನಾವಣಾ ರ‍್ಯಾಲಿಗಳಲ್ಲಿ ಅವರು ಈ ಆರೋಪ ಮಾಡಿದ್ದಾರೆ.

'ಲೋಕಸಭಾ ಚುನಾವಣೆ ವೇಳೆ, ಬಾರಾಮುಲ್ಲಾ ಕ್ಷೇತ್ರದಲ್ಲಿ ಶೇಖ್ ಅಬ್ದುಲ್ ರಶೀದ್ ನನ್ನ ವಿರುದ್ಧ ಸ್ಪರ್ಧಿಸಿದ್ದರು. ಜೈಲಿನಲ್ಲಿದ್ದುಕೊಂಡೇ ನಾಮಪತ್ರ ಸಲ್ಲಿಸಿದ್ದ ರಶೀದ್, ಧ್ವನಿಮುದ್ರಿತ ಭಾಷಣಗಳ ಮೊರೆ ಹೋಗಿದ್ದರು. ಭಾವನಾತ್ಮಕ ವಿಷಯಗಳನ್ನೇ ಪ್ರಸ್ತಾಪಿಸಿ ಮತ ಕೇಳಿದ್ದರು. ಆ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದರು' ಎಂದು ಹೇಳಿದ್ದಾರೆ.



ಒಮರ್ ಅಬ್ದುಲ್ಲಾ

'ಲೋಕಸಭಾ ಚುನಾವಣೆಯ ಫಲಿತಾಂಶ ಆತಂಕಕಾರಿ ಎಂದು ನಾನು ಭಾವಿಸಿರಲಿಲ್ಲ. ಜೈಲಿನಲ್ಲಿರುವ ಸರ್ಜಾನ್ ಅಹ್ಮದ್ ವಾಗೇ ಅಲಿಯಾಸ್ ಬರ್ಕತಿ ಎಂಬ ವ್ಯಕ್ತಿ ಈ ವಿಧಾನಸಭೆ ಚುನಾವಣೆಯಲ್ಲಿ ನನ್ನ ವಿರುದ್ಧ ಸ್ಪರ್ಧಿಸಲಿದ್ದಾನೆ ಎಂಬ ಬಗ್ಗೆ ವರದಿಗಳು ಬಂದಿವೆ. ವಿಧಾನಸಭೆ ಚುನಾವಣೆಯಲ್ಲಿ ಗಾಂದರಬಲ್ ಕ್ಷೇತ್ರದಿಂದ ಸ್ಪರ್ಧಿಸಲು ನಾನು ತೀರ್ಮಾನಿಸಿದ ನಂತರ ಕಂಡುಬರುತ್ತಿರುವ ಬೆಳವಣಿಗೆಗಳು ನನ್ನ ಯೋಚನೆ ಬದಲಿಸಿವೆ' ಎಂದಿದ್ದಾರೆ.

'ಇವರು ಯಾಕೆ ನನ್ನ ಹಿಂದೆ ಬಿದ್ದಿದ್ದಾರೆ? ನನ್ನ ವಿರುದ್ಧ ಪಿತೂರಿ ನಡೆಯುತ್ತಿದೆಯೇ' ಎಂದು ಪ್ರಶ್ನಿಸಿದ್ದಾರೆ.

'ಇದು ಕಾಕತಾಳೀಯ ಇರಬಹುದು ಎಂದು ಈಗಲೂ ಅನಿಸುತ್ತದೆ. ಈ ಕುರಿತು ನನ್ನ ಕೆಲ ಸಹೋದ್ಯೋಗಿಗಳೊಂದಿಗೆ ಸಮಾಲೋಚನೆ ನಡೆಸಿರುವೆ. ನನ್ನ ವಿರುದ್ಧ ಸ್ವತಂತ್ರ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ತಂತ್ರಗಾರಿಕೆ ಹಿಂದೆ ಕೇಂದ್ರ ಸರ್ಕಾರದ ಪಿತೂರಿ ಇದೆ ಎಂಬುದನ್ನು ಸಾಬೀತು ಮಾಡಲು ಬಯಸಿರುವುದಾಗಿ ಅವರಿಗೆ ತಿಳಿಸಿದ್ದೇನೆ' ಎಂದಿದ್ದಾರೆ.

ವಿಧಿ 370 ಈಗ ಇತಿಹಾಸ –ಅಮಿತ್ ಶಾ

'ಜಮ್ಮು–ಕಾಶ್ಮೀರದಲ್ಲಿ 1990ರ ನಂತರದ ಹತ್ಯೆಗಳ ಕುರಿತು ಶ್ವೇತಪತ್ರ ಪ್ರಕಟಿಸುತ್ತೇವೆ'


ಪ್ರಜಾವಾಣಿ ವಾರ್ತೆ

ಶ್ರೀನಗರ: 'ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದ್ದ ಸಂವಿಧಾನದ 370ನೇ ವಿಧಿ ಈಗ ಇತಿಹಾಸ. ಅದು, ಮತ್ತೆಂದೂ ಮರುಕಳಿಸುವುದಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಇಲ್ಲಿ ಪ್ರತಿಪಾದಿಸಿದರು.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆಗಾಗಿ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ಅವರು, 'ಈಗಿನ ಕೇಂದ್ರಾಡಳಿತ ಪ್ರದೇಶದಲ್ಲಿ 1990ರಿಂದ ಸುಮಾರು 40 ಸಾವಿರ ಹತ್ಯೆಗಳು ಜರುಗಿವೆ. ಈ ಕುರಿತು ಕೇಂದ್ರ ಸರ್ಕಾರ ಶ್ವೇತಪತ್ರ ಹೊರಡಿಸಲಿದೆ' ಎಂದು ಹೇಳಿದರು.

'ಸಂವಿಧಾನದ ವಿಧಿ 370ರಡಿ ವಿದೇಶಾಂಗ ವ್ಯವಹಾರ, ಹಣಕಾಸು, ರಕ್ಷಣೆ ಕ್ಷೇತ್ರ ಹೊರತುಪಡಿಸಿ ಆಂತರಿಕ ವಿಷಯಗಳಲ್ಲಿ ಜಮ್ಮು ಕಾಶ್ಮೀರಕ್ಕೆ ಸ್ವಾಯತ್ತತೆ ನೀಡಲಾಗಿತ್ತು. 2019ರಲ್ಲಿ ಮೋದಿ ನೇತೃತ್ವದ ಸರ್ಕಾರ, ವಿಶೇಷ ಸ್ಥಾನಮಾನ ಕೈಬಿಟ್ಟಿದೆ. ಜಮ್ಮು ಹಾಗೂ ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ಗುರುತಿಸಿದೆ' ಎಂದರು.

370ನೇ ವಿಧಿಯಡಿ ಮತ್ತೆ ವಿಶೇಷ ಸ್ಥಾನಮಾನ ನೀಡಲಾಗುವುದು ಎಂಬ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ವಿರುದ್ಧ ಹರಿಹಾಯ್ದ ಅವರು, 'ಆ ವಿಧಿಯನ್ನು ಈಗ ಶಾಶ್ವತವಾಗಿ ಹೂತು ಹಾಕಲಾಗಿದೆ. ಅದನ್ನು ಮರುಸ್ಥಾಪಿಸುವ ಯಾವುದೇ ಯತ್ನವನ್ನು ಬಿಜೆಪಿ ತಡೆಯಲಿದೆ' ಎಂದು ಸ್ಪಷ್ಟಪಡಿಸಿದರು.



ಭಯೋತ್ಪಾದನೆ ಮತ್ತು ಮಾತುಕತೆ ಒಟ್ಟಿಗೆ ಇರುವುದು ಅಸಾಧ್ಯ. ನೆರೆ ರಾಷ್ಟ್ರ ಪಾಕಿಸ್ತಾನವು ಭಯೋತ್ಪಾದನೆಯನ್ನು ಹತ್ತಿಕ್ಕದಿದ್ದರೆ ಆ ರಾಷ್ಟ್ರದ ಜೊತೆಗೆ ಮಾತುಕತೆ ನಡೆಸುವುದು ಸಾಧ್ಯವೇ ಇಲ್ಲ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಭರವಸೆಯನ್ನು ಕಾಂಗ್ರೆಸ್ ಸಮರ್ಥಿಸಲಿದೆಯೇ ಎಂದು ರಾಹುಲ್‌ಗಾಂಧಿ ಸ್ಪಷ್ಟಪಡಿಸಲಿ ಎಂದು ಸವಾಲೆಸೆದರು. ರಾಹುಲ್ ಗಾಂಧಿ ಅವರು ಎನ್‌ಸಿ ಪ್ರಣಾಳಿಕೆಯನ್ನು ಸಮರ್ಥಿಸುತ್ತಾರೆ. ಆದರೆ, ಅದನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಾರೆ ಎಂದು ಟೀಕಿಸಿದರು.

ಜಮ್ಮು ಮತ್ತು ಕಾಶ್ಮೀರ ಎಂದಿಗೂ ಭಾರತದ ಭಾಗವೇ ಆಗಿದೆ, ಆಗಿರುತ್ತದೆ. ವಿಧಿ 370 ಮತ್ತು ವಿಧಿ 35 ಕೈಬಿಟ್ಟುದರ ಹಿರಿಮೆ ಬಿಜೆಪಿಗೆ ಸಲ್ಲಬೇಕು. ನರೇಂದ್ರ ಮೋದಿ ಅವರ ಆಡಳಿತ ಶುರುವಾದ ಬಳಿಕ ಈ ಪ್ರಾಂತ್ಯದಲ್ಲಿ ಅಭಿವೃದ್ಧಿಯ ಪರ್ವ ಆರಂಭವಾಗಿದೆ ಎಂದು ಹೇಳಿದರು. ಚುನಾವಣಾ ನಂತರದ ಮೈತ್ರಿ ಕುರಿತು ಪ್ರತಿಕ್ರಿಯಿಸಿದ ಅವರು, 'ಬಿಜೆಪಿ ತನ್ನ ಆಯ್ಕೆಯನ್ನು ಮುಕ್ತವಾಗಿಸಿರಿಕೊಂಡಿದೆ. ಆದರೆ, ನ್ಯಾಷನಲ್ ಕಾನ್ಫರೆನ್ಸ್, ಪೀಪಲ್ಸ್ ಡೆಮಾಕ್ರಟಿಕ್ ಪಕ್ಷ ಒಳಗೊಂಡ ಸರ್ಕಾರ ರಚನೆಯಾಗುವುದಿಲ್ಲ' ಎಂದು ಅವರು ತಿಳಿಸಿದರು.

ಭದ್ರತೆ ಪರಿಸ್ಥಿತಿ ಹದಗೆಡುತ್ತಿದೆ ಏಕೆ?

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರ ಕುರಿತ ಕೇಂದ್ರದ ನಿಲುವಿಗೆ ಸಂಬಂಧಿಸಿ ಗೃಹ ಸಚಿವ ಅಮಿತ್ ಶಾ ಅವರನ್ನು ಟೀಕಿಸಿರುವ ಕಾಂಗ್ರೆಸ್, 'ನಿಮ್ಮ ಕಣ್ಗಾವಲಿದ್ದರೂ ಭದ್ರತಾ ಪರಿಸ್ಥಿತಿ ಏಕೆ ಹದಗೆಡುತ್ತಿದೆ' ಎಂದು ಪ್ರಶ್ನಿಸಿದೆ.

'ಜಮ್ಮು ಮತ್ತು ಕಾಶ್ಮೀರದ ರಾಜಕೀಯ ವಿಶೇಷ ಅಧಿಕಾರ ಕುರಿತಂತೆ ಹಸ್ತಕ್ಷೇಪ ನಡೆಸಲು ಕೇಂದ್ರ ಯತ್ನಿಸುತ್ತಿರುವುದೇಕೆ ಎಂದೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ವಿಶೇಷ ಸ್ಥಾನಮಾನ ಅಂತ್ಯವಾಗಿದೆ ಎಂದು ಕೇಂದ್ರ ಹೇಳಿಕೊಂಡರೂ ವಾಸ್ತವವಾಗಿ ಭಿನ್ನ ರಾಜಕೀಯ ವ್ಯವಸ್ಥೆ ರೂಪಿಸಲಾಗಿದೆ. ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವಾಗಿ ತಗ್ಗಿಸಲಾಗಿದೆ. ಚುನಾವಣೆ ರದ್ದುಪಡಿಸಿ, ಸಂವಿಧಾನಿಕ ನೈತಿಕತೆಗೆ ಸಂಬಂಧಿಸಿದ ಎಲ್ಲ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದೂ ಟೀಕಿಸಿದ್ದಾರೆ.

ಡಿಸೆಂಬರ್ 11, 2023ರಂದು ಸಂಸತ್ತಿನಲ್ಲಿಯೇ ಶಾ ಅವರು, ಸೂಕ್ತ ಕಾಲದಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ಪೂರ್ಣ ರಾಜ್ಯದ ಸ್ಥಾನಮಾನವನ್ನು ನೀಡಲಾಗುವುದು ಎಂದು ಅಮಿತ್ ಶಾ ಅವರೇ ಹೇಳಿದ್ದರು ಎಂದು ಅವರು ನೆನಪಿಸಿದ್ದಾರೆ.

2019ರ ನಂತರ ಜಮ್ಮು–ಕಾಶ್ಮೀರದಲ್ಲಿ ಆರ್ಥಿಕ ಪ್ರಗತಿ ಕುಂಠಿತವಾಗಿದೆ. ಇದುವರೆವಿಗೂ 414 ಘಟಕಗಳಷ್ಟೇ ನೋಂದಣಿಯಾಗಿದ್ದು, ವಾಸ್ತವ ಹೂಡಿಕೆಯ ಮೊತ್ತ ಕೇವಲ ₹ 2,518 ಕೋಟಿಯಷ್ಟೇ ಎಂದು ಹೇಳಿದ್ದಾರೆ.

ವಯನಾಡ್–ಕೋಯಿಕ್ಕೋಡ್ ನಡುವೆ ಸುರಂಗ ರಸ್ತೆ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಭೀಕರ ಭೂಕುಸಿತದಿಂದಾಗಿ ಅಪಾರ ಸಾವು–ನೋವು ಸಂಭವಿಸಿದ್ದರೂ, ರಾಜ್ಯದ ವಯನಾಡ್ ಮತ್ತು ಕೋಯಿಕ್ಕೋಡ್ ನಡುವೆ ಎರಡು ಸುರಂಗ ಮಾರ್ಗಗಳ ನಿರ್ಮಾಣ ಯೋಜನೆ ಅನುಷ್ಠಾನಕ್ಕೆ ಕೇರಳ ಸರ್ಕಾರ ಮುಂದಾಗಿದೆ.

ಉದ್ದೇಶಿತ ಸುರಂಗ ಮಾರ್ಗಗಳು ಇತ್ತೀಚೆಗೆ ಭೂಕುಸಿತ ಸಂಭವಿಸಿದ ಸ್ಥಳಕ್ಕೆ ಹತ್ತಿರದಲ್ಲಿಯೇ ನಿರ್ಮಾಣವಾಗಲಿರುವುದು ಮತ್ತಷ್ಟು ಕಳವಳಕಾರಿ ಎಂದು ರಾಜ್ಯ ಪರಿಸರ ಮೌಲ್ಯಮಾಪನ ಸಮಿತಿ ಹೇಳಿದೆ.

ವಯನಾಡ್‌ನ ಮೇಪ್ಪಾಡಿಯಿಂದ ಕೋಯಿಕ್ಕೋಡ್‌ನ ಅನಕ್ಕಂಪೋಯಿಲ್ ವರೆಗೆ, 8.7 ಕಿ.ಮೀ. ಉದ್ದದ ಸುರಂಗ ರಸ್ತೆ ನಿರ್ಮಾಣಕ್ಕೆ ಟೆಂಡರ್ ತೆರೆಯಲಾಗಿದೆ. ಭೋಪಾಲ್ ಮೂಲದ ದಿಲೀಪ್ ಬಿಲ್ಡ್‌ಕಾನ್ ₹1,341 ಕೋಟಿ ಮೊತ್ತದ ಕನಿಷ್ಠ ಬಿಡ್ ಸಲ್ಲಿಸಿದೆ ಎಂದು ತಿಳಿದು ಬಂದಿದೆ.

'ಸುರಂಗ ರಸ್ತೆ ನಿರ್ಮಾಣ ಕಾಮಗಾರಿ ಶೀಘ್ರವೇ ಆರಂಭಗೊಳ್ಳುವ ವಿಶ್ವಾಸವಿದೆ' ಎಂದು ಕೋಯಿಕ್ಕೋಡ್‌ನ ತಿರುವಂಬಾಡಿ ಕ್ಷೇತ್ರದ ಸಿಪಿಎಂ ಶಾಸಕ ಲಿಂಟೊ ಜೋಸೆಫ್ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ಆದರೆ, ಈ ಯೋಜನೆಗೆ ಪರಿಸರ ಅನುಮತಿ ಸಿಗುವುದು ಬಾಕಿ ಇದೆ.

ದುಲೀಪ್ ಟ್ರೋಫಿ ಕ್ರಿಕೆಟ್: ಭಾರತ ಎ ತಂಡಕ್ಕೆ ರಾಹುಲ್, ರಿಯಾನ್ ಆಸರೆ

ನವದೀಪ್ ಸೈನಿ ಆಲ್‌ರೌಂಡ್ ಆಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಮುಷೀರ್ ಖಾನ್ ಜೊತೆಗೆ ದ್ವಿಶತಕದ ಜೊತೆಯಾಟವಾಡುವ ಮೂಲಕ ಭಾರತ ಬಿ ತಂಡಕ್ಕೆ ಉತ್ತಮ ಮೊತ್ತ ಗಳಿಸಿಕೊಟ್ಟ ನವದೀಪ್ ಸೈನಿ, ಬೌಲಿಂಗ್‌ನಲ್ಲಿಯೂ ಮಿಂಚಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಎರಡನೇ ದಿನವಾದ ಶುಕ್ರವಾರ ಮುಷೀರ್ ಮತ್ತು ನವದೀಪ್ ಅವರು 8ನೇ ವಿಕೆಟ್ ಜೊತೆಯಾಟದಲ್ಲಿ 205 ರನ್ ಕಲೆಹಾಕಿದರು. ಅದರಿಂದಾಗಿ ಬಿ ತಂಡವು 116 ಓವರ್‌ಗಳಲ್ಲಿ 321 ರನ್ ಗಳಿಸಿತು. ಅದಕ್ಕುತ್ತರವಾಗಿ ಮಧ್ಯಾಹ್ನ ಬ್ಯಾಟಿಂಗ್ ಮಾಡಿದ ಭಾರತ ಎ ತಂಡಕ್ಕೆ ನವದೀಪ್ ಆರಂಭಿಕ ಪೆಟ್ಟುಕೊಟ್ಟರು. ಮಯಂಕ್ ಅಗರವಾಲ್ ಮತ್ತು ನಾಯಕ ಶುಭಮನ್ ಗಿಲ್ ಅವರ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು.

ಸ್ಥಳೀಯ ಹೀರೊ ಕೆ.ಎಲ್. ರಾಹುಲ್ (ಬ್ಯಾಟಿಂಗ್ 23) ಮತ್ತು ಅಸ್ಸಾಂ ಪ್ರತಿಭೆ ರಿಯಾನ್ ಪರಾಗ್ (ಬ್ಯಾಟಿಂಗ್ 27) ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ 68 ರನ್ ಕಲೆಹಾಕಿದರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಭಾರತ ಎ ತಂಡವು 35 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 134 ರನ್ ಗಳಿಸಿತು. ಬಿ ತಂಡದ ಮೊದಲ ಇನಿಂಗ್ಸ್‌ನ ಮೊತ್ತವನ್ನು ಚುಕ್ತಾ ಮಾಡಲು ಇನ್ನೂ 187 ರನ್ ಗಳಿಸುವ ಸವಾಲು ಗಿಲ್ ಬಳಗದ ಮುಂದೆ ಇದೆ.

ಸೈನಿ ಶೈನಿಂಗ್: ಪಂದ್ಯದ ಮೊದಲ ದಿನವಾದ ಗುರುವಾರ ಬಿ ತಂಡವು 43.5 ಓವರ್‌ಗಳಲ್ಲಿ 94 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡು ಆತಂಕದಲ್ಲಿದ್ದಾಗ ಮುಷೀರ್ ಮತ್ತು ಸೈನಿ ಜೊತೆಗೂಡಿದ್ದರು. ನಂತರದ ಆಟದಲ್ಲಿ ಶತಕ ಪೂರೈಸಿದ್ದ ಮುಷೀರ್ ಮತ್ತು 29 ರನ್ ಗಳಿಸಿದ್ದ ನವದೀಪ್ ಅವರಿಬ್ಬರೂ ಕ್ರೀಸ್‌ನಲ್ಲಿ ಉಳಿದಿದ್ದರು.

ಶುಕ್ರವಾರ ಬೆಳಿಗ್ಗೆ ತಮ್ಮ ಚೆಂದದ ಆಟವನ್ನು ಮುಂದುವರಿಸಿದರು. ಮುಷೀರ್ ದ್ವಿಶತಕ ಪೂರೈಸುವ ವಿಶ್ವಾಸ ಮೂಡಿಸಿದ್ದರು. ವೇಗದ ಬೌಲರ್ ಆಗಿರುವ ಸೈನಿ ನುರಿತ ಬ್ಯಾಟರ್ ಮಾದರಿಯಲ್ಲಿಯೇ ತಾಳ್ಮೆಯಿಂದ ಆಡಿದರು. ಇವರಿಬ್ಬರ ಜೊತೆಯಾಟವನ್ನು ಮುರಿಯಲು ಬೌಲರ್‌ಗಳು ಮಾಡಿದ ಪ್ರಯತ್ನಗಳು ಕೈಗೂಡಿದ್ದು ಊಟದ ವಿರಾಮದ ನಂತರವೇ.

ಪಂದ್ಯದಲ್ಲಿ ಒಟ್ಟು 373 ಎಸೆತಗಳನ್ನು ಎದುರಿಸಿ 181 ರನ್ ಗಳಿಸಿದ ಮುಷೀರ್ ಅವರ ವಿಕೆಟ್ ಗಳಿಸುವಲ್ಲಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಯಶಸ್ವಿಯಾದರು. ನವದೀಪ್ (56; 144ಎಸೆತ, 4X8, 6X1) ಅರ್ಧಶತಕ ಪೂರೈಸಿದರು. ಕೊನೆಯವರಾಗಿ ಔಟಾದರು. ಯಶ್ ದಯಾಳ್ ಕೂಡ 10 ರನ್‌ಗಳ ಕಾಣಿಕೆ ನೀಡಿದರು.

ಬೌಲಿಂಗ್‌ನಲ್ಲಿಯೂ ಮಿಂಚಿದ ಸೈನಿ ಭಾರತ ಬಿ ತಂಡಕ್ಕೆ ಆರಂಭದಲ್ಲಿಯೇ ಯಶಸ್ಸು ತಂದುಕೊಟ್ಟರು. ಇನಿಂಗ್ಸ್‌ನ 14ನೇ ಓವರ್‌ನಲ್ಲಿ ಸೈನಿ ಅವರು ಆಫ್‌ಸ್ಟಂಪ್‌ಗೆ ನೇರವಾಗಿ ಪ್ರಯೋಗಿಸಿದ್ದ ಎಸೆತವನ್ನು ತಪ್ಪಾಗಿ ಅಂದಾಜಿಸಿದ ಗಿಲ್ ಔಟಾದರು. ಚಹಾ ವಿರಾಮದ ನಂತರದ ಅವಧಿಯಲ್ಲಿ ತಾಳ್ಮೆಯಿಂದ ಆಡುತ್ತಿದ್ದ ಮಯಂಕ್ ಅಗರವಾಲ್ ಅವರು ಸೈನಿ ಲೆಗ್ ಸ್ಟಂಪ್ ಲೈನ್‌ನಲ್ಲಿ ಹಾಕಿದ ಎಸೆತವನ್ನು ಕೆಣಕಿದರು. ವಿಕೆಟ್‌ಕೀಪರ್ ರಿಷಭ್ ಪಂತ್ ಚುರುಕಾಗಿ ಜಿಗಿದು ಕ್ಯಾಚ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಬಿ: 116 ಓವರ್‌ಗಳಲ್ಲಿ 321 (ಮುಷೀರ್ ಖಾನ್ 181, ನವದೀಪ್ ಸೈನಿ 56, ಆಕಾಶ್ ದೀಪ್ 60ಕ್ಕೆ4, ಆವೇಶ್ ಖಾನ್ 59ಕ್ಕೆ2, ಖಲೀಲ್ ಅಹಮದ್ 54ಕ್ಕೆ2, ಕುಲದೀಪ್ ಯಾದವ್ 81ಕ್ಕೆ1) **ಭಾರತ ಎ :** 35 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 134 (ಮಯಂಕ್ ಅಗರವಾಲ್ 36, ಶುಭಮನ್ ಗಿಲ್ 25, ರಿಯಾನ್ ಪರಾಗ್ ಬ್ಯಾಟಿಂಗ್ 27, ಕೆ.ಎಲ್. ರಾಹುಲ್ ಬ್ಯಾಟಿಂಗ್ 23, ನವದೀಪ್ ಸೈನಿ 36ಕ್ಕೆ2).



ಭಾರತ ಬಿ ತಂಡದ ನವದೀಪ್ ಸೈನಿ –ಪಿಟಿಐ ಚಿತ್ರ

ರಾಹುಲ್... ರಾಹುಲ್...

ತವರಿನಂಗಳದಲ್ಲಿ ಆಡಲು ಬಂದ ಕೆ.ಎಲ್. ರಾಹುಲ್ ಅವರಿಗೆ ಅಭಿಮಾನಿಗಳಿಂದ ಪ್ರೀತಿಯ ಸ್ವಾಗತ ಲಭಿಸಿತು.

ತಮ್ಮ 'ಗೆಳೆಯ' ಮಯಂಕ್ ಅಗರವಾಲ್ ಅವರು ಔಟಾದಾಗ ರಾಹುಲ್ ಕ್ರೀಸ್‌ಗೆ ಬಂದರು. ಈ ಸಂದರ್ಭದಲ್ಲಿ ಕ್ರೀಡಾಂಗಣದ ಒಂದು ಗ್ಯಾಲರಿಯಲ್ಲಿದ್ದ ಅಭಿಮಾನಿಗಳಿಂದ ಚಪ್ಪಾಳೆಯ ಸ್ವಾಗತ ದೊರೆಯಿತು. ರಾಹುಲ್... ರಾಹುಲ್... ಎಂದು ಕೂಗಿದರು.

ಆರಂಭದಲ್ಲಿ ರಾಹುಲ್ ತುಸು ತಡಬಡಾಯಿಸಿದರು. ನಂತರ ಚೆಂಡಿನ ಚಲನೆಯನ್ನು ಸರಿಯಾಗಿ ಗುರುತಿಸುವಲ್ಲಿ ಯಶಸ್ವಿಯಾಗಿ ಆಡಿದರು. ಅವರಿಗೆ ರಿಯಾನ್ ಉತ್ತಮ ಜೊತೆ ನೀಡಿದರು.

ದೇವದತ್ತ, ಶ್ರೇಯಸ್ ಉತ್ತಮ ಬ್ಯಾಟಿಂಗ್

ಅನಂತಪುರ (ಪಿಟಿಐ): ಕನ್ನಡಿಗ ದೇವದತ್ತ ಪಡಿಕ್ಕಲ್ ಮತ್ತು ನಾಯಕ ಶ್ರೇಯಸ್ ಅಯ್ಯರ್ ಅವರು ಗಳಿಸಿದ ಅರ್ಧಶತಕಗಳ ಬಲದಿಂದ ಭಾರತ ಡಿ ತಂಡವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಪಂದ್ಯದಲ್ಲಿ ಭಾರತ ಸಿ ತಂಡದ ಎದುರು 202 ರನ್‌ಗಳ ಮುನ್ನಡೆ ಸಾಧಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಡಿ ತಂಡವು 164 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಸಿ ತಂಡವು 168 ರನ್ ಗಳಿಸಿ, ಅತ್ಯಲ್ಪ ಮುನ್ನಡೆ ಪಡೆಯಿತು. ಎರಡನೇ ದಿನದಾಟದಲ್ಲಿ ಎರಡನೇ ಇನಿಂಗ್ಸ್ ಆರಂಭಿಸಿದ ಡಿ ತಂಡಕ್ಕೆ ಎದುರಾಳಿ ಬಳಗದ ಮಾನವ ಸುತಾರ (30ಕ್ಕೆ5) ಬಲವಾಗಿ ಕಾಡಿದರು. ಇದರ ನಡುವೆಯೂ ನಾಯಕ ಶ್ರೇಯಸ್ (54; 44ಎ, 4X9, 6X1) ಮತ್ತು ದೇವದತ್ತ (56; 70ಎ, 4X8) ಅರ್ಧಶತಕ ದಾಖಲಿಸಿದರು. ರಿಕಿ ಭುಯ್ ಅವರು ತಾಳ್ಮೆಯ ಆಟವಾಡಿ 91 ಎಸೆತಗಳಲ್ಲಿ 44 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ ಡಿ: 48.3 ಓವರ್‌ಗಳಲ್ಲಿ 164. **ಭಾರತ ಸಿ:** 62.2 ಓವರ್‌ಗಳಲ್ಲಿ 168. **ಎರಡನೇ ಇನಿಂಗ್ಸ್: ಭಾರತ ಡಿ:** 49 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 206 (ಶ್ರೇಯಸ್ ಅಯ್ಯರ್ 54, ದೇವದತ್ತ ಪಡಿಕ್ಕಲ್ 56, ರಿಕಿ ಭುಯ್ 44, ಮಾನವ್ ಸುತಾರ್ 30ಕ್ಕೆ5, ವೈಶಾಖ ವಿಜಯಕುಮಾರ್ 51ಕ್ಕೆ2)



ಶತಕ ಬಾರಿಸಿದ ಒಡಿಶಾ ಕ್ರಿಕೆಟ್ ಸಂಸ್ಥೆ ತಂಡದ ವಿಪ್ಲವ್ ಸಾಮಂತ್ರೆ ಅವರ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಮುನ್ನಡೆಯತ್ತ ಕೋಲ್ಟ್ಸ

ಪ್ರಜಾವಾಣಿ ವಾರ್ತೆ

ಮೈಸೂರು: ಕೆಎಸ್‌ಸಿಎ ಕೋಲ್ಟ್ಸ ತಂಡವು ಕೆ.ಪಿ.ಕಾರ್ತಿಕೇಯ ಅವರ ಸ್ಪಿನ್ ದಾಳಿಯ ಬಲದಿಂದ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸುವತ್ತ ದಾಪುಗಾಲಿಟ್ಟಿದೆ.

ಇಲ್ಲಿನ ಎಸ್‌ಜೆಸಿಇ ಮೈದಾನದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕೋಲ್ಟ್ಸ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 584 ರನ್ ಮೊತ್ತ ಬೆನ್ನತ್ತಿರುವ ಒಡಿಶಾ ತಂಡವು ಮೂರನೇ ದಿನವಾದ ಶುಕ್ರವಾರ 97 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 302 ರನ್ ಗಳಿಸಿತು. ಕೋಲ್ಟ್ಸ ಬೌಲರ್‌ಗಳ ದಾಳಿಯ ಮುಂದೆ ಒಡಿಶಾ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಭೀತಿಯಲ್ಲಿತ್ತು. ಆದರೆ ವಿಪ್ಲವ್ ಸಾಮಂತ್ರೆ (101;174 ಎ, 4x14, 6x1) ಹಾಗೂ ಕಾರ್ತಿಕ್ ಬಿಸ್ವಾಲ್ (85;182 ಎ, 4x7) ಹೋರಾಟ ಮಾಡಿದರು. ಅವರ ಜೊತೆಯಾಟದಲ್ಲಿ 199 ರನ್‌ಗಳು ಬಂದವು. ಇವರಿಬ್ಬರಿಗೂ ಕಾರ್ತಿಕೇಯ ಪೆವಿಲಿಯನ್ ದಾರಿ ತೋರಿಸಿದರು. ಕಾರ್ತಿಕೇಯ ಒಟ್ಟು 37 ರನ್ ನೀಡಿ 4 ವಿಕೆಟ್ ಗಳಿಸಿದರು. 18 ರನ್ ಗಳಿಸಿರುವ ಆಶೀರ್ವಾದ್ ಸ್ವೈನ್ ಹಾಗೂ ಸುನಿಲ್ ಕೌಲ್ (21 ರನ್) ಕ್ರೀಸ್‌ನಲ್ಲಿದ್ದಾರೆ.

ಸಂಕ್ಷಿಪ್ತ ಸ್ಕೋರ್: ಎಸ್‌ಜೆಸಿಇ ಕ್ರೀಡಾಂಗಣ: ಮೊದಲ ಇನ್ನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ: 162.3 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 584 ಡಿಕ್ಲೇರ್. **ಒಡಿಶಾ:** 97 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 302 (ವಿಪ್ಲವ್ ಸಾಮಂತ್ರೆ 101, ಕಾರ್ತಿಕ್ ಬಿಸ್ವಾಲ್ 85. ಕೆ.ಪಿ.ಕಾರ್ತಿಕೇಯ 37ಕ್ಕೆ 4, ಧನುಷ್ ಗೌಡ 30ಕ್ಕೆ 2).

ಬರೋಡಾಕ್ಕೆ ಜಯ

ಮಾನಸಗಂಗೋತ್ರಿಯ ಎಸ್‌ಡಿಎನ್ ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಡಾ.ಡಿ.ವೈ.ಪಾಟೀಲ ಕ್ರಿಕೆಟ್ ಅಕಾಡೆಮಿ ವಿರುದ್ಧ ಬರೋಡಾ ಕ್ರಿಕೆಟ್ ಸಂಸ್ಥೆ ತಂಡವು 73 ರನ್‌ಗಳಿಂದ ಜಯ ಗಳಿಸಿತು.

ಮೂರನೇ ದಿನದ ಆರಂಭಕ್ಕೆ 2 ವಿಕೆಟ್‌ಗೆ 36 ರನ್‌ಗಳಿಸಿದ್ದ ಡಿ.ವೈ. ಪಾಟೀಲ ಅಕಾಡೆಮಿ ತಂಡ ನಿನಾದ್ ರಾತ್ವ (18ಕ್ಕೆ 4) ಹಾಗೂ ಪ್ರದೀಪ್ ಯಾದವ್ (26ಕ್ಕೆ 3) ದಾಳಿಗೆ ತತ್ತರಿಸಿ 98 ರನ್‌ಗೆ ಆಲ್‌ಔಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನ್ನಿಂಗ್ಸ್: ಬರೋಡಾ ಕ್ರಿಕೆಟ್ ಸಂಸ್ಥೆ: 68.2 ಓವರ್‌ಗಳಲ್ಲಿ 181. **ಡಾ. ಡಿ.ವೈ. ಪಾಟೀಲ ಕ್ರಿಕೆಟ್ ಅಕಾಡೆಮಿ:** 42.2 ಓವರ್‌ಗಳಲ್ಲಿ 156; ಎರಡನೇ ಇನ್ನಿಂಗ್ಸ್: **ಬರೋಡಾ:** 45.5 ಓವರ್‌ಗಳಲ್ಲಿ 166; **ಡಿ.ವೈ.ಪಾಟೀಲ ಕ್ರಿಕೆಟ್ ಅಕಾಡೆಮಿ:** 21.3 ಓವರ್‌ಗಳಲ್ಲಿ 98 (ಪುನೀತ್ ದಾತೆ 28. ನಿನಾದ್ ರಾತ್ವ 18ಕ್ಕೆ 4). **ಫಲಿತಾಂಶ:** ಬರೋಡಾ ತಂಡಕ್ಕೆ 73 ರನ್‌ಗಳ ಗೆಲುವು.

ರಾಜಸ್ಥಾನ ರಾಯಲ್ಸ್‌ಗೆ ದ್ರಾವಿಡ್ ಕೋಚ್



ಮುಂಬೈ (ಪಿಟಿಐ): ರಾಹುಲ್ ದ್ರಾವಿಡ್ ಅವರು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಿದ್ದಾರೆ.

ಈಚೆಗೆ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದ ಮುಖ್ಯ ಕೋಚ್ ಆಗಿ ಅವರು ಕಾರ್ಯನಿರ್ವಹಿಸಿದ್ದರು. ಆ ಟೂರ್ನಿಯೊಂದಿಗೆ ಅವರ ಕಾರ್ಯಾವಧಿಯೂ ಮುಕ್ತಾಯವಾಗಿತ್ತು.

'ರಾಯಲ್ಸ್ ತಂಡದ ಮಾಜಿ ನಾಯಕ ಮತ್ತು ಕೋಚ್ ಆಗಿ 2011ರಿಂದ 2015ರವರೆಗೆ ಇದ್ದರು. ಈ ಕೂಡಲೇ ಅವರು ಮತ್ತೆ ರಾಯಲ್ಸ್‌ಗೆ ಮರಳುತ್ತಿದ್ದಾರೆ. ನಿರ್ದೇಶಕ ಕುಮಾರ ಸಂಗಕ್ಕಾರ ಅವರೊಂದಿಗೆ ಫ್ರ್ಯಾಂಚೈಸಿಯ ಸಮಗ್ರ ಕ್ರಿಕೆಟ್ ಯೋಜನೆಯನ್ನು ರೂಪಿಸಲಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

2014ರಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ಕೋಚ್ ಆಗಿದ್ದರು. ಅದರ ನಂತರ ಭಾರತದ 19 ವರ್ಷದೊಳಗಿನವರ ಕ್ರಿಕೆಟ್ ತಂಡದ ಕೋಚ್ ಮತ್ತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ನಿರ್ದೇಶಕರಾಗಿಯೂ ಕಾರ್ಯನಿರ್ವಹಿಸಿದ್ದರು.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್: ಭಾರತಕ್ಕೆ ಆರನೇ ಸ್ವರ್ಣ • ಪದಕಗಳ ಸಂಖ್ಯೆ 26ಕ್ಕೆ ಏರಿಕೆ

ಪ್ರವೀಣ ಕುಮಾರ್ ಚಿನ್ನದ ಜಿಗಿತ

ಪ್ಯಾರಿಸ್ (ಪಿಟಿಐ): ಭಾರತದ ಪ್ರವೀಣ ಕುಮಾರ್ ಅವರು ಪ್ಯಾರಾಲಿಂಪಿಕ್ಸ್ ಪುರುಷರ ಟಿ64 ಹೈಜಂಪ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ದಾಖಲೆಯೊಡನೆ ಚಿನ್ನ ಗೆದ್ದರು. ಮೂರು ವರ್ಷಗಳ ಹಿಂದೆ ಟೋಕಿಯೊ ಕೂಟದಲ್ಲಿ ಬೆಳ್ಳಿ ಗೆದ್ದ ಅವರು ಶುಕ್ರವಾರ ಇಲ್ಲಿ ಸುಧಾರಿತ ಪ್ರದರ್ಶನ ನೀಡಿ ಗಮನ ಸೆಳೆದರು.

21 ವರ್ಷ ವಯಸ್ಸಿನ ಪ್ರವೀಣ, ಆರು ಮಂದಿಯಿದ್ದ ಫೈನಲ್ ಕಣದಲ್ಲಿ 2.08 ಮೀಟರ್ ಜಿಗಿದು ಅಗ್ರಸ್ಥಾನಕ್ಕೇರಿದರು. ನೊಯಿಡಾದ ಪ್ರವೀಣ ಅವರಿಗೆ ಹುಟ್ಟುವಾಗಲೇ ಕಾಲುಗಳು ಗಿಡ್ಡವಾಗಿದ್ದವು.

ಅಮೆರಿಕದ ಡೆರೆಕ್ ಲೊಸಿಡೆಂಟ್ ಅವರು 2.06 ಮೀಟರ್ ಜಿಗಿದು ಬೆಳ್ಳಿ ಪದಕ ಕೊರಳಿಗೆ ಹಾಕಿಕೊಂಡರೆ, ಉಜ್ಬೇಕಿಸ್ತಾನದ ಟೆಮುರ್ಬೆಕ್ ಗಿಯಾಝೋವ್ ಅವರು 2.03 ಮೀ.ನೊಡನೆ ತಮ್ಮ ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿ ಕಂಚಿನ ಪದಕ ತಮ್ಮದಾಗಿಸಿಕೊಂಡರು.

1.89 ಮೀ.ನೊಡನೆ ಪ್ರವೀಣ ಅವರು ಜಿಗಿತ ಆರಂಭಿಸಿದರಲ್ಲದೇ ಮೊದಲ ಸುತ್ತಿನಲ್ಲೇ ಮುನ್ನಡೆ ಸಾಧಿಸಿದರು. ಏಳು ಜಿಗಿತಗಳಲ್ಲೂ ಮುನ್ನಡೆ ಕಾಪಾಡಿಕೊಂಡರು.

ಹೈಜಂಪ್ ಬಾರ್ ಅನ್ನು 2.10 ಮೀ.ಗಳಿಗೆ ಎತ್ತರಿಸಲಾಯಿತು. ಆಗ ಕುಮಾರ್ ಮತ್ತು ಲೊಸಿಡೆಂಟ್ ನಡುವೆ ಅಗ್ರಸ್ಥಾನಕ್ಕೆ ಪೈಪೋಟಿಯಿತ್ತು. ಆದರೆ ಯಾರೂ ಅಷ್ಟು ಎತ್ತರ ಜಿಗಿಯಲಾಗಲಿಲ್ಲ.

2023ರ ವಿಶ್ವ ಚಾಂಪಿಯನ್ ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದ ಪ್ರವೀಣ ಅವರಿಗೂ ಇದು ಜೀವನಶ್ರೇಷ್ಠ ಸಾಧನೆ. ಮೊಣಕಾಲಿಗಿಂತ ಕೆಳಗಿನ ಭಾಗದಲ್ಲಿ ಒಂದು ಅಥವಾ ಎರಡೂ ಕಾಲುಗಳ ಚಲನೆ ಅಥವಾ ಬೇರೆ ಸಮಸ್ಯೆಯಿರುವ ಅಥ್ಲೀಟುಗಳು ಟಿ44 (ಟ್ರ್ಯಾಕ್44) ವಿಭಾಗದಲ್ಲಿ ಸ್ಪರ್ಧಿಸಲು ಅರ್ಹರು. ಪ್ರವೀಣ ಅವರಿಗೆ ಹುಟ್ಟಿನಿಂದಲೇ ಈ ಸಮಸ್ಯೆಯಿತ್ತು. ಪೃಷ್ಠದಿಂದ ಎಡಗಾಲಿಗೆ ಸಂಪರ್ಕಿಸುವ ಮೂಳೆಯ ತೊಂದರೆ ಅವರಿಗಿದೆ.

ಆರಂಭದಲ್ಲಿ ಅವರನ್ನು ಕೀಳರಿಮೆ, ಅಭದ್ರತೆ ಕಾಡುತಿತ್ತು. ಆದರೆ ಅವರು ಮುಕ್ತ ವಿಭಾಗದ ಅಥ್ಲೀಟುಗಳ ಜೊತೆ ಹೈಜಂಪ್‌ನಲ್ಲಿ ಭಾಗವಹಿಸಲು ತೊಡಗಿದ ನಂತರ ಅವರ ಬದುಕಿನ ಚಿತ್ರಣ ಬದಲಾಯಿತು.

ಅಂಗವಿಕಲ ಅಥ್ಲೀಟುಗಳಿಗೆ ಇರುವ ಹೇರಳ ಅವಕಾಶಗಳಿಗೆ ಅವರು ತೆರೆದುಕೊಂಡರು. ಪ್ಯಾರಿಸ್ ಕ್ರೀಡೆಗಳಲ್ಲಿ ಶರದ್ ಕುಮಾರ್ ಮತ್ತು ಮರಿಯಪ್ಪನ್ ತಂಗವೇಲು ನಂತರ ಹೈಜಂಪ್‌ನಲ್ಲಿ ಪದಕ ಗೆದ್ದ ಭಾರತದ ಮೂರನೇ ಹೈಜಂಪ್ ಅಥ್ಲೀಟ್ ಎಂಬ ಗೌರವ ಪ್ರವೀಣ ಅವರದಾಯಿತು.

ಫೈನಲ್‌ಗೆ ಸಿಮ್ರನ್: ಭಾರತದ ಸಿಮ್ರನ್ ಶರ್ಮಾ ಮಹಿಳೆಯರ 200 ಮೀಟರ್ (ಟಿ20) ಓಟದಲ್ಲಿ ಫೈನಲ್ ಪ್ರವೇಶಿಸಿದರು. ಹೀಟ್‌ನಲ್ಲಿ ಅಗ್ರಸ್ಥಾನ ಪಡೆದು ಸೆಮಿಫೈನಲ್ ತಲುಪಿದ್ದ ಅವರು, 25.41 ಸೆಕೆಂಡ್‌ನಲ್ಲಿ ಗುರಿ ತಲುಪಿದರು.



ಭಾರತದ ಪ್ರವೀಣ ಕುಮಾರ್ —ಪಿಟಿಐ ಫೈಲ್ ಚಿತ್ರ

ಸಮಾರೋಪ: ಹರ್ವಿಂದರ್, ಪ್ರೀತಿ ಭಾರತದ ಧ್ವಜಧಾರಿಗಳು

ಪ್ಯಾರಿಸ್ (ಪಿಟಿಐ): ಆರ್ಚರಿಯಲ್ಲಿ ಚಿನ್ನ ಗೆದ್ದು ಇತಿಹಾಸ ನಿರ್ಮಿಸಿದ ಹರ್ವಿಂದರ್ ಸಿಂಗ್ ಮತ್ತು ಸ್ಪ್ರಿಂಟರ್ ಪ್ರೀತಿ ಪಾಲ್ ಅವರು ಭಾನುವಾರ ನಡೆಯುವ ಪ್ಯಾರಾಲಿಂಪಿಕ್ಸ್ ಕ್ರೀಡೆಗಳ ಸಮಾರೋಪ ಸಮಾರಂಭದಲ್ಲಿ ಭಾರತದ ಧ್ವಜಧಾರಿಗಳಾಗಿದ್ದಾರೆ.

2021ರ ಕ್ರೀಡೆಗಳಲ್ಲಿ ಕಂಚಿನ ಪದಕ ಗೆದ್ದ ಹರ್ವಿಂದರ್ ಈ ಬಾರಿಯ ಕ್ರೀಡೆಗಳಲ್ಲಿ ಚಿನ್ನದ ಪದಕಕ್ಕೆ ಯಶಸ್ವಿಯಾಗಿ ಗುರಿಯಿಟ್ಟು ಚಾರಿತ್ರಿಕ ಸಾಧನೆಗೆ ಪಾತ್ರರಾಗಿದ್ದರು. ಪ್ಯಾರಾಲಿಂಪಿಕ್ಸ್‌ಗಳಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಮಹಿಳಾ ಸ್ಪರ್ಧಿ ಎಂಬ ಹಿರಿಮೆ ಉತ್ತರಪ್ರದೇಶದ ಪ್ರೀತಿ ಅವರದು. 23 ವರ್ಷ ವಯಸ್ಸಿನ ಪ್ರೀತಿ, ಮಹಿಳೆಯರ ಟಿ25 ವಿಭಾಗದ 100 ಮತ್ತು 200 ಮೀ. ವಿಭಾಗಗಳಲ್ಲಿ ಕಂಚಿನ ಪದಕ ಗೆದ್ದುಕೊಂಡಿದ್ದರು. ಅದೂ ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆಯೊಡನೆ.

ಪ್ಯಾರಾಲಿಂಪಿಕ್ಸ್ ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	80	63	41	184
2	ಬ್ರಿಟನ್	42	32	24	98
3	ಅಮೆರಿಕ	31	35	18	84
4	ನೆದರ್ಲೆಂಡ್ಸ್	24	14	10	48
14	ಭಾರತ	6	9	11	26

ಸೆಮಿಫೈನಲ್‌ಗೆ ಪ್ರಾಚಿ, ಯಶ್

ಪ್ಯಾರಿಸ್ (ಪಿಟಿಐ): ಭಾರತದ ಕ್ಯಾನೊ ಸ್ಪ್ರಿಂಟರ್‌ಗಳಾದ ಪ್ರಾಚಿ ಯಾದವ್ ಮತ್ತು ಯಶ್ ಕುಮಾರ್ ಕ್ರಮವಾಗಿ ಮಹಿಳೆಯರ ವಿಎಲ್2–200 ಮೀ. ಮತ್ತು ಪುರುಷರ ಕೆಎಲ್1 200 ಮೀ.ನಲ್ಲಿ ಸೆಮಿಫೈನಲ್‌ಗೆ ಪ್ರವೇಶಿಸಿದರು.

ಹೀಟ್‌ಗಳಲ್ಲಿ ಪ್ರಾಚಿ 1ನಿಮಿಷ 06.83 ಸೆಕೆಂಡ್‌ನಲ್ಲಿ ಮತ್ತು ಯಶ್ 1 ನಿ. 03.27 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಫೈನಲ್‌ಗೆ ಸಬಲೆಂಕಾ, ಪೆಗುಲಾ

ಅಮೆರಿಕಾ ಓಪನ್: ಕರೋಲಿನಾ, ನವಾರೊಗೆ ನಿರಾಸೆ

ನ್ಯೂಯಾರ್ಕ್ (ಎಪಿ): ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಆತಿಥೇಯ ದೇಶದ ಜೆಸ್ಸಿಕಾ ಪೆಗುಲಾ ಶುಕ್ರವಾರ ಅಮೆರಿಕಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಫೈನಲ್‌ಗೆ ಲಗ್ಗೆ ಹಾಕಿದರು. ಚೊಚ್ಚಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಾಗಿ ಅವರು ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ ಜೊತೆ ಶನಿವಾರ ಪೈಪೋಟಿ ನಡೆಸುವರು.

ಆರನೇ ಶ್ರೇಯಾಂಕದ ಪೆಗುಲಾ ಸೆಮಿಫೈನಲ್‌ನಲ್ಲಿ 1-6, 6-4, 6-2 ಸೆಟ್‌ಗಳಿಂದ ಶ್ರೇಯಾಂಕರಹಿತ ಆಟಗಾರ್ತಿ ಕರೋಲಿನಾ ಮುಚೋವಾ (ಝೆಕ್ ರಿಪಬ್ಲಿಕ್) ಅವರನ್ನು ಹಿಮ್ಮೆಟ್ಟಿಸಿದರು.

ಆರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಕ್ವಾರ್ಟರ್ ಫೈನಲ್ ಹಂತಕ್ಕೆ ತಲುಪಿ ನಿರಾಸೆ ಅನುಭವಿಸಿದ್ದ 30 ವರ್ಷ ವಯಸ್ಸಿನ ಪೆಗುಲಾ ಇದೇ ಮೊದಲ ಬಾರಿ ನಾಲ್ಕರ ಘಟ್ಟ ಪ್ರವೇಶಿಸಿದ್ದರು. ಈ ಹಾದಿಯಲ್ಲಿ ಅವರು ಅಗ್ರ ಶ್ರೇಯಾಂಕದ ಇಗಾ ಶ್ವಾಂಟೆಕ್ ಅವರಿಗೆ ನೇರ ಸೆಟ್‌ಗಳಿಂದ ಆಘಾತ ನೀಡಿದ್ದರು.

2023ರ ಫ್ರೆಂಚ್ ಓಪನ್ ರನ್ನರ್ ಅಪ್, 52ನೇ ಕ್ರಮಾಂಕದ ಮುಚೋವಾ ಆರಂಭದಲ್ಲಿ ಸಂಪೂರ್ಣ ಹಿಡಿತ ಸಾಧಿಸಿದರು. ಮೊದಲ ಸೆಟ್‌ನ 40 ಪಾಯಿಂಟ್ಸ್‌ಗಳಲ್ಲಿ 30 ಅನ್ನು ಗೆದ್ದು, 28 ನಿಮಿಷದಲ್ಲೇ 1–0 ಮುನ್ನಡೆ ಪಡೆದರು. ಎರಡನೇ ಸೆಟ್‌ನಲ್ಲೂ ಝೆಕ್ ಆಟಗಾರ್ತಿ 3–0ಯಿಂದ ಮುನ್ನಡೆಯೊಂದಿಗೆ ಗೆಲುವಿನತ್ತ ದಾಪುಗಾಲು ಹಾಕುವ ಪ್ರಯತ್ನದಲ್ಲಿದ್ದರು. ಈ ಹಂತದಲ್ಲಿ ಪುಟಿದೆದ್ದ ಪೆಗುಲಾ, ನಿಖರ ಆಟ ಪ್ರದರ್ಶಿಸಿ ಪಂದ್ಯದ ಚಿತ್ರಣವನ್ನೇ ಬದಲಿಸಿದರು. ತವರಿನ ಪ್ರೇಕ್ಷಕರ ಮುಂದೆ ಸೊಗಸಾದ ಫೋರ್‌ಹ್ಯಾಂಡ್ ಹೊಡೆತಗಳ ಮೂಲಕ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು.

ಸಬಲೆಂಕಾಗೆ ಜಯ: ಕಳೆದ ವರ್ಷದ ರನ್ನರ್ ಅಪ್ ಸಬಲೆಂಕಾ ಅವರು ಮತ್ತೊಂದು ಸೆಮಿಫೈನಲ್‌ನಲ್ಲಿ 13ನೇ ಶ್ರೇಯಾಂಕದ ಎಮ್ಮಾ ನವಾರೊ (ಅಮೆರಿಕ) ಅವರನ್ನು 6-3, 7-6 (2) ಸೆಟ್‌ಗಳಿಂದ ಸೋಲಿಸಿದರು.

2023 ಮತ್ತು 2024ರ ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಆಗಿರುವ ಬೆಲಾರಸ್‌ನ 26 ವರ್ಷ ವಯಸ್ಸಿನ ಸಬಲೆಂಕಾ ಮೂರನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯತ್ತ ಹೆಜ್ಜೆಹಾಕಿದರು.

ಮೊದಲ ಸೆಟ್ ಸುಲಭವಾಗಿ ಗೆದ್ದುಕೊಂಡ ಸಬಲೆಂಕಾಗೆ ಎರಡನೇ ಸೆಟ್‌ನಲ್ಲಿ ಪ್ರಬಲ ಸ್ಪರ್ಧೆ ಎದುರಾಯಿತು. ಪ್ರಮುಖ ಟೂರ್ನಿಯೊಂದರಲ್ಲಿ ಇದೇ ಮೊದಲ ಬಾರಿ ಸೆಮಿಫೈನಲ್ ಪ್ರವೇಶಿಸಿದ್ದ ನವಾರೊ ಪ್ರಬಲ ಪೈಪೋಟಿ ನೀಡಿದರು. ಅಂತಿಮವಾಗಿ ಬೆಲಾರಸ್‌ನ ಆಟಗಾರ್ತಿ ಟೈ ಬ್ರೇಕರ್‌ನಲ್ಲಿ ಗೆದ್ದುಕೊಂಡರು.


ಬೆಲಾರಸ್‌ನ ಅರಿನಾ ಸಬಲೆಂಕಾ ಅವರ ಆಟದ ವೈಖರಿ —ಎಎಫ್‌ಪಿ ಚಿತ್ರ

ಡೈಮಂಡ್ ಲೀಗ್ ಫೈನಲ್‌ಗೆ ಚೋಪ್ರಾ

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಇದೇ 13ರಿಂದ ಬ್ರಸೆಲ್ಸ್‌ನಲ್ಲಿ ನಡೆಯಲಿರುವ ಡೈಮಂಡ್ ಲೀಗ್ ಕೂಟದ ಫೈನಲ್‌ಗೆ ಅರ್ಹತೆ ಗಳಿಸಿದ್ದಾರೆ.

14 ಸುತ್ತುಗಳ ಲೀಗ್‌ನಲ್ಲಿ ನೀರಜ್ ನಾಲ್ಕನೇ ಸ್ಥಾನ ಪಡೆದಿದ್ದಾರೆ. ಒಟ್ಟು 14 ಅಂಕಗಳನ್ನೂ ಗಳಿಸಿದ್ದಾರೆ. ದೋಹಾ ಮತ್ತು ಲೂಸಾನ್ ಲೆಗ್‌ಗಳಲ್ಲಿ ಅವರು ಎರಡನೇ ಸ್ಥಾನ ಪಡೆದಿದ್ದರು.

ಗುರುವಾರ ಜ್ಯೂರಿಕ್‌ನಲ್ಲಿ ನಡೆದ ಕೊನೆಯ ಸುತ್ತಿನಲ್ಲಿ ಅವರು ಭಾಗವಹಿಸಲಿಲ್ಲ. ಗ್ರೆನೆಡಾ ದೇಶದ ಆ್ಯಂಡರ್ಸನ್ ಪೀಟರ್ಸ್ ಮತ್ತು ಜರ್ಮನಿಯ ಜೂಲಿಯನ್ ವೆಬರ್ ಅವರು ಕ್ರಮವಾಗಿ 29 ಮತ್ತು 21 ಅಂಕ ಗಳಿಸಿದ್ದಾರೆ. ಅದರೊಂದಿಗೆ ಮೊದಲ ಹಾಗೂ ಎರಡನೇ ಸ್ಥಾನ ಪಡೆದಿದ್ದಾರೆ. ನೀರಜ್ ಅವರಿಗಿಂತ ಎರಡು ಅಂಕ ಹೆಚ್ಚು ಗಳಿಸಿರುವ ಝೆಕ್ ರಿಪಬ್ಲಿಕ್‌ನ ಜೇಕಬ್ ವಾಡ್ಲೆಚ್ ಮೂರನೇ ಸ್ಥಾನದಲ್ಲಿದ್ದಾರೆ. ನೀರಜ್ ಅವರು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಮತ್ತು ಈ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಡೈಮಂಡ್ ಲೀಗ್‌ನಲ್ಲಿ ಅವರು ಈ ಹಿಂದೆ ಚಿನ್ನ (2022) ಹಾಗೂ ಬೆಳ್ಳಿ (2023) ಜಯಿಸಿದ್ದಾರೆ. ಈ ಬಾರಿಯೂ ಪದಕ ಜಯಿಸುವ ಛಲದಲ್ಲಿದ್ದಾರೆ.



ಸಂಕ್ಷಿಪ್ತ ಸುದ್ದಿ

ಶೂಟಿಂಗ್: ಚಿನ್ನ ಗೆದ್ದ ಶೌರ್ಯ

ಹ್ಯಾನೊವರ್, ಜರ್ಮನಿ (ಪಿಟಿಐ): ಭಾರತದ ಶೌರ್ಯ ಸೈನಿ ಅವರು ವಿಶ್ವ ಶ್ರವಣದೋಷವುಳ್ಳವರ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀ. ರೈಫಲ್ 3–ಪೊಷಿಷನ್ಸ್ ಸ್ಪರ್ಧೆಯಲ್ಲಿ 452.4ರ ದಾಖಲೆ ಸ್ಕೋರ್‌ನೊಡನೆ ಶುಕ್ರವಾರ ಚಿನ್ನದ ಪದಕ ಗೆದ್ದರು.

ಅವರು ಅರ್ಹತಾ ಸುತ್ತಿನಲ್ಲಿ 580ರ ಸ್ಕೋರ್‌ನೊಡನೆ ಫೈನಲ್‌ಗೆ ಲಗ್ಗೆಯಿರಿಸಿದ್ದರು. ಇದು ಈ ಕೂಟದಲ್ಲಿ ಸೈನಿ ಗೆದ್ದ ಎರಡನೇ ಪದಕ. ಮೊದಲ ಪದಕವನ್ನು ಅವರು 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಗೆದ್ದಿದ್ದರು.

ಪುರುಷರ 25 ಮೀ. ರ್‍ಯಾಪಿಡ್–ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಚೇತನ್ ಹನಮಂತ ಸಪ್ಕಲ್ ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ರೊನಾಲ್ಡೊ 900 ಗೋಲು ದಾಖಲೆ

ಪ್ಯಾರಿಸ್ (ಎಎಫ್‌ಪಿ): ಪೋರ್ಚುಗಲ್‌ನ ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ತಮ್ಮ ವೃತ್ತಿಜೀವನದಲ್ಲಿ 900 ಗೋಲು ದಾಖಲಿಸುವ ಮೂಲಕ ಹೊಸ ದಾಖಲೆ ಬರೆದಿದ್ದಾರೆ.

ಲಿಸ್ಬನ್‌ನಲ್ಲಿ ಗುರುವಾರ ನಡೆದ ಯುಇಎಫ್‌ಎ ನೇಷನ್ಸ್ ಲೀಗ್ ಗುಂಪು ಹಂತದ ಪಂದ್ಯದಲ್ಲಿ ಕ್ರೊವೇಷ್ಯಾ ವಿರುದ್ಧದ ಪಂದ್ಯದಲ್ಲಿ 39 ವರ್ಷ ವಯಸ್ಸಿನ ರೊನಾಲ್ಡೊ 900ನೇ ಗೋಲು ದಾಖಲಿಸಿದರು. ಈ ವೇಳೆ ಮೈದಾನದಲ್ಲಿ ಸಹ ಆಟಗಾರರು ಮತ್ತು ಅಭಿಮಾನಿಗಳು ಅವರನ್ನು ಅಭಿನಂದಿಸಿದರು. ಪೋರ್ಚುಗಲ್ ಜೆರ್ಸಿಯಲ್ಲಿ ತಂಡದ ಪರ 131ನೇ ಗೋಲಾಗಿದೆ. ಈ ಪಂದ್ಯವನ್ನು 2–1ರಿಂದ ಪೋರ್ಚುಗಲ್ ತಂಡವು ಗೆದ್ದಿತು.



ರೊನಾಲ್ಡೊ ಫುಟ್‌ಬಾಲ್ ಇತಿಹಾಸದಲ್ಲಿ 900 ಗೋಲು ದಾಖಲಿಸಿದ ಏಕೈಕ ಆಟಗಾರ ಎಂಬ ಹಿರಿಮೆಗೆ ಪಾತ್ರವಾದರು. ಅರ್ಜೆಂಟೀನಾದ ತಾರೆ ಲಯೊನಲ್ ಮೆಸ್ಸಿ (842), ಪೋರ್ಚುಗಲ್‌ನ ರೂಬೆನ್ ಡಯಾಸ್ (769), ಬ್ರೆಜಿಲ್‌ನ ಪೆಲೆ (656) ನಂತರದ ಸ್ಥಾನದಲ್ಲಿದ್ದಾರೆ.

ಸಾಫ್ಟ್ ಟೆನಿಸ್: ಭಾರತಕ್ಕೆ ಕಂಚು


ನವದೆಹಲಿ: ದಕ್ಷಿಣ ಕೊರಿಯಾದಲ್ಲಿ ನಡೆದ ಸಾಫ್ಟ್ ಟೆನಿಸ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಚಾರಿತ್ರಿಕ ಸಾಧನೆ ಮಾಡಿದೆ.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಜಯ್ ಮೀನಾ ಮತ್ತು ಆದ್ಯಾ ತಿವಾರಿ ಜೋಡಿ ಕಂಚಿನ ಪದಕ ಗೆಲ್ಲುವ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ.

ಸಾಫ್ಟ್ ಟೆನಿಸ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಗೆದ್ದಿರುವ ಮೊದಲ ಪದಕ ಇದಾಗಿದೆ.

‘ಕ್ರೀಡಾ ತಾಣಕ್ಕೆ ಚೆಪ್ಟೇಗಿ ಹೆಸರು’

ಪ್ಯಾರಿಸ್ (ಎಎಫ್‌ಪಿ): ಪ್ರಿಯಕರನಿಂದ ಹತ್ಯೆಗೊಳಗಾದ ಯುಗಾಂಡದ ಒಲಿಂಪಿಯನ್ ಓಟಗಾರ್ತಿ ರೆಬೆಕಾ ಚೆಪ್ಟೇಗಿ ಅವರಿಗೆ ಗೌರವ ಸಲ್ಲಿಸಲು ನಗರದ ಕ್ರೀಡಾ ತಾಣವೊಂದಕ್ಕೆ ಅವರ ಹೆಸರಿಡಲಾಗುವುದು ಎಂದು ಪ್ಯಾರಿಸ್ ಮೇಯರ್ ಆ್ಯನೆ ಹಿಡಾಲ್ಗೊ ಶುಕ್ರವಾರ ಪ್ರಕಟಿಸಿದ್ದಾರೆ.



ಕಳೆದ ತಿಂಗಳು ಪ್ಯಾರಿಸ್ ಒಲಿಂಪಿಕ್ಸ್‌ನ ಮ್ಯಾರಥಾನ್‌ಲ್ಲಿ ರೆಬೆಕಾ ಮೊದಲ ಬಾರಿ ಭಾಗವಹಿಸಿ 44ನೇ ಸ್ಥಾನ ಗಳಿಸಿದ್ದರು. ಕಳೆದ ಭಾನುವಾರವಷ್ಟೇ ಆಕೆ ಕೆನ್ಯಾದಲ್ಲಿ (ಯುಗಾಂಡ ಗಡಿಗೆ ಸಮೀಪ) ಹೊಸದಾಗಿ ಕಟ್ಟಿದ್ದ ಮನೆಗೆ ನುಗ್ಗಿದ ಪ್ರಿಯತಮ ಡಿಕ್ಸನ್ ಎನ್ಡಿಮಾ ಮರಂಗಾಚ್ ಆಕೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ. ಸುಟ್ಟ ಗಾಯದಿಂದಾಗಿ ರೆಬೆಕಾ ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದರು.

‘ಪ್ಯಾರಿಸ್‌ನಲ್ಲಿ ಆಕೆ ಉತ್ತಮವಾಗಿ ಓಡಿದ್ದಳು. ಆಕೆಯನ್ನು ನೋಡಿದ್ದೆವು. ಆಕೆಯ ಚೆಲುವು, ಶಕ್ತಿ, ಸ್ವಾತಂತ್ರ್ಯ ನೋಡಲಾಗದ ಪ್ರಿಯಕರ ಅಸಹನೆಯಿಂದ ಹತ್ಯೆ ಮಾಡಿದ್ದಾನೆ’ ಎಂದು ಹಿಡಾಲ್ಗೊ ಮಾಧ್ಯಮಗೋಷ್ಠಿ ಯಲ್ಲಿ ತಿಳಿಸಿದ್ದಾರೆ. ‘ಪ್ಯಾರಿಸ್ ಆಕೆಯನ್ನು ಮರೆಯದು. ರೆಬೆಕಾ ನೆನಪಿನಲ್ಲಿ ಕ್ರೀಡಾ ತಾಣವೊಂದಕ್ಕೆ ಅವರ ಹೆಸರು ಇಡಲಾಗುವುದು’ ಎಂದಿದ್ದಾರೆ.

33 ವರ್ಷ ವಯಸ್ಸಿನ ರೆಬೆಕಾ ಕೊಲೆಯನ್ನು ವಿಶ್ವಸಂಸ್ಥೆ ‘ಹಿಂಸಾತ್ಮಕ ಹತ್ಯೆ’ ಎಂದು ಹೇಳಿದೆ.

‘ನಮ್ಮ ಕ್ರೀಡೆಯು ಪ್ರತಿಭಾನ್ವಿತ ಅಥ್ಲೀಟ್ ಒಬ್ಬರನ್ನು ಅತ್ಯಂತ ದುರಂತಮಯವಾಗಿ ಮತ್ತು ಯೋಚಿಸಲಾಗದ ರೀತಿ ಕಳೆದುಕೊಂಡಿದೆ’ ಎಂದು ವರ್ಲ್ಡ್ ಅಥ್ಲೆಟಿಕ್ಸ್ ಅಧ್ಯಕ್ಷ ಸೆಬಾಸ್ಟಿಯನ್ ಕೊ ಪ್ರತಿಕ್ರಿಯಿಸಿದ್ದಾರೆ.

ಸಿಂಗಪುರ ವಿರುದ್ಧ 10 ರನ್‌ಗೆ ಕುಸಿದ ಮಂಗೋಲಿಯಾ

ಬಾಂಗಿ: ಮಂಗೋಲಿಯಾ ತಂಡವು ಸಿಂಗಪುರ ವಿರುದ್ಧದ ಟಿ20 ಅಂತರ ರಾಷ್ಟ್ರೀಯ ಪಂದ್ಯದಲ್ಲಿ ಕೇವಲ 10 ರನ್‌ಗೆ ಆಲೌಟ್ ಆಗಿದೆ.

ಮಲೇಷ್ಯಾದಲ್ಲಿ ಗುರುವಾರ ನಡೆದ ಟಿ20 ವಿಶ್ವಕಪ್ ಏಷ್ಯಾ ಅರ್ಹತಾ ಸುತ್ತಿನ ‘ಎ’ ಗುಂಪಿನ ಪಂದ್ಯದಲ್ಲಿ ಈ ಮೊತ್ತ ದಾಖಲಾಯಿತು. ಟಿ20 ಅಂತರ ರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಾಖಲಾದ ತಂಡವೊಂದರ ಕನಿಷ್ಠ ರನ್ ಇದಾಗಿದೆ.

ಈ ಗುರಿಯನ್ನು ಬೆನ್ನಟ್ಟಿದ ಸಿಂಗಪುರ ತಂಡವು ಒಂದು ವಿಕೆಟ್ ನಷ್ಟಕ್ಕೆ ಕೇವಲ ಐದು ಎಸೆತಗಳಲ್ಲಿ ಗೆಲುವು ದಾಖಲಿಸಿತು.

ಕಳೆದ ವರ್ಷ ಸ್ಪೇನ್ ವಿರುದ್ಧ ಐಲ್ ಆಫ್ ಮ್ಯಾನ್ ತಂಡ ಕೂಡ 10 ರನ್‌ಗೆ ಆಲೌಟ್ ಆಗಿತ್ತು.

ಸಿಂಗಪುರದ ಪರ ಹರ್ಷ ಭಾರದ್ವಾಜ್ ನಾಲ್ಕು ಓವರ್‌ಗಳಲ್ಲಿ ಮೂರು ರನ್ ನೀಡಿ, ಆರು ವಿಕೆಟ್ ಕಬಳಿಸಿದರು.

ಟಿ20 ಕ್ರಿಕೆಟ್: ಕನಿಷ್ಠ ರನ್ ದಾಖಲೆ

ತಂಡ	ರನ್	ಓವರ್	ಎದುರಾಳಿ	ವರ್ಷ
ಮಂಗೋಲಿಯಾ	10	10	ಸಿಂಗಪುರ	2024
ಐಲ್ ಆಫ್ ಮ್ಯಾನ್	10	8.4	ಸ್ಪೇನ್	2023
ಮಂಗೋಲಿಯಾ	12	8.2	ಜಪಾನ್	2024
ಮಂಗೋಲಿಯಾ	17	14.2	ಹಾಂಗ್‌ಕಾಂಗ್	2024
ಟರ್ಕಿ	21	8.3	ಝೆಕ್ ರಿಪಬ್ಲಿಕ್	2019